ಪ್ರಾಥಮಿಕ ಶಿಕ್ಷಣ

ಸಂಪಾದಕರು :

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ಸಂಪುಟ ೭೭	ಜನವರಿ ೧೯೩೯	ವರ್ಷ ೧೮. ಸಂ. ೧೦

ವರ್ಧಾ ಶಿಕ್ಷಣದ ಯೋಜನೆ

ಲೇಖಕರು-- ಶ್ರೀಯುತ ಕೊಪ್ಪಳ ಗುಂಡೇರಾಯರು ಬಿ. ಎ. ಧಾರವಾಡ

ಈ ಮೊದಲೆ ೨, ೩ ಲೇಖನಗಳಲ್ಲಿ ನಮ್ಮ ಓದುಗರಿಗಾಗಿ ವರ್ಧಾಶಿಕ್ಷಣದ ಯೋಜನೆಯನ್ನು ಚೆನ್ನಾಗಿ ವಿವರಿಸಿರುವೆವು. ಇದುವರೆಗೆ ಈ ವಿಷಯವು ವಾದಗ್ರಸ್ತವಾಗಿದ್ದು ಈ ಯೋಜನೆಯು ನಮ್ಮ ಮಕ್ಕಳಿಗೆ ಪ್ರಯೋಜನಕರ ವಾಗುವದೋ ಇಲ್ಲವೋ ಎಂಬ ಬಗ್ಗೆ ಜನರಲ್ಲಿ ಸಂಶಯಗಳಿದ್ದವು.

ಆದರೆ ಈಗ ಮುಂಬಯಿ ಸರಕಾರದವರು ಈ ಯೋಜನೆಯನ್ನು ಬೇಗನೆ ಅಮಲಿನಲ್ಲಿ ಪ್ರಾಯೋಗಿಕವಾಗಿ ತರುವವರಿರುವರು. ಅದಕ್ಕಾಗಿ ಒಬ್ಬ ಸ್ಪೆಶಲ್ ಆಫೀಸರರನ್ನು ನೇಮಿಸಿರುವರು. ಕನ್ನಡ, ಮರಾಠಿ, ಗುಜರಾಥಿ ಈ ಮೂರು ಭಾಷೆಗಳ ಕೇಂದ್ರಗಳಲ್ಲಿ ಈ ಯೋಜನೆಯ ಶಾಲೆಗಳನ್ನು ಸ್ಥಾಪಿಸುವದಕ್ಕೂ ಕೆಲವ್ರಜನ ಶಿಕ್ಷಕರಿಗೆ ವಿಶಿಷ್ಟತರದ ಟ್ರೇನಿಂಗ್ ಕೊಡುವದಕ್ಕೂ ಈಗಿದ್ದ ಟ್ರೇನಿಂಗ್ ಸಂಸ್ಥೆಗಳಲ್ಲಿಯೇ ಪ್ರತ್ಯೇಕ ವರ್ಗಗಳನ್ನು ಸ್ಥಾಪಿಸುವರು. ಈ ಶಿಕ್ಷಕರಿಗೆ ಟ್ರೇನಿಂಗ್ ಕೊಡುವ ಯೋಗ್ಯತೆಯನ್ನು ಪಡೆಯಲು ಕೆಲವ್ರಜನ ಸಾಧ್ಯಮಿಕ ಶಿಕ್ಷಕರನ್ನು ವರ್ಧಾಕೇಂದ್ರಕ್ಕೆ ಕಳಿಸುವರು. ಅವರು ಅಲ್ಲಿ ಶಿಕ್ಷಣಪಡೆದು ಬಂದ ಬಳಿಕ ಇಲ್ಲಿನ ಕೆಲವ್ರಜನ ಪ್ರಾಥಮಿಕ ಶಿಕ್ಷಕರಿಗೆ ಹುಸದಿವಸಗಳ ಕ್ಷಿಪ್ರದ (Short Course) ಶಿಕ್ಷಣಕೊಟ್ಟು ಒರುವ ಜೂನ ತಿಂಗಳೊಳಗಾಗಿಯೇ ವರ್ಧಾಶಿಕ್ಷಣದ ಶಾಲೆಗಳನ್ನು ಹೊರಡಿಸುವರೆಂಬದರಲ್ಲಿ ಇನ್ನು ಯಾರೂ ಸಂಶಯಪಡುವಂತಿಲ್ಲ.

ಶಿಕ್ಷಕಮಾತ್ರರಲ್ಲಿ ಈ ಯೋಜನೆಯು ಹೊಸದೇನು ಅಲ್ಲ; ಇದು ಪ್ರಾಜೆಕ್ಟ ಪದ್ಧತಿಯ ರೂಪಾಂತರವಲ್ಲವೇ ಎಂಬ ಸಂಶಯಗಳಿರುವವು. ಈ ಸಂದೇಹಗಳನ್ನು ದೂರಮಾಡುವದೇ ನಮ್ಮ ಇಂದಿನ ಲೇಖನದ ಉದ್ದೇಶವಿರುವದು.

ಬಾಲಕರಿಗೆ ಕೊಡುವ ಶಿಕ್ಷಣವು ಕೇವಲ ಪುಸ್ತಕ ಪಾಂಡಿತ್ಯದ್ದಿರದೆ ಯಾವು ದಾದರೊಂದು ಚಟುವಟಿಕೆಯನ್ನು ಅವಲಂಬಿಸಿದ್ದಿರಬೇಕು. ಆ ಚಟುವಟಿಕೆಯು ಬಾಲಕರ ಅಭಿರುಚಿಯ ವಿಷಯವಿದ್ದಿರಬೇಕು. ಅದು ವ್ಯರ್ಥ ಕ್ರೀಡಾರೂಪದ್ದಿರದೆ ಯಾವುದಾದರೊಂದು ಉತ್ಪಾದಕವಾದ ಕೈಕೆಲಸವಾಗಿರಬೇಕು. ಎಂಬ ಈ ವಿಷಯಗಳು ಇತ್ತೀಚಿನ ಶಿಕ್ಷಕರಿಗೆ ಚೆನ್ನಾಗಿ ವಿದಿತವಾಗಿರುವವು. ಪ್ರಾಜೆಕ್ಟ ಪದ್ಧತಿಯು ಮೂಲತತ್ವವಾದರೂ ಇದ್ದರಂತೆಯೇ ಇರುವದು. ಬಾಲಕರು ಶಾಲೆಯಲ್ಲಿ ಕಲಿಯುವ ವಿಷಯಗಳು ಒಂದಿಲ್ಲೊಂದು ಚಟುವಟಿಕೆಯ ತಳಹದಿಯ ಮೇಲೆ ಕಟ್ಟಿದವಾಗಿರಬೇಕೆಂದು ಪ್ರಾಜೆಕ್ಟಪದ್ಧತಿಯು ಸಾರಿ ಸಾರಿ ಹೇಳುವದು. ಆದರೆ ಈಗಿದ್ದಂತೆ ಈ ಪದ್ಧತಿಯ ಚಟುವಟಿಕೆಯು ವಿಷಯಜ್ಞಾನಮಾಡಿಕೊಡುವ ಸಾಧನವಾಗಿರದೆ ಅದು ಅಲ್ಲಿಗೇ ಮುಗಿದು ಹೋಗುತ್ತದೆ.

ಯಾವುದೊಂದು ಪ್ರತ್ಯಕ್ಷವಾದ ಕೈಕೆಲಸವನ್ನು ಬಾಲಕನು ಮುಗಿಸಿದ ಕೂಡಲೆ ಆ ವಿಷಯದಲ್ಲಿಯ ಅವನ ಲಕ್ಷ್ಯವು ಮುಗಿದುಹೋಗುವದು. ಅವನು ಅತ್ತಕಡೆಗೆ ನೋಡುವದೇ ಇಲ್ಲೆಂದರೆ ಅತಿಶಯೋಕ್ತಿಯಾಗಲಾರದು. ಇನ್ನು ಅವನು ಕೈಕೊಳ್ಳುವ ಬೇರೆ ಬೇರೆ ಕೈಕೆಲಸಗಳಲ್ಲಿ ಪರಸ್ಪರ ಸಂಬಂಧವೂ ವಿಶೇಷವಾಗಿರುವದಿಲ್ಲ. ಈ ರೀತಿ ಬಾಲಕರಿಗೆ ಅದರಲ್ಲಿ ಕೊನೆಯವರೆಗೆ ಬಾಳುವ ಅಭಿರುಚಿ ಉಳಿಯುವದಿಲ್ಲ. ಕೈಕೆಲಸದಿಂದ ಉತ್ಪನ್ನವಾಗುವ ಪದಾರ್ಥಗಳ ವಿಷಯವಾಗಿಯೂ ಅವನಲ್ಲಿ ಆಸ್ಥೆ ಇಲ್ಲ.

ಆದರೆ ವರ್ಧಾಶಿಕ್ಷಣದ ಯೋಜನೆಯಲ್ಲಿನ ಚಟುವಟಿಕೆಯು ಇಡಿಯ ಶಾಲೆಯ ಆಯುರ್ಮಾನದಲ್ಲೆಲ್ಲ ಏಕಪ್ರಕಾರ ಪ್ರವಾಹರೂಪವಾಗಿರುವದು. ಅದು ಬಾಲಕನ ಈಗಿನ ಮತ್ತು ಮುಂದಿನ ಜೀವನಕ್ರಮಕ್ಕೆ ಹೆಚ್ಚು ಸಂಬಂಧಪಟ್ಟಿರುವದು. ಅವನು ಹುಟ್ಟಿಸುವ ವಸ್ತುವು ಅವನ ಜೀವನಕ್ಕೆ ಅತ್ಯಗತ್ಯವಾಗಿ ಬೇಕಾಗುವ ಒಂದು ಪದಾರ್ಥವಾಗಿರುವದರಿಂದ ಈ ಚಟುವಟಿಕೆಯಷ್ಟು ಸಂಬಂಧಪಟ್ಟದ್ದು ಬೇರೊಂದಿರಲಾರದು. ಪ್ರಾಜೆಕ್ಟ ಪದ್ಧತಿಯ ಎಷ್ಟೋ ಚಟುವಟಿಕೆಗಳಾದರೂ ಜೀವನ ಸಾಮಗ್ರಿಗಳಲ್ಲಿಯವೇ ಇರುವದೇನೋ ನಿಜ. ಆದರೂ ಅವು ಹೆಚ್ಚಾಗಿ ಜೀವನ ಸೌಕರ್ಯ ಸಾಧನಗಳಿರುವವಲ್ಲದೆ ಅತ್ಯಗತ್ಯ ಪದಾರ್ಥಗಳಾಗಿರುವದಿಲ್ಲ. ಆಹಾರ, ಆಶ್ರಯ (ಮನೆ), ಆವರಣ (ಉಡಿಗೆತೊಡಿಗೆ) ಈ ಪದಾರ್ಥಗಳು ಜೀವನಕ್ಕೆ

ಅವಶ್ಯವಾಗಿ ಬೇಕು. ಆದ್ದರಿಂದ ಒಕ್ಕಲುತನ ಬಡಗಿತನ, ನೂಲುವ-ನೆಯ್ಯುವ ಕೆಲಸಗಳಲ್ಲಿ ಯಾವುದಾದರೊಂದು ಚಟುವಟಿಕೆಯನ್ನು ಆರಿಸಿಕೊಳ್ಳಬೇಕೆಂದು ವರ್ಧಾಶಿಕ್ಷಣದ ಯೋಜನೆಯಲ್ಲಿ ಹೇಳಿದ ಉದ್ದೇಶವು ಈಗ ಹೆಚ್ಚು ಸ್ಪಷ್ಟವಾಯಿತೆನ್ನಬಹುದು. ತನ್ನ ಶ್ರಮದಿಂದ ಉತ್ಪನ್ನವಾದ ವಸ್ತುವು ತನಗೆ ಉಪಯೋಗಕ್ಕೆ ಬರುವದು ಇಲ್ಲವೆ ಅದು ವಿನಿಮಯಕ್ಕೆ ಅರ್ಹವಾಗಿರುವದು ಎಂಬ ಸಂಗತಿಯನ್ನು ಬಾಲಕರು ಕಣ್ಣಾರೆ ಕಾಣುವರು. ಇದೊಂದು ವರ್ಧಾಶಿಕ್ಷಣದ ವೈಶಿಷ್ಟ್ಯವೆಂದು ಹೇಳಬಹುದು. ಆದ್ದರಿಂದ ಈ ಚಟುವಟಿಕೆಯಲ್ಲಿ ಅವನ ಆಸ್ಥೆಯು ಕೊನೆಯವರೆಗೆ ಅಳಿಯದೆ ಉಳಿಯುವದು. ಮತ್ತು ಶಿಕ್ಷಣದಲ್ಲಿ ಅವನು ಪ್ರಗತಿಹೊಂದಿದಂತೆ ಅದು ಬೆಳೆಯುವದು. ಈ ಕಾರಣದಿಂದ ಅವನಲ್ಲಿ ಆತ್ಮವಿಶ್ವಾಸವುಂಟಾಗಿ ಬಾಲಕನು ತನ್ನ ಉಪಜೀವನಕ್ಕೆ ಸಮರ್ಥನಾಗುವನು.

ಬಾಲಕನ ಮುಖ್ಯ ಮೂಲಭೂತವಾದ ಬೇಡಿಕೆಗಳ ಮೇಲೆಯೇ ಈ ಕೇಂದ್ರಸ್ಥವಾದ ಕೈಕೆಲಸವು ಹೇಗೆ ಅವಲಂಬಿಸಿದೆ ಎಂಬದನ್ನು ಕುರಿತು ವಿಚಾರಿಸುವಾ; ಮೊದಮೊದಲು ನೂಲುವ ನೆಯ್ಯುವ ಮೊದಲಾದ ಯಾವದೊಂದು ಕೆಲಸವು ನವೀನವಾದುದರಿಂದ ಅವನಲ್ಲಿ ಅಭಿರುಚಿ ಮೂಡುವದು. ಮುಂದೆ ಮುಂದೆ ಅದರಿಂದ ಉತ್ಪನ್ನವಾಗುವ ಪದಾರ್ಥವು ತನ್ನ ಬೇಡಿಕೆಯ ಅವಶ್ಯವಾದ ವಸ್ತುವಿರುವದನ್ನು ನೋಡಿ ಅಭಿರುಚಿಯು ಹೆಚ್ಚುವದು. ಇಲ್ಲವೆ ತನ್ನ ಕೈಗಳಿಂದ ಯಾವದೊಂದು ಕೆಲಸವು ಹುಟ್ಟಬೇಕು ಎಂಬ ವಿಚಾರದಿಂದಲೂ ಅದು ವೃದ್ಧಿಗೊಳ್ಳುವದು. ಈ ಕಾರಣಗಳಿಲ್ಲದಿದ್ದರೂ ಕೇವಲ ಪುಸ್ತಕಾಭ್ಯಾಸದ ಬೇಸರಿಕೆಯನ್ನಾದರೂ ಹೋಗಲಾಡಿಸಲು ಅವನಲ್ಲಿ ಕೈಕೆಲಸಕ್ಕೆ ಪ್ರೇಮವು ಹುಟ್ಟುವದು. ಮಟ್ಟವೊದಲು ಬಾಲಕನಿಗೆ ಅದು ಕ್ರೀಡಾರೂಪವಿರಬಹುದು. ಶಿಕ್ಷಣ ಕ್ರಮದಲ್ಲಿ ಇದು ಬಹಳೇ ಮಹತ್ವದ್ದಿರುವದು. ಈ ಕ್ರೀಡಾರೂಪದ ಚಟುವಟಿಕೆಯ ಮುಖಾಂತರವಾಗಿಯೇ ಶಿಕ್ಷಣವನ್ನು ಕೊಡುವದು ಎಲ್ಲಕ್ಕೂ ಮಿಗಿಲಾದ ಸಾಧನವು.

ಶಿಕ್ಷಕಮಾತ್ರರಿಗೆ ವರ್ಧಾಶಿಕ್ಷಣದ ಯೋಜನೆಯ ಮೇರೆಗೆ ಪ್ರತಿಯೊಂದು ವಿಷಯವನ್ನು ಈ ಕೇಂದ್ರಸ್ಥವಾದ ಕೈಕೆಲಸಕ್ಕೆ ಹೇಗೆ ಸಂಬಂಧಪಡಿಸಬೇಕೆಂಬದೊಂದು ದೊಡ್ಡ ಸಮಸ್ಯೆ. ಝಾಕೀರ ಹುಸೇನಸಮಿತಿಯವರ ಈ ಅಭಿಪ್ರಾಯದ ವಿಷಯವಾಗಿ ಬಹುಜನರಲ್ಲಿ ತೀರ ತಪ್ಪುತಿಳಿವಳಿಕೆಯುಂಟಾಗಿದೆ. ಪ್ರತಿಯೊಂದು ವಿಷಯದ ಪ್ರತಿಯೊಂದು ಪಾಠದ ಸಂಬಂಧವನ್ನು ಹೇಗಾದರೂ ಮಾಡಿ ಎಳೆದು ತರಬೇಕೆಂದು ಅವರ ಅಭಿಪ್ರಾಯವಿಲ್ಲ. ಇಂದಿನ ಕ್ರಮದಲ್ಲಿ ಶಿಕ್ಷಕರಾದ ನಾವು

ಬೇರೆಬೇರೆ ವಿಷಯಗಳು ಭಿನ್ನಭಿನ್ನವಾಗಿವೆ ಎಂದು ತಿಳಿದುಕೊಂಡು ಪರಸ್ಪರ ಸಂಬಂಧವಿಲ್ಲದಂತೆ ಕಲಿಸುತ್ತಿರುವೆವು. ಇತಿಹಾಸ–ಭೂಗೋಲ, ಇತಿಹಾಸ–ಭಾಷಾ, ಕಥೆ–ಕೈಕೆಲಸ, ಕೈಕೆಲಸ–ಡ್ರಾಯಿಂಗ್, ಈ ವಿಷಯಗಳನ್ನು ಕಲಿಸುವಾಗ ಪರಸ್ಪರ ಸಂಬಂಧವಿಟ್ಟು ಕಲಿಸಬಹುದೆಂಬ ಸಂಗತಿಯು ನಮಗೆ ಗೊತ್ತಿದ್ದರೂ ಪ್ರತ್ಯಕ್ಷ ಕಲಿಸುವಾಗ ನಾವು ಮರೆತುಬಿಡುವದಿಲ್ಲವೇ? ಎಲ್ಲೆಲ್ಲಿ ಸ್ವಾಭಾವಿಕವಾಗಿ ಸಂಬಂಧಪಡಿಸಬಹುದೋ ಅಲ್ಲಲ್ಲಿ ಈ ಸಂಬಂಧವು ಹೆಚ್ಚು ನಿಕಟವಾಗುವಂತೆ ಮಾಡಬೇಕೆಂಬುದೇ ಈ ಯೋಜನೆಯ ಮುಖ್ಯೋದ್ದೇಶ. ಇದಲ್ಲದೆ ಬಾಲಕನ ಶಾಲೆ, ಅಲ್ಲಿನ ವಿಷಯ, ಬಾಹ್ಯಪ್ರಪಂಚ ಇವುಗಳಲ್ಲಿ ಪರಸ್ಪರ ಸಂಬಂಧವಿಲ್ಲದಂತೆ ನಮ್ಮ ಶಿಕ್ಷಣಕ್ರಮವು ಸಾಗಿರುವದರಿಂದ ಅಪ್ರಯೋಜನಕರವಾದ ಶಿಕ್ಷಣವು ಶಾಲೆಗಳಲ್ಲಿ ಕೊಡಲ್ಪಡುತ್ತದೆಂಬ ಆರೋಪಕ್ಕೆ ನಾವೆಲ್ಲರೂ ಗುರಿಯಾಗಿರುವೆವು.

ಇಂದಿನ ಅಭ್ಯಾಸಕ್ರಮವು ವಿಷಯಜ್ಞಾನ, ಪರೀಕ್ಷೆ ಇವುಗಳಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿರುವದು. ಈ ಹೊಸ ಯೋಜನೆಯಲ್ಲಿ ಕೊಟ್ಟ ವಿಷಯಗಳೂ ಚಟುವಟಿಕೆಗಳೂ ಜೀವನಕ್ಕೂ ಪ್ರತ್ಯಕ್ಷ ಮಾಡುವ ಕೈಕೆಲಸಕ್ಕೂ ಹೆಚ್ಚು ಸಂಬಂಧಪಟ್ಟಿವೆ. ಇನ್ನು ಕೆಲವು ವಿಷಯಗಳನ್ನು ಕಲಿಸುವಾಗ ಮೂಲ ಕೈಕೆಲಸಕ್ಕೆ ಸಂಬಂಧಪಡಿಸುವದು ಎಂಥ ಶಿಕ್ಷಕನಿಗೂ ಸಾಧ್ಯವಾಗಲಿಕ್ಕಿಲ್ಲ. ಆಗ ಈಗಿನಂತೆ ಕ್ರಮಬದ್ಧರೀತಿಯಿಂದ (formal) ಕಲಿಸಲು ಎಷ್ಟುಮಾತ್ರವು ಅಡ್ಡಿಯಿರುವದಿಲ್ಲ.

ಈ ಯೋಜನೆಯು ಹೊಸದು, ಕ್ರಾಂತಿಕಾರಕವಾದದ್ದು, ಪ್ರಾಯೋಗಿಕ ಸ್ಥಿತಿಯಲ್ಲಿನದುಮಾತ್ರ ಎಂಬ ಸಂಗತಿಗಳನ್ನು ನಾವು ಮರೆಯಕೂಡದು. ಈ ಯೋಜನೆಯ ಮೇರೆಗೆ ಕಲಿಸುವಾಗ ಎಷ್ಟೋ ಬದಲಾವಣೆಗಳನ್ನು ಮಾಡಬೇಕಾಗಬಹುದು. ಅವುಗಳನ್ನೆಲ್ಲ ಯೋಗ್ಯನಾದ ಶಿಕ್ಷಕನು ಮಾಡಿಕೊಳ್ಳಬೇಕೆಂಬದೇ ಮುಖ್ಯ ಉದ್ದೇಶವಿರುವದು.

ಈ ಹೊಸ ಯೋಜನೆಯ ವಿಷಯವಾಗಿ ಇನ್ನೊಂದು ತಪ್ಪುತಿಳಿವಳಿಕೆಯಾಗಿದೆ. ಅದು ಯಾವದೆಂದರೆ, ನೂಲುವ–ನೆಯ್ಯುವ ಕೆಲಸವು ಪ್ರತಿನಿತ್ಯ ಮೂರುಗಂಟೆ ಇಪ್ಪತ್ತು ನಿಮಿಟುಗಳ ವರೆಗೆ ನಡೆಯುವದು ಬಾಲಕರ ಯೋಗ್ಯತೆಗೆ ಮೀರಿದ್ದು, ಬೇಸರಿಕೆಯನ್ನು ಕೂಡಲೆ ಉಂಟುಮಾಡುವಂಥದು. ಬಾಲಕರು ಭೂಗೋಲ ಪ್ರಕೃತಿವಿಮರ್ಶೆ ಮೊದಲಾದ ವಿಷಯಗಳನ್ನು ಶಾಲೆಯ ಕೋಣೆಯಲ್ಲಿ ಕಲಿಯದೆ ಹೊರಗೆ ಹೋಗಿ ಕಲಿತು ಯಾವುದೊಂದು ಚಟುವಟಿಕೆಯಲ್ಲಿ

ತೊಡಗಿದ್ದರೂ ಅದನ್ನು ಕೈಕೆಲಸಕ್ಕೆ ಕಾದಿಟ್ಟವೇಳೆಯಲ್ಲಿಯೇ ಎಣಿಸಬೇಕು. ಪ್ರತ್ಯಕ್ಷ ನೂಲುವ ಕೆಲಸವಾದರೂ ಏಕಪ್ರಕಾರವಾಗಿ ಮೂರು ಮೂರುವರೆ ಗಂಟೆಯ ವರೆಗೆ ಸಾಗದೆ ನಡುನಡುವೆ ಶಾಲೆಯ ವಿಷಯಗಳನ್ನು ಸೇರಿಸಿ ಸಾಗಿಸಬೇಕು. ಹೀಗೆಂದಬಳಿಕ ಆ ಕೆಲಸವು ಶ್ರಮದಾಯಕವಾಗಲಾರದು, ಬೇಸರಿಕೆಯನ್ನುಂಟುಮಾಡದು. ಹಿರಿಯರಾದ ನಾವು ಸಮ್ಮನ್ನಸುಲಕ್ಷಿಸಿ ಬೇಸರಿಕೆಯಾಗಬಹುದೆನ್ನುತ್ತೇವೆ. ಮನೆಯಲ್ಲಿ ಬಾಲಕರು ಒತ್ತಟ್ಟಿಗೆ ಕುಳಿತು ಕೊಳ್ಳದೆ ಯಾವಾಗಲೂ ಸಂಚರಿಸುತ್ತಿರುವರು. ಆಡುವಾಗ, ಓಡುವಾಗ ಸಮಗೆ ಶ್ರಮಬೇಸರಿಕೆಗಳಾಗುತ್ತಿದ್ದರೂ ಚಿಕ್ಕಮಕ್ಕಳಿಗೆ ಹಾಗಾಗಲಾರದು. ಇನ್ನು ಹೀಗೆ ಬಾಲಕರು ಮಾಡುವಾಗ ಯಾರ ನಿರ್ಬಂಧವಿರುವದಿಲ್ಲೆನ್ನಬಹುದು. ಶಾಲೆಯಲ್ಲಾದರೂ ಶಿಕ್ಷಕನು ತಕ್ಕರೀತಿಯಿಂದ ವ್ಯವಸಾಯಾಂತರಗಳನ್ನು ಮಾಡಿದರೆ ಬಾಲಕನಿಗೆ ವಿಶ್ರಾಂತಿಯಾಗದಿರಲಾರದು. ಈಗ ಈ ಯೋಜನೆಯಲ್ಲಿಯೂ ಶಿಕ್ಷಕನೂ ಹೆಚ್ಚು ಯೋಗ್ಯತೆಯುಳ್ಳವನಿರಬೇಕೆಂಬ ಸಂಗತಿಯು ಕಂಡುಬರುವದು. ಪ್ರಾಯೋಗಿಕಮಟ್ಟಿನಲ್ಲಿದ್ದ ಯಾವ ಯೋಜನೆಗಾದರೂ ಈ ಮಾತು ತಕ್ಕುದೇ ಸರಿ.

ಈ ಯೋಜನೆಯನ್ನು ಶಾಲೆಗಳಲ್ಲಿ ಪ್ರಾರಂಭಿಸಲು ಹೆಚ್ಚು ಹಣಬೇಕೆಂಬ ದೊಂದು ದೊಡ್ಡ ಸಮಸ್ಯೆ. ಕೆಲವು ಶಾಲೆಯ ಮನೆಗಳು ಸಾಕಷ್ಟು ದೊಡ್ಡವು ಇಲ್ಲ. ಒಕ್ಕಲುತನಕ್ಕೆ ಬೇಕಾಗುವ ಭೂಮಿಯು ಇಲ್ಲ. "ಮನಸ್ಸಿದ್ದರೆ ಮಾರ್ಗ" ವೆಂಬಂತೆ ಇವುಗಳನ್ನು ಸರಕಾರದವರಾಗಲಿ, ಉದಾರ ಮನಸ್ಸಿನ ದಾತಾರರಾಗಲಿ ಒದಗಿಸಿಕೊಡಬಹುದು. ನಿಜವಾಗಿ ದೇಶೋನ್ನತಿಗೆ ಈ ಯೋಜನೆಯು ಉಪಕಾರಿಯಾಗಿರುವದೆಂಬ ಸಂಗತಿಯು ಮನವರಿಕೆಯಾದರೆ ಈ ಅಡಚಣಿಗಳನ್ನು ದೂರೀಕರಿಸುವದು ದುಸ್ಸಾಧ್ಯವಲ್ಲ. ಏಳುವರ್ಷಗಳ ವರೆಗೆ ಬಾಲಕರು ಶಾಲೆಯಲ್ಲಿ ಕಲಿತರೆಂದರೆ ಅವರು ಮಾಡುವ ಕೈಕೆಲಸದಿಂದ ತುಸಮಟ್ಟಿಗಾದರೂ ಧನೋತ್ಪಾದನವಾಗದೆ ಉಳಿಯದು.

ಈ ಸಂಗತಿಗಳನ್ನೆಲ್ಲ ಪರ್ಯಾಲೋಚಿಸಿ ಈ ಯೋಜನೆಯು ತಕ್ಕದ್ದಾಗಿದೆ, ಪ್ರಯೋಗಕ್ಕೆ ಅರ್ಹವಾಗಿದೆ, ದೇಶೋನ್ನತಿಗೆ ಸಾಧಕವಾಗಿದೆ, ಮಹಾತ್ಮಾ ಗಾಂಧಿಯವರಿಂದ ಜನಿತವಾಗಿದೆ. ಈ ಮೊದಲಾದ ಮಾತುಗಳನ್ನು ನಾವು ಮನಗಂಡು ಅವನ್ನು ಯಶಸ್ವಿಗೊಳಿಸಲು ಸರ್ವತೋಮುಖವಾಗಿ ಪ್ರಯತ್ನ ಬಡುವದೇ ನಮ್ಮ ಆದ್ಯಕರ್ತವ್ಯ.

ಗಣಿತ ವಿಷಯವು

ಶ್ರೀ. ಎಚ್. ಬಿ. ಉಮಡಿಕರ ಎಮ್. ಎ., ಅ. ಮೂ. ಟ್ರೇ. ಸ್ಕೂ. ಧಾರವಾಡ.

ಗಣಿತ ವಿಷಯ ಕಲಿಯಲಿಕ್ಕೆ ಬೇಕಾಗುವಷ್ಟು ಬುದ್ಧಿಯು ಎಲ್ಲ ಹುಡುಗರಿಗೂ ಇರುವದು. ಆದರೆ ಕೆಲಸ, ಅಂತರ, ಜೂಜು, ಗಡಿಯಾರ, ನೀರಿನ ನಳ, ಹುಳಗಳ ಗತಿ, ಇವೇ ಮೊದಲಾದವುಗಳಿಗೆ ಸಂಬಂಧಿಸಿದ ಲೆಕ್ಕಗಳು, ದೊಡ್ಡ ದೊಡ್ಡ ಸಂಖ್ಯೆಗಳ ಅವಿಭಾಜ್ಯ ಅವಯವಗಳನ್ನು ತೆಗೆಯುವದು, ಬೇಗನೆ ಮುಗಿಯುವಂಥ ಲಘುತಮ ಸಾಧಾರಣ ಭಾಜ್ಯ, ದೃಢಭಾಜಕ, ಇಂಥವುಗಳನ್ನು ಕಲಿಯುಬೇಕಾದರೆ ಯಾವ ಹುಡುಗನಿಗೆ ತಲೆಬೇಸರನಿಸದು! ಆದುದರಿಂದ ಪ್ರಾಥಮಿಕ ಶಿಕ್ಷಣದ ಕೆಳಗಿನ ಇಯತ್ತೆಗಳಲ್ಲಿ ಗಣಿತ ವಿಷಯವನ್ನು ವ್ಯಾವಹಾರಿಕತೆಯ ಕಡೆಗೇ ಹೆಚ್ಚು ಲಕ್ಷ ಗೊಟ್ಟು ಕಲಿಸಬೇಕು. ರೇಖಾಗಣಿತದಲ್ಲಿ ಅಳತೆಯಿಂದಲೂ ಬೀಜಗಣಿತದಲ್ಲಿ ಸಮಸ್ಯೆ ಸಮೀಕರಣಗಳಿಂದಲೂ ವಿಷಯವನ್ನು ಆರಂಭಿಸುವಂತೆ ಗಣಿತದಲ್ಲಿ ವ್ಯಾವಹಾರಿಕತೆಯಿಂದಲೇ ವಿಷಯಾರಂಭಿಸಬೇಕಾಗುವದು. ಹುಡುಗನು ಮೊದಲು ಲೆಕ್ಕದ ಉಪಯೋಗವನ್ನು ಕಂಡುಹಿಡಿಯಬೇಕು. ಇಂದು ಕೇವಲ ವ್ಯಾವಹಾರಿಕ ಲೆಕ್ಕಗಳ ಕಡೆಗೆ ಶಿಕ್ಷಣತಜ್ಞರ ಲಕ್ಷ್ಯವು ಹೊರಳಿರುವದರಿಂದ ಗಣಿತದ ಉಪಯೋಗವಿಲ್ಲದ ಭಾಗವನ್ನು ತೆಗೆದೊಗೆಯುಬೇಕಾಗಿದೆ. ಈಗಿನ ಶಿಕ್ಷಕನು ತಾನು ಹಿಂದೆ ಕಲಿತ ಅವ್ಯವಹಾರ್ಯ ವಿಷಯಗಳನ್ನು ಬಿಟ್ಟು ಪ್ರಚಲಿತ ವಿಷಯಗಳನ್ನೇ ಕಲಿಸಬೇಕು. ವ್ಯವಹಾರಕ್ಕೆ ಬೇಕಾಗುವ ಗಣಿತ ಜ್ಞಾನವು ಕೇವಲ ಅಲ್ಪವಾಗಿರುವದರಿಂದ ಪ್ರಾಥಮಿಕ ಶಾಲೆಯ ಹುಡುಗರಿಗೆ ಅಂಕಗಣಿತವನ್ನು ಕಿದು ಇತರ ಗಣಿತ ಜ್ಞಾನವನ್ನು ಮಾಡಿಕೊಡಬಾರದೆಂದು ಕೆಲವರು ಪ್ರತಿಪಾದಿಸಬಹುದು; ಆದರೆ ಇಂದಿನ ಔದ್ಯೋಗಿಕ ಪ್ರಪಂಚದಲ್ಲಿಯು ನಾಗರಿಕತೆಯೂ ಸುಧಾರಿಸಿದ ಮಾನವ ಜನಾಂಗದಲ್ಲಿಯು ವಿಜ್ಞಾನದ ಕಾರ್ಯವೂ ಪ್ರತಿಯೊಬ್ಬ ನಾಗರಿಕನನ್ನು ವ್ಯಾವಹಾರಿಕ ಗಣಿತ ಜ್ಞಾನದ ಕಡೆಗೇ ಮನಸೆಳೆಯುತೊಡಗಿರುವವು. ವಿಜ್ಞಾನದ ಆಧಾರದಿಂದ ಹುಡುಕಿತೆಗೆದ ಯಂತ್ರಗಳಾದ ಮೋಟಾರ, ವಿಮಾನ, ರೆಡಿಯೋ ಮೊದಲಾದವುಗಳ ಸಾಮಾನ್ಯ ಜ್ಞಾನವನ್ನು ಮಾಡಿಕೊಳ್ಳಬೇಕಾದರೂ ಗಣಿತದ ಸಾಮಾನ್ಯ ತತ್ವಗಳೇ ಸಾಧನಗಳಾಗಿರುವವು. ನಾಗರಿಕತೆಯ ಶಾಸ್ತ್ರ ಪರರಾಷ್ಟ್ರೀಯ, ಅಂತರಿಕ ರಾಷ್ಟ್ರೀಯ

ಇವುಗಳ ಹಣದ ವಿಚಾರ ಇವು ನಮ್ಮ ಜೀವನದ ಪ್ರತಿ ದಿವಸಕ್ಕೆ ಸಂಬಂಧಿಸಿದವು ಗಳಾದುದರಿಂದ ಇವುಗಳ ಜ್ಞಾನವು ನಮಗೆ ಅವಶ್ಯಕವಾಗಿದೆ. ಇವುಗಳ ತಿರುಳನ್ನು ತಿಳಿದುಕೊಳ್ಳಬೇಕಾದರೆ ಗಣಿತದ ಹೆಚ್ಚಾದ ಜ್ಞಾನವು ನಮಗೆ ಅವಶ್ಯವಾಗಿದೆ. ಆದುದರಿಂದ ಶಾಲೆಯ ಹುಡುಗರಿಗೆ ಅಂಕಗಣಿತ, ಬೀಜಗಣಿತ, ರೇಖಾಗಣಿತ, ತ್ರಿಕೋನ ಗಣಿತ, ಕ್ಯಾಲ್‌ಕ್ಯೂಲಸದ ಆರಂಭದ ಪಾಠ—ಇವು ಗಳನ್ನು ಕಲಿಸುವದು ವಿಹಿತವಾಗಿದೆ.

೩. ಪರಸ್ಪರ ಸಂಬಂಧ ಮತ್ತು ಏಕೀಕರಣ—

ಅಂಕಗಣಿತ ಬೀಜಗಣಿತ ಮತ್ತು ರೇಖಾಗಣಿತ ಇವುಗಳನ್ನು ನಿಚ್ಚಳವಾಗಿ ವಿಂಗಡಿಸಲು ಬರುವಂತಿಲ್ಲ. ಬೀಜಗಣಿತವು ಅಂಕಗಣಿತದಿಂದಲೆ ಬೆಳೆದು ಬಂದಿದೆ. ಮತ್ತು ರೇಖಾಗಣಿತದಲ್ಲಿಯೂ ತ್ರಿಕೋನಗಣಿತದಲ್ಲಿಯೂ ಲೆಕ್ಕ ಗಳನ್ನು ಬಿಡಿಸುವಾಗ್ಗೆ ಇವೆರಡರ ಉಪಯೋಗವು ಬಹಳವಾಗಿ ಆಗುತ್ತದೆ. (ಗ್ರಾವು) ಲೋಸಿಯ ಅಭ್ಯಾಸದಲ್ಲಿ ಬೀಜಗಣಿತ ರೇಖಾಗಣಿತಗಳೊಳಗಿನ ಸವಿಾಪದ ಸಂಬಂಧವು ಒಡೆದು ಕಾಣುತ್ತದೆ. ಇದಲ್ಲದೆ ಸಾಮಾನ್ಯ ಶಾಸ್ತ್ರಗಳು (Natural science) ಅಂಕಗಣಿತ ಬೀಜಗಣಿತಗಳಿಗೆ ಸಂಬಂಧಿಸಿವೆ. ಮತ್ತು ಅವುಗಳ ಉದಾಹರಣೆಗಳು ಉಪಯೋಗದಲ್ಲಿ ಬರಹತ್ತಿವೆ. ಪದಾರ್ಥ ವಿಜ್ಞಾನ ಶಾಸ್ತ್ರ (Physics) ಇಲ್ಲವೆ ರಸಾಯನ ಶಾಸ್ತ್ರ ಇವುಗಳಲ್ಲಿಯ ಜ್ಞಾನವು ಅವುಗಳ ಸವಿಾಕರಣದ ವರೆಗೆ ಇರುವದು. ಮುಂದೆ ಅಂಕಗಣಿತದಿಂದಲೇ ಎಲ್ಲ ಲೆಕ್ಕಗಳು ಸಾಗುತ್ತವೆ. ಅಂಕಗಣಿತ ಬೀಜಗಣಿತಗಳ ಮೇಲೆ ಬರೆಯಲ್ಪಟ್ಟ ಇತ್ತೀಚೆಗಿನ ಪುಸ್ತಕಗಳು ಭೂಗೋಲವನ್ನೊಳಗೊಂಡು ಇತರ ಎಲ್ಲ ಪದಾರ್ಥ ವಿಜ್ಞಾನ ಶಾಸ್ತ್ರಗಳಲ್ಲಿಯ ಲೆಕ್ಕಗಳನ್ನೇ ಉದಾಹರಣೆಗಾಗಿ ಸಂಗ್ರಹಿಸುತ್ತವೆ. ಹೀಗಾಗುವದರಿಂದ ಲೆಕ್ಕಗಳಿಗೆ ವಸ್ತು ಸ್ವರೂಪವು ಪ್ರಾಪ್ತವಾಗುತ್ತದೆ. ಇದಲ್ಲದೆ ಅಳತೆಯ ಲೆಕ್ಕವನ್ನು ಮಾಡುವಾಗ ಕೈಕೆಲಸವು ಅಂಕಗಣಿತಕ್ಕೆ ಜೋಡಿಸಲ್ಪ ಡುತ್ತದೆ.

೪. ವಸ್ತುಗಳ ಉಪಯೋಗ—

ಬೇರೆ ವಿಷಯಗಳ ಶಿಕ್ಷಣಗಳಲ್ಲಿರುವಂತೆ "ವಸ್ತೂಪಯೋಗ ಶಿಕ್ಷಣ" ಪದ್ಧತಿಯು ಅಂಕಗಣಿತ, ಬೀಜಗಣಿತ, ರೇಖಾಗಣಿತ ಶಿಕ್ಷಣದಲ್ಲಿ ಪ್ರಾಥಮಿಕ ಕಿಂಡರ ಗಾರ್ಡನ್ ವರ್ಗಗಳಿಂದ ಪ್ರಾರಂಭವಾಗಿ ವಿಶ್ವವಿದ್ಯಾಲಯಗಳ ವರೆಗೂ ಬರತೊಡಗಿದೆ. ಅಂಕಗಣಿತದಲ್ಲಿ ವಸ್ತುಗಳ ಉಪಯೋಗವು ಪೂರ್ಣಾಂಕ ಮತ್ತು ಅಪೂರ್ಣಾಂಕ ಸಂಖ್ಯೆಗಳ ಜ್ಞಾನಕ್ಕೆ ವಿಶೇಷ ಸಹಾಯಕಾರಿಯಾಗಿದೆ.

ಉದಾ– ಕಾಳು, ಸರಗಳು, ಫೂಟಪಟ್ಟಿ ಮತ್ತು ಎಂಟರ ಸ್ಕೇಲುಗಳು, ಶೇವು ಮತ್ತು ಇಡುಗಂಟುಗಳು ಇತ್ಯಾದಿ ಲೆಕ್ಕಗಳನ್ನು ಕಲಿಸುವಾಗ, **ಪ್ರತ್ಯಕ್ಷವಾಗಿ** ವ್ಯಾಪಾರಸ್ಥರ ಆಯವ್ಯಯ ಪತ್ರಿಕೆಯನ್ನು, ಸೆಕ್ಯೂರಿಟಿಗಳನ್ನು, ಶೇರುಗಳನ್ನು ತಂದು ತೋರಿಸುವದರಿಂದ ವಿಷಯವು ಬೇಗನೆ ತಿಳಿಯುತ್ತದೆ. ಬಡ್ಡಿಯ೦ದರ, ಸರಾಸರಿ, ಮತ್ತು ಬ್ಯಾಂಕರನ ಮುರುಕೊಳ್ಳುವಬಡ್ಡಿ, ಇವನ್ನು ಹುಡುಗನ ಅನುಭವದಲ್ಲಿರುವ ವ್ಯವಹಾರಗಳಿಂದಲೆ ಹೆಚ್ಚು ಸುಲಭವಾಗಿ ಕಲಿಸಬಹುದು. ಬೀಜಗಣಿತದಲ್ಲಿಯಾದರೂ ಇದೇ ಪದ್ಧತಿಯ ಕಡೆಗೆ ನಮ್ಮ ಒಲವಿದೆ. ಬೇರೀಜ೦, ವಜಾಬಾಕಿ, ಗುಣಾಕಾರ, ಭಾಗಾಕಾರಗಳಲ್ಲಿಯ ಲೆಕ್ಕಗಳನ್ನು ಉದ್ದಗಲಗಳಿಂದಲೂ ಕ್ಷೇತ್ರಗಳಿಂದಲೂ ಮಾಡಿತೋರಿಸಲಿಕ್ಕೆ ಬರುತ್ತದೆ. ಸರಿಸಾಕರಣವನ್ನು ದಿನದ ವ್ಯವಹಾರಗಳ ಉದಾಹರಣೆಗಳಿಂದ ಕಲಿಸಲಕ್ಕೆ ಅನುಕೂಲವದೆ. ರೇಖಾಗಣಿತ ದಲ್ಲಿ ವಸ್ತುಗಳ ಉಪಯೋಗವು ವಿಶೇಷವಾಗಿ ರೂಢಿಯಲ್ಲಿ ಬರತೊಡಗಿರುವದು. ವಸ್ತುಗಳ ಉಪಯೋಗದಿಂದ ತತ್ವದ ನಿಜತ್ವವನ್ನು ಹುಡುಗರಲ್ಲಿ ಬಿಂಬಿಸಲಿಕ್ಕೆ ಬರುವದು. "ತಿರುಗುವುದರ" ಮೇಲೆ ಅವಲಂಬಿಸಿದ ಸಿದ್ಧತೆಯೂ, ಸಮುದ್ರಿ ಭಾಗತೆಯೂ ಇದಕ್ಕೆ ಉದಾಹರಣೆಗಳಾಗಿವೆ. ಕೋನಗಳನ್ನು, ಅವುಗಳ ಅಳತೆ ಯನ್ನು, ಬಹಿರ್ವಕ್ರ ಸರಳ ರೇಖಾಕೃತಿಯ ಬಾಹ್ಯ ಕೋನಗಳ ಬೇರೀಜನ್ನು, ಒಂದೇ ಭುಜದ ಮೇಲೆಯೂ ಎರಡು ಸಮಾಂತರ ಸರಳರೇಖೆಗಳ ನಡುವೆಯೂ ಇರುವ ಎರಡು ತ್ರಿಕೋನಗಳ ಸಮತ್ವವನ್ನು, ಮತ್ತು ಒಂದೆ ವರ್ತುಲಖಂಡ ದಲ್ಲಿರುವ ಕೋನಗಳ ಸಮತ್ವವನ್ನು, ಕಂಪಾಸದ ಉಪಯೋಗದಿಂದ ಮಾಡುವ ಎಷ್ಟೋ ಲೋಕಸದ. ರಚನೆಗಳನ್ನು ಸಪ್ರಯೋಗವಾಗಿ ಸಿದ್ಧಮಾಡಲಿಕ್ಕೆ ಬರುತ್ತದೆ. ಭೂಮಿಯಲ್ಲಿ ಲೋಕಸ ಎಂಬ ವಿಷಯವು ಹುಡುಗರಿಗೆ ಅಗಾಧ ವಾಗಿ ಕಾಣುತ್ತದೆ. ಆದರೆ ವಸ್ತುಗಳ ಉಪಯೋಗವು ಅದನ್ನು ಅತ್ಯಂತ ಮನೋರಂಜಕವಾಗಿ ಮಾಡುತ್ತದೆ.

ಬಾಯಿಲೆಕ್ಕಗಳ ಅವಶ್ಯಕತೆ—

ಅಂಕಗಣಿತದಲ್ಲಿ ಬಾಯಿಲೆಕ್ಕಗಳಿಗೆ ಎಂದಿನಿಂದಲೋ ಮಹತ್ವವು ದೊರೆ ಯುತ್ತ ಒಂದಿದೆ. ಪ್ರಾಥಮಿಕ ಶಾಲೆಗಳಲ್ಲಿ ಬಾಯಿಲೆಕ್ಕಗಳು ಯೋಗ್ಯ ಪದ್ಧತಿ ಯಿಂದ ಕಲಿಸಲ್ಪಡುತ್ತವೆಂದು ಸಾಮಾನ್ಯ ಗ್ರಹಿಕೆಯಿದೆ. ಆದರೆ ಕೆಲವು ವರ್ಷ ಗಳಿಂದ ಪ್ರಾ. ಶಾ. ಗಳಲ್ಲಿ ಇವಕ್ಕೆ ಲಕ್ಷ್ಯಗೊಟ್ಟಷ್ಟು ಮಾಧ್ಯಮಿಕ ಶಾಲೆಗಳಲ್ಲಿ ಅಷ್ಟೊಂದು ಮಹತ್ವವನ್ನು ಕೊಟ್ಟಂತೆ ಕಾಣುವದಿಲ್ಲ. ಆದರೆ ಇತ್ತೀಚೆಗೆ ಮಾಧ್ಯಮಿಕ ಶಾಲೆಗಳಲ್ಲಿಯೂ ಬಾಯಿಲೆಕ್ಕಗಳನ್ನು ಪೆಚ್ಚಾಗಿ ಕಲಿಸತೊಡಗಿ

ದ್ದಾರೆ. ಪ್ರತಿದಿನ ಹುಡಗರು ಹುಡುಗಿಯರು ಕೆಲವು ನಿಮಿಷಗಳ ವರೆಗೆ ಬಾಯಿ ಲೆಕ್ಕಗಳನ್ನು ಏಕೆ ಮಾಡಬಾರದು? ಬೀಜಗಣಿತದಲ್ಲಿ ಸಮೀಕರಣದ ಸಣ್ಣ ಸಣ್ಣ ಬಾಯಿಲೆಕ್ಕಗಳನ್ನು ಹೇಳಿ ಅದನ್ನು ಪಾಟಿಯ ಮೇಲಾಗಲಿ ಕಾಗದದ ಮೇಲಾಗಲಿ ಬರೆದಿಡುವಂತೆ ಮಾಡಬಹುದು. ಈ ಪದ್ಧತಿಯಿಂದ ಎಲ್ಲ ಹುಡುಗ ಹುಡುಗಿಯರು ಒಳ್ಳೇ ಉತ್ಸಾಹದಿಂದ ಲೆಕ್ಕಗಳನ್ನು ಬಿಡಿಸಬಲ್ಲರು. ಇದರಿಂದ ವ್ಯಾವಹಾರಿಕ ಲೆಕ್ಕಗಳಲ್ಲಿ ಚತುರರಾಗುವರು.

ಕಚ್ಚಾ ಕೆಲಸದ ಚಟವನ್ನು ತಪ್ಪಿಸುವದು—

ಹುಡುಗರ ಕಚ್ಚಾ ಕೆಲಸದ ದುಷ್ಟ ಚಟವನ್ನು ತಪ್ಪಿಸಬೇಕು. ಮೊದಲು ಪಾಟಿಯ ಮೇಲಾಗಲಿ ಕಾಗದದ ಜೂರಿನ ಮೇಲಾಗಲಿ ಎಲ್ಲ ಲೆಕ್ಕವನ್ನು ಮಾಡಿ ಆ ಮೇಲೆ ಅದನ್ನು ಪಕ್ಕಾವಹಿಯಲ್ಲಿ ಬರೆಯುವ ಪದ್ಧತಿಯು ಹೊಸ ಪದ್ಧತಿಯಲ್ಲಿ ಅಲ್ಲಗಳೆಯಲ್ಪಟ್ಟಿದೆ. ಈ ಪದ್ಧತಿಯಿಂದ ವೇಳೆ ಮತ್ತು ಶಕ್ತಿಯು ಹಾಳಾಗುತ್ತವೆ. ಜಾಣ ಹುಡುಗರು ಸಹ ಈ ಪದ್ಧತಿಯಿಂದ ಪ್ರಶ್ನಗಳ ಎಲ್ಲ ಉತ್ತರಗಳನ್ನು ಕಚ್ಚಾದಲ್ಲಿಯೇ ಬಿಡಿಸಿ ವೇಳೆಯು ಅಭಾವದ ಮೂಲಕ ಪಕ್ಕಾದಲ್ಲಿ ಲೆಕ್ಕ ಬಿಡಿಸದೆ ಹಾಗೇ ಬಂದ ಎಷ್ಟೋ ಉದಾಹರಣೆಗಳು ಎಷ್ಟೋ ಅವೆ. ವೇಳೆ ದೊರೆದರೂ ಕಚ್ಚಾದ ನಕಲು ಮಾಡುವಾಗ್ಗೆ ನಕಲಿಸಲ್ಲಿ ಅವಿಚಾರದಿಂದ ತಪ್ಪು ಬರೆಯುವಸಂಭವವೂ ಅದೆ. ಹುಡುಗರು ಪಕ್ಕಾದಲ್ಲಿ ಮಾಡಲಿಕ್ಕಾಗದ ಗುಣಾಕಾರ ಭಾಗಾಕಾರಗಳನ್ನಷ್ಟೇ ಎಡದಬದಿಗಾಗಲಿ ಮಾರ್ಜನಿನಲ್ಲಾಗಲಿ ಮಾಡಲು ಅಡ್ಡಿಯಿಲ್ಲ. ಇನ್ನು ಕೆಲವರು ಒಮ್ಮೆಲೆ ಪಕ್ಕಾದಲ್ಲಿ ಬರೆಯುವದಾದರೆ ಬರಹದಲ್ಲಿ ತಪ್ಪುವ ಸಂಭವವದೆ ಎಂದು ಹೇಳುವರು. ಅವರು ತಪ್ಪದಂತೆ ಬರೆಯುವದು ಉತ್ತಮವು. ಬಂದು ವೇಳೆ ತಪ್ಪಿದರೂ ಅಲ್ಲಲ್ಲಿ ಕಾಟುಹೊಡೆದು ಬರೆದರೆ ಅದೇನೂ ತಪ್ಪಲ್ಲ.

ಸ್ವಾವಲಂಬನಕ್ಕೆ ಪ್ರೋತ್ಸಾಹ—

ಈ ವಿಷಯವನ್ನು ಮುಗಿಸುವ ಮೊದಲು ಶಾಲೆಯ ಗಣಿತಕ್ಕೆ ಸಂಬಂಧಿಸಿರದಿದ್ದರೂ ಅದರಲ್ಲಿ ಕಂಡುಬರುವ ಇನ್ನೊಂದು ವಿಷಯವನ್ನು ಕುರಿತು ಇಲ್ಲಿ ತುಸು ಹೇಳಬೇಕಾಗಿದೆ. ಅದಾವುದೆಂದರೆ–ವಿದ್ಯಾರ್ಥಿಗಳಲ್ಲಿ ಸ್ವಾವಲಂಬನವನ್ನು ಹುಟ್ಟಿಸಿ, ಅದರಪ್ರಗತಿಗೆ ಪ್ರೋತ್ಸಾಹಿಸುವದು. ಲೆಕ್ಕವನ್ನು ಮಾಡಲಿಕ್ಕೆ ಕೊಟ್ಟು ನಂತರ ಉತ್ತರವನ್ನು ಬರೆದುಕೊಳ್ಳಲಿಕ್ಕೆ ಹೇಳುವ ಪದ್ಧತಿಯು ಎಲ್ಲಿಯೂ ಎಂದೂ ವಾಡಿಕೆಯಲ್ಲಿಲ್ಲ. ಹೊಸ ಶಿಕ್ಷಣದ ಪದ್ಧತಿಯೆಂದರೆ ಹುಡುಗನು ತಾನು ಮಾಡಿದ ಲೆಕ್ಕವನ್ನು ಅದು ಸರಿಯಾಗಿದೆಯೋ ಇಲ್ಲವೋ ಎಂಬದನ್ನು ತಾನೇ ಕಂಡುಹಿಡಿ

ಯುವದಾಗಿದೆ. ಹುಡುಗನಿಗೆ ಅಸಾಧ್ಯವಾಗಿ ತೋರಿದರೆ ಮಾತ್ರ ಶಿಕ್ಷಕನು ಸಹಾಯಮಾಡಬೇಕಾಗುವದು. ಇಷ್ಟೇ ಅಲ್ಲದೆ ಶಿಕ್ಷಕನು ತಿಳಿಸಿದ ಮಾದರಿಯ ಲೆಕ್ಕದಿಂದ ವ್ಯವಹಾರದ ಅಂಥ ಅನೇಕ ಲೆಕ್ಕಗಳ ಗುಂಪುಗಳನ್ನು ಸಹ ಹುಡುಗನೇ ಕಲ್ಪಿಸಿಕೊಂಡು ಹೇಳಬೇಕಾಗುವದು. ಇಂಥಲ್ಲಿ ಶಿಕ್ಷಕನು ಕೇವಲ ಮಾರ್ಗದರ್ಶಿಯೂ ಸಹಾಯಕಾರಿಯೂ ಆಗಿರುವನು.

ಪ್ರಾಯ್ಮರಿ ಸ್ಕೂಲ್ ಲೀವ್ವಿಂಗ್ ಸರ್ಟಿಫಿಕೇಟ ಪರೀಕ್ಷೆಯ (೧೯೩೯) ಬಾಲಕರಿಗೆ

ಬಾಲಕರಿಗೆ ವಾಕ್ಯವಿಭಜನೆಯ ವಿಷಯವಾಗಿ ಕೆಲವು ವಿಚಾರಗಳು—

ಲೇ— ಜಿ. ಎಸ್. ಸಾತೇನಹಳ್ಳಿ

ವ್ಹ. ಫಾ. ಪರೀಕ್ಷೆಯ ವಿದ್ಯಾರ್ಥಿಗಳಿಗೆ ವಾಕ್ಯರಚನೆಯ ಜ್ಞಾನವು ಚೆನ್ನಾಗಿರುವದಿಲ್ಲೆಂದು ಪರೀಕ್ಷಕರು ೧೯೩೭, ೧೯೩೮ ಈ ಎರಡೂ ವರ್ಷಗಳಲ್ಲಿ ಅಭಿಪ್ರಾಯಪಟ್ಟಿರುವರು. ನಮ್ಮ ವಿದ್ಯಾರ್ಥಿಗಳ ಬರಹದ ಪದ್ಧತಿಯನ್ನು ತೀವ್ರ ಸುಧಾರಿಸಿಕೊಳ್ಳುವದು ನಮ್ಮ ಕೆಲಸವಾಗಿದೆ. ವಿಷಯವನ್ನು ವಿಭಾಗಿಸಿ ಕೊಂಡು ವಿಭಾಗಗಳಿಗೆ ತಕ್ಕಂತೆ ವಿಷಯ ಬರೆಯಲಿಕ್ಕೆ ಬಾರದಿರುವದೂ, ವಾಕ್ಯ ರಚನೆಗಾಗಿ ತಕ್ಕಷ್ಟು ಜ್ಞಾನವಿಲ್ಲದಿರುವದೂ, ಶಬ್ದಗಳ ಶುದ್ಧರೂಪಗಳ ತಿಳಿವಳಿಕೆ ಇಲ್ಲದಿರುವದೂ, ಬರೆಯುವ ಓದುವ ರೂಢಿಯಿಲ್ಲದಿರುವದೂ ಈ ಪರಿಣಾಮದ ಕಾರಣಗಳಾಗಿರುವವು. ಆದಕಾರಣ ಮುಖ್ಯವಾದ ವಾಕ್ಯರಚನಾಜ್ಞಾನದ ವಿಷಯಕ್ಕಾಗಿ ವಾಕ್ಯಗಳ ಭೇದಗಳನ್ನೂ ಆ ವಾಕ್ಯವಿಭಾಗಗಳ ಅದಲು ಬದಲು ಮಾಡುವ ವಿಚಾರವನ್ನೂ ವಾಕ್ಯವಿಭಜನಾಕ್ರಮವನ್ನೂ ವಿದ್ಯಾರ್ಥಿಗಳು ಸರಿಯಾಗಿ ಅಭ್ಯಾಸ ಮಾಡುವದು ಆವಶ್ಯಕ. ಅದಕ್ಕೆ ಸಹಾಯವಾಗುವಂತೆ ಇಲ್ಲಿ ಕೆಲವು ಆ ವಿಚಾರಗಳನ್ನು ಬರೆಯುವೆವು.

ವಾಕ್ಯಗಳಲ್ಲಿ ಸಾಮಾನ್ಯವಾಕ್ಯ, ಸಂಯೋಜಿತವಾಕ್ಯ, ಮಿಶ್ರವಾಕ್ಯ ಎಂಬ ದಾಗಿ ಮೂರು ಭೇದಗಳಿರುವವಷ್ಟೇ? ಈ ಕೆಳಗಿನ ವಿಚಾರಗಳನ್ನು ವಿದ್ಯಾರ್ಥಿಗಳು ವ್ಯಾಕರಣ ಪುಸ್ತಕದಲ್ಲಿ ಓದಿರುವರು.

ಸಾಮಾನ್ಯವಾಕ್ಯ— ಒಂದು ಕ್ರಿಯಾಪದವುಳ್ಳ ಸ್ವತಂತ್ರ ವಾಕ್ಯವು ಸಾಮಾನ್ಯ ವಾಕ್ಯವೆನಿಸುವದು.

ಉದಾ— ಬುದ್ಧಿವಂತನಾದ ಮನುಷ್ಯನು ತನ್ನ ಕೆಲಸವನ್ನು ಚೆನ್ನಾಗಿ ಮಾಡುತ್ತಾನೆ.

ಕೆಲವೆಡೆ ಎರಡೂ ಸ್ವತಂತ್ರ ವಾಕ್ಯಗಳಿದ್ದರೂ ಅವು ಒಂದನ್ನೊಂದು ಅಪೇಕ್ಷಿಸುತ್ತಿರುತ್ತವೆ. ಅವೆರಡೂ ಪೂರ್ಣ ವಾಕ್ಯಗಳಿದ್ದು ಸಮುಚ್ಚಯಿಸಲ್ಪಟ್ಟಿರಬಹುದು; ಅವುಗಳಲ್ಲಿ ಒಂದು ವಾಕ್ಯವು ಇನ್ನೊಂದು ವಾಕ್ಯಕ್ಕೆ ಕಾರಣವಾಗಿರಬಹುದು; ಇಲ್ಲವೆ ಒಂದು ವಾಕ್ಯವು ಇನ್ನೊಂದು ವಾಕ್ಯಕ್ಕೆ ವಿರುದ್ಧಾರ್ಥಕವಾಗಿರಬಹುದು; ಇಲ್ಲವೆ ಒಂದು ವಾಕ್ಯವು ಇನ್ನೊಂದು ವಾಕ್ಯಕ್ಕೆ ವಿಕಲ್ಪಾರ್ಥಕವಾಗಿರಬಹುದು; ಇಲ್ಲವೆ ಒಂದು ವಾಕ್ಯವು ಇನ್ನೊಂದು ವಾಕ್ಯಕ್ಕೆ ವಿವರಣಾರ್ಥಕವಾಗಿರಬಹುದು.

(೧) ಭೀಮನು ಕರ್ನಾಟಕ ಕಾಲೇಜಕ್ಕೆ ಕಲಿಯುವದಕ್ಕೆ ಹೋಗುತ್ತಾನೆ; ಮತ್ತು ತನ್ನ ಜೆಚ್ಚಿನ ವೆಚ್ಚಕ್ಕಾಗಿ ಹುಡುಗರಿಗೆ ಶಿಕ್ಷಣ ಕೊಡುವ ಉದ್ಯೋಗವನ್ನು ಮಾಡುತ್ತಾನೆ.

ಉದಾ— (೨) ದೇವರು ಪ್ರತಿಯುಗದಲ್ಲಿಯೂ ಅವತರಿಸುತ್ತಾನೆ; ಯಾಕಂದರೆ ಸಜ್ಜನರ ರಕ್ಷಣೆಯೇ ಅವನ ಕರ್ತವ್ಯವಾಗಿರುತ್ತದೆ.

(೩) ನೆರೆಮನೆಯ ರಾಮರಾಯನು ಸುಖದ ಕಾಲದಲ್ಲಿ ದೇವರನ್ನು ನೆನೆಯುವದಿಲ್ಲ; ಆದರೆ ಕಷ್ಟಬಂದ ಕೂಡಲೆ ಈಶ್ವರನ ನಾಮಗಳನ್ನು ನಿತ್ಯ ಪಾರಾಯಣ ಮಾಡುತ್ತಾನೆ.

(೪) ಮನುಷ್ಯರೆಲ್ಲ ಮರ್ತ್ಯರು ಇರುತ್ತಾರೆ; ಅಂದರೆ ಅವರು ಒಮ್ಮಿಲ್ಲ ಒಮ್ಮೆ ಸಾಯುವವರು ಆಗಿರುತ್ತಾರೆ.

(೫) ಅನೇಕ ನದಿಗಳು ಸಮುದ್ರಕ್ಕೆ ಕೂಡುತ್ತವೆ; ಆದರೂ ಸಮುದ್ರವು ತುಂಬುವದಿಲ್ಲ.

(೬) ಮರಾಟಾ ಜನರು ದಿವಸದಿವಸಕ್ಕೆ ಬೆಳೆದರು; ಆದಕಾರಣ ಮೊಗಲರು ಅಂಜಿದರು.

ಮೇಲೆ ಬರೆದ ೬ ವಾಕ್ಯಗಳಲ್ಲಿ ಪ್ರತಿಯೊಂದರಲ್ಲಿ ಎರಡೆರಡು ವಾಕ್ಯಗಳಿವೆ. ಅವು ಸ್ವತಂತ್ರವಾಗಿದ್ದರೂ ಪರಸ್ಪರಾವಲಂಬನದಿಂದ ನಡುವಿನ ಮತ್ತು, ಇಲ್ಲವೆ, ಅಂದರೆ, ಆದುದರಿಂದ, ಅಂದಮೇಲೆ ಮುಂತಾದ ಅವ್ಯಯಗಳಿಂದ ಕೂಡಿಕೊಂಡಿರುತ್ತವೆ. ಇಂಥ ವಾಕ್ಯಗಳಿಗೆ ಸಂಯೋಜಿತ ವಾಕ್ಯಗಳೆನ್ನುವರು. [ಅಥವಾ ಸಾಪೇಕ್ಷ ಸ್ವತಂತ್ರ ವಾಕ್ಯಗಳಿಗೆ ಸಂಯೋಜಿತ ವಾಕ್ಯಗಳೆನ್ನುವರು.]

ಮಿಶ್ರವಾಕ್ಯ— ಉಪವಾಕ್ಯಗಳಿಂದ ಒಡಗೂಡಿದ ಮುಖ್ಯ ವಾಕ್ಯಕ್ಕೆ ಮಿಶ್ರವಾಕ್ಯವೆನ್ನುವರು.

ಮೇಲಿನ ಎರಡು ಬಗೆಯ ವಾಕ್ಯಗಳಂತೆ ಈ ವಾಕ್ಯವು ಪ್ರತ್ಯೇಕವಾಗಿರುವದಿಲ್ಲ. ದೊಡ್ಡ ವಾಕ್ಯದೊಳಗೆ ಸಣ್ಣ ವಾಕ್ಯವು ಹುದುಗಿಕೊಂಡಿರುತ್ತದೆ. ಆ ಹುದುಗಿಕೊಂಡಿರುವ ವಾಕ್ಯವು ದೊಡ್ಡ ವಾಕ್ಯದ ಭಾಗವಾದ್ದರಿಂದ ಅದು, ದೊಡ್ಡ ವಾಕ್ಯದ **ಅಂಗವಾಕ್ಯ**ವೆನಿಸುವದು, ಮುಖ್ಯ ವಾಕ್ಯಕ್ಕೆ ಪ್ರಧಾನವಾಕ್ಯವೆನ್ನುವರು. ಅಂಗವಾಕ್ಯಕ್ಕೆ ಉಪವಾಕ್ಯವೆಂದರೂ ಸಲ್ಲುವದು. ಈ ಉಪವಾಕ್ಯದ ಕೊನೆಯಲ್ಲಿ ಕ್ರಿಯಾಪದವಿದ್ದರೆ ಅದಕ್ಕೆ ಪೂರ್ಣೋಪವಾಕ್ಯವೆಂದೂ ಉಪವಾಕ್ಯದ ಕೊನೆಯಲ್ಲಿ ಕೃನ್ನಾಮ, ಕೃದ್ಭಾವನಾಮ, ಕೃದಂತಾವ್ಯಯ ಇವುಗಳಲ್ಲಿ ಒಂದು ಇದ್ದರೆ ಅದು ಅಪೂರ್ಣೋಪವಾಕ್ಯವೆಂದೂ ಕರೆಯಲ್ಪಡುವದು. ಉಪವಾಕ್ಯವನ್ನು ಒಳಗೊಂಡ ವಾಕ್ಯಕ್ಕೆ ಮಿಶ್ರವಾಕ್ಯವೆನ್ನುವರು.

ಸಾಮಾನ್ಯವಾಕ್ಯ, ಸಂಯೋಜಿತವಾಕ್ಯ, ಮಿಶ್ರವಾಕ್ಯ ಇವುಗಳನ್ನು ಪರಸ್ಪರ ಪರಿವರ್ತನ ಮಾಡಲಿಕ್ಕೆ ಹುಡುಗರು ಕಲಿತರೆ ಈ ವಾಕ್ಯಗಳ ಬಗೆಗಳ ದೃಢೀಕರಣವಾಗುವದಲ್ಲದೆ ವಾಕ್ಯವೃಂದಗಳನ್ನು ಸಂಕ್ಷೇಪಿಸಿ ಬರೆಯಲಿಕ್ಕೂ ಬೆಳೆಯಿಸಿ ಬರೆಯಲಿಕ್ಕೂ ಗೊತ್ತಾಗಿ ಭಾಷೆಯ ಮೇಲೆ ಅವರ ಪ್ರಭುತ್ವವು ಉಳಿಯಬಹುದು.

ಸಾಮಾನ್ಯ ವಾಕ್ಯವನ್ನು ಮಿಶ್ರವಾಕ್ಯಕ್ಕೆ ಅವತರಿಸುವ ಬಗೆ—

ಸಾಮಾನ್ಯ ವಾಕ್ಯದಲ್ಲಿರುವ ಒಂದು ಪದವನ್ನಾಗಲಿ, ಪದಸಮೂಹವನ್ನಾಗಲಿ ಬದಲಿಸಿ ಅದನ್ನು ಮಿಶ್ರವಾಕ್ಯವನ್ನಾಗಿ ಮಾಡಬಹುದು.

(೧) ಮರಾಟರ ಅಪಜಯದ ರೀತಿಯನ್ನು ಹೇಳು. **ಇದು ಸಾಮಾನ್ಯ ವಾಕ್ಯವು.** ಮರಾಟರು ಹೇಗೆ ಅಪಜಯಪಟ್ಟರೆಂಬದನ್ನು ಹೇಳು. ಇದು ಸಾ. ವಾ. ವನ್ನು **ಬದಲಿಸಿದ ಮಿಶ್ರ ವಾಕ್ಯವು.**

(೨) ಇಂಗ್ಲಿಷರ ಉದ್ಯೋಗದ ಗಳಿಕೆಯು ನಿನಗೆ ಗೊತ್ತದೆಯೋ? (ಸಾ. ವಾ.)

ಇಂಗ್ಲಿಷರು ಉದ್ಯೋಗದಿಂದ ಎಷ್ಟು ಗಳಿಸುವರೆಂಬದು ನಿನಗೆ ಗೊತ್ತದೆಯೋ? ಬದಲಿಸಿದ ಮಿಶ್ರವಾಕ್ಯವ್ರ.

ವಿವರಣೆ—

ಮರಾಟರ ಅಪಜಯದ ಕಾರಣವನ್ನು ಹೇಳು. ಈ ವಾಕ್ಯದಲ್ಲಿ ಒಂದೇ ಕ್ರಿಯಾಪದವಿದೆ. ಆ ಕ್ರಿಯೆಗೆ ಸಂಬಂಧಿಸಿದ ಕರ್ತೃಕರ್ಮಗಳಿವೆ. ಆದುದರಿಂದ ಇದು ಸಾಮಾನ್ಯ ವಾಕ್ಯವು.

ಮರಾಟರು ಹೇಗೆ ಅಪಜಯಪಟ್ಟರು ಎಂಬದನ್ನು ಹೇಳು, ಇದು ಮೊದಲಿನ ಸಾಮಾನ್ಯ ವಾಕ್ಯದ ಅರ್ಥವನ್ನೇ ಹೇಳುವ ಮಿಶ್ರ ವಾಕ್ಯವಾಗಿದೆ. ಈ ವಾಕ್ಯದಲ್ಲಿ ಎರಡು ಕ್ರಿಯಾಪದಗಳು ಅವೆ. (ಅಪಜಯಪಟ್ಟರು ಎಂಬದು ಒಂದು, ಹೇಳು ಎಂಬದು ಇನ್ನೊಂದು.)

ನೀನು, ಮರಾಟರು ..... ಎಂಬದನ್ನು ಹೇಳು. ಇದು ಮುಖ್ಯವಾಕ್ಯ. ಮರಾಟರು ಹೇಗೆ ಅಪಜಯಪಟ್ಟರು. ಇದು ಅಂಗವಾಕ್ಯವು. ಹೇಳು ಎಂಬ ಮುಖ್ಯ ಕ್ರಿಯೆಯುಳ್ಳ ಪ್ರಧಾನವಾಕ್ಯಕ್ಕೆ ಕೆಳಗಿನ ವಾಕ್ಯವು ಕರ್ಮ ಕಾರಕ ಸ್ಥಳದಲ್ಲಿ ಬಂದದ್ದರಿಂದ ಅದರ ಅಧೀನವಾದ ಅಂಗವಾಕ್ಯವಾಗಿದೆ.

ಮೇಲಿನ ಪ್ರಧಾನವಾಕ್ಯಕ್ಕೆ ಅಂಗವಾಕ್ಯವು ಸ್ವತಃ ಕಾರಕ ಸ್ಥಳದಲ್ಲಿ ಬಂದಿದೆ. ಈ ರೀತಿಯಲ್ಲಿ ಅಲ್ಲದೆ ಅಂಗವಾಕ್ಯವು ಪ್ರಧಾನವಾಕ್ಯದ ಕಾರಕದ ವಿಶೇಷಣವೂ ಆಗಬಹುದು. ಈ ರೀತಿಯು ವ್ಯಕ್ತವಾಗುವಂತೆ ಒಂದು ಸಾಮಾನ್ಯ ವಾಕ್ಯವನ್ನು ಮಿಶ್ರವಾಕ್ಯವನ್ನಾಗಿ ಬದಲಿಸಿದೆ.

ಉದಾ— ಹೇಳಿದ ಲೆಕ್ಕವನ್ನು ಮಾಡಬೇಕು. ಇದು ಸಾಮಾನ್ಯವಾಕ್ಯವು.

ನಾವು ಯಾವ ಲೆಕ್ಕವನ್ನು ಹೇಳುವೆವೋ ಅದನ್ನು ನೀನು ಮಾಡಬೇಕು. ಇದು ಪರಿವರ್ತಿಸಿದ ಮಿಶ್ರವಾಕ್ಯವು.

ನೀನು.. ಮಾಡಬೇಕು. ಇದು ಪ್ರಧಾನವಾಕ್ಯವು " ನಾವು ಯಾವ ಲೆಕ್ಕವನ್ನು ಹೇಳುವೆವೋ " ಇದು ಅಂಗವಾಕ್ಯವು, ಪ್ರಧಾನವಾಕ್ಯದ ಕರ್ಮಪದವಾದ ಅದನ್ನು ಎಂಬ ಪದವನ್ನು ಉಪವಾಕ್ಯವಾದ ' ನಾವು ಯಾವ ಲೆಕ್ಕವನ್ನು ಹೇಳುವೆವೋ ' ಎಂಬುದು ವರ್ಣಿಸುವದರಿಂದ ಪ್ರಧಾನವಾಕ್ಯದ ಕರ್ಮದ ವಿಶೇಷಣವಾಗಿದೆ.

ಉಪವಾಕ್ಯವು ಪ್ರಧಾನವಾಕ್ಯದ ಕ್ರಿಯಾವಿಶೇಷಣವಾಗುವಂತೆಯೂ ಸಾಮಾನ್ಯವಾಕ್ಯವನ್ನು ಒಯ್ದು ಮಿಶ್ರವಾಕ್ಯವನ್ನಾಗಿ ಪರಿವರ್ತಿಸಬಹುದು.

ಇತಿಹಾಸಬೋಧಿನಿಯಲ್ಲಿ ಎಲ್ಲೆಡೆಯಲ್ಲಿಯೂ ಉತ್ತಮ ವರ್ಣನೆಗಳೇ ಅವೆ. (ಸಾ. ವಾ)

ಇತಿಹಾಸಬೋಧಿನಿಯಲ್ಲಿ ಎಲ್ಲೆಡೆಯಲ್ಲಿ ನೋಡಿದರೂ ಉತ್ತಮ ವರ್ಣನೆಗಳೇ ಅವೆ. } ಸಾಮಾನ್ಯವಾಕ್ಯವನ್ನು ಬದಲಿಸಿದ ಮಿಶ್ರವಾಕ್ಯವು.

ಈ ಮಿಶ್ರವಾಕ್ಯದಲ್ಲಿ " ಇತಿಹಾಸಬೋಧಿನಿಯಲ್ಲಿ .. .. .. ಉತ್ತಮ ವರ್ಣನೆಗಳೇ ಅವೆ" ಇದು ಪ್ರಧಾನವಾಕ್ಯವು.

ನಾವು ಎಲ್ಲೆಡೆಯಲ್ಲಿ ನೋಡಿದರೂ ಇದು ಉಪವಾಕ್ಯವು.

ಇಲ್ಲಿ ಉಪವಾಕ್ಯವು ಪ್ರಧಾನವಾಕ್ಯದ ಕ್ರಿಯೆಯನ್ನು ವರ್ಣಿಸುವದರಿಂದ ಕ್ರಿಯಾವಿಶೇಷಣವಾಗಿದೆ.

ಈಗ ಅಂಗವಾಕ್ಯವು ಪ್ರಧಾನವಾಕ್ಯಕ್ಕೆ ಎಷ್ಟು ಬಗೆಗಳಿಂದ ಅಂಗವಾಗಿ ಬರುತ್ತದೆಂಬದು ತಿಳಿದಂತಾಯಿತು.

೧. ಅಂಗವಾಕ್ಯವು ಮುಖ್ಯವಾಕ್ಯದ ಯಾವದೊಂದು ಕಾರಕದ ಸ್ಥಳದಲ್ಲಿ ಬರಬಹುದು.

೨. ಇಲ್ಲವೆ ಅಂಗವಾಕ್ಯವು ಮುಖ್ಯವಾಕ್ಯದ ಕಾರಕದ ವಿಶೇಷಣವಾಗ ಬಹುದು.

೩. ಅಥವಾ ಅಂಗವಾಕ್ಯವು ಪ್ರಧಾನವಾಕ್ಯದ ಕ್ರಿಯಾವಿಶೇಷಣ ಸ್ಥಾನದಲ್ಲಿ ಬರಬಹುದು.

ಸಾಮಾನ್ಯವಾಕ್ಯವನ್ನು ಸಂಯೋಜಿತವಾಕ್ಯವನ್ನಾಗಿ ಮಾಡುವ ಬಗೆ– ಸಾಮಾನ್ಯವಾಕ್ಯದಲ್ಲಿರುವ ಪದವನ್ನಾಗಲಿ, ಪದಸಮೂಹವನ್ನಾಗಲಿ ಸ್ವತಂತ್ರ ವಾಕ್ಯವನ್ನಾಗಿಮಾಡಿ ಆ ಮೇಲೆ ತಕ್ಕ ಸಂಬಂಧಿಕ ಶಬ್ದಗಳಿಂದ ಕೂಡಿಸುವುದು.

ಉದಾ— (ಸಾ. ವಾ.) ಜನರ ಹಲವು ಉದ್ಯೋಗಗಳಿಂದಲೂ ಈಗ ಅವರ ಉಪಜೀವನ ಸಾಗಲಾರದು.

ಜನರು ಈಗ ಹಲವುಬಗೆಯ ಉದ್ಯೋಗ ಮಾಡುತ್ತಾರೆ. ಆದರೂ ಅವರ ಉಪಜೀವನವು ಸಾಗಲಾರದು. ಬದಲಿಸಿದ ಸಂಯೋಜಿತವಾಕ್ಯ.

ಮೇಲಿನ ಸಾಮಾನ್ಯವಾಕ್ಯದಲ್ಲಿ ಒಂದೇ ಕ್ರಿಯಾಪದವಿದ್ದು ಅದಕ್ಕೆ ಸಂಬಂಧಿಸಿದ ಕಾರಕಗಳಿವೆ. ಆದುದರಿಂದ ಅದು ಸಾಮಾನ್ಯವಾಕ್ಯವಿರುವದು ನಿಜ.

ಮಿಶ್ರವಾಕ್ಯದಲ್ಲಿ ಜನರು ಹಲವು ಉದ್ಯೋಗಮಾಡುತ್ತಾರೆ ಎಂಬುದು ಒಂದು ವಾಕ್ಯ. ಅವರ ಉಪಜೀವನ ಸಾಗಲಾರದು. ಇನ್ನೊಂದು ವಾಕ್ಯವು. ಇವೆರಡೂ ಪ್ರತ್ಯೇಕ ಸಾಪೇಕ್ಷ ಸ್ವತಂತ್ರ ವಾಕ್ಯಗಳಿದ್ದು ನಡುವೆ ಆದರೂ ಎಂಬ ಅವ್ಯಯವು ಆ ಎರಡನ್ನು ಸಂಬಂಧಿಸಿದೆ.

ಮಿಶ್ರವಾಕ್ಯವನ್ನು ಸಂಯೋಜಿತವಾಕ್ಯಕ್ಕೆ ತಿರುಗಿಸುವದು:–

ಉದಾ— ರಾಮನು ಜಾಣನೆಂಬದನ್ನು ನಾನು ಬಲ್ಲೆನು. ಇದು ಮಿಶ್ರ ವಾಕ್ಯ. ರಾಮನು ಜಾಣನು, ಅದನ್ನು ನಾನು ಬಲ್ಲೆನು. (ಸಂ. ವಾ.)

ಸಂಯೋಜಿತ ವಾಕ್ಯವನ್ನು ಸಾಮಾನ್ಯವಾಕ್ಯವನ್ನಾಗಿ ಬದಲಿಸುವದು:–

ಈ ಲೆಕ್ಕವು ತೊಡಕುಳ್ಳದ್ದಿದೆ; ಆದುದರಿಂದ ಇದು ವಿದ್ಯಾರ್ಥಿಗಳಿಗೆ ತಿಳಿಯಲಾರದು.

ಬದಲಿಸಿದ ಸಾಮಾನ್ಯವಾಕ್ಯ

ಈ ಲೆಕ್ಕವು ವಿದ್ಯಾರ್ಥಿಗಳಿಗೆ ತಿಳಿಯಲಾರದಷ್ಟು ತೊಡಕಿನದಾಗಿದೆ.

ಸಂಯೋಜಿತವಾಕ್ಯವನ್ನು ಮಿಶ್ರವಾಕ್ಯಕ್ಕೆ ಬದಲಿಸುವದು:—

ಸಂಯೋಜಿತವಾಕ್ಯ

ಈ ಪರುಷ ಸಕಾಲಕ್ಕೆ ಮಳೆಯಾಗಲಿಲ್ಲ, ಆದುದರಿಂದ ಬೆಳೆ ಚೆನ್ನಾಗಿ ಬರಲಿಲ್ಲ.

ಬದಲಿಸಿದ ಮಿಶ್ರವಾಕ್ಯ

ಈ ವರುಷ ಸಕಾಲಕ್ಕೆ ಮಳೆಯಾಗದ್ದರಿಂದ ಬೆಳೆ ಚೆನ್ನಾಗಿ ಬರಲಿಲ್ಲ.

ಇಂಥ ಬಗೆಬಗೆಯ ಅನೇಕ ವಾಕ್ಯಗಳನ್ನು ಪರಸ್ಪರ ಪರಿವರ್ತಿಸಲಿಕ್ಕೆ ರೂಢಿ ಮಾಡಿಸಿದರೆ ವಾಕ್ಯಗಳ ಬಗೆಗಳು ಚೆನ್ನಾಗಿ ಗೊತ್ತಾಗುವವು.

ಇನ್ನು ಮಾದರಿಗಾಗಿ ಒಂದು ಮಿಶ್ರವಾಕ್ಯವನ್ನು ಕೆಳಗೆ ವಿಭಜಿಸಿ ತೋರಿಸಿದೆ.

ವಾಚನಪಾಠಮಾಲೆ ೧೩

ಅಡವಿಯೊಳಗಿನ ಕಾಲುದಾರಿಯಲ್ಲಿ ಮೆಲ್ಲಡಿಯಿಡುತ್ತ ದೂರದಲ್ಲಿ ಮಿನುಗುತ್ತಿರುವ ದೀಪದ ಬೆಳಕನ್ನು ಗುರಿಯಾಗಿಟ್ಟುಕೊಂಡು ಹಿಸುಮಾತಿನಲ್ಲಿ ಏನೇನೋ ಆಡಿಕೊಳ್ಳುತ್ತ ಮೂವರು ದಾರಿಕಾರರು ಮುಂದೆಸಾಗಿದ್ದರು.

(ಮುಂದಿನ ಪುಟ ನೋಡಿರಿ.)

ಮೇಲಿನ ವಾಕ್ಯವನ್ನು ಹೀಗೆ ವಿಭಜಿಸಬಹುದು

ಪ್ರಧಾನವಾಕ್ಯ—— ಅಡವಿಯೊಳಗಿನ ಕಾಲುದಾರಿಯಲ್ಲಿ..... ಮುಂದೆ ಸಾಗಿದ್ದರು.

ಅಂಗವಾಕ್ಯಗಳು—— (ಅ) ಅಡವಿಯೊಳಗಿನ.....ಮೆಲ್ಲಡಿಯಿಡುತ್ತ.

(ಬ) ದೂರದಲ್ಲಿ..... ಗುರಿಯಾಗಿಟ್ಟುಕೊಂಡು.

(ಕ) ಪಿಸುಮಾತಿನಲ್ಲಿ..... ಆಡಿಕೊಳ್ಳುತ್ತ.

ಎಂತಹವಾಕ್ಯ	ಕರ್ತೃವಿಗೆ ಸಂಬಂಧಿಸಿದ ಪದ	ಕರ್ತೃ	ಕರ್ಮಕ್ಕೆ ಸಂಬಂಧಿಸಿದ ಪದ	ಕರ್ಮ	ಕ್ರಿಯೆಗೆ ಸಂಬಂಧಿಸಿದ ಪದ	ಕ್ರಿಯಾಪದ
(೧) ಪ್ರಧಾನವಾಕ್ಯ	ಮೂವರು	ದಾರಿಕಾರರು	,	,	(ಅ) ಅಂಗವಾಕ್ಯ ಅಡವಿಯೊಳಗಿನ..... (ಕ್ರಿ. ವಿ.) (ಬ) ಅಂಗವಾಕ್ಯ ದೂರದಲ್ಲಿ..... (ಕ್ರಿ. ವಿ.) (ಕ) ಅಂಗವಾಕ್ಯ ಪಿಸುಮಾತಿನಲ್ಲಿ..... ಕ್ರಿ. ವಿ. ಮುಂದೆ (ಸ್ವಳವಾಚಕ ಕ್ರಿ. ವಿ.)	ಸಾಗಿದ್ದರು.
(ಅ) ಅಂಗವಾಕ್ಯ	ಸದರ	ಸದರ	,	,	ಅಡವಿಯೊಳಗಿನ ಕಾಲುದಾರಿಯಲ್ಲಿ (ಸ್ಥಾನ)	ಮೆಲ್ಲಡಿಯಿಡುತ್ತ.
(ಬ) ಅಂಗವಾಕ್ಯ	ಸದರ	ಸದರ	ದೂರದಲ್ಲಿ ವಿ. ದೀಪದ	ಬೆಳಕನ್ನು	,	ಗುರಿಯಾಗಿಟ್ಟುಕೊಂಡು.
(ಕ) ಅಂಗವಾಕ್ಯ	ಸದರ	ಸದರ	,	ಏನೇನೋ	ಪಿಸುಮಾತಿನಲ್ಲಿ	ಆಡಿಕೊಳ್ಳುತ್ತ.

ಧಾರವಾಡ ಶಿಕ್ಷಕ-ಶಿಕ್ಷಣಾಲಯಕ್ಕೆ ಮಂತ್ರಿವರ್ಯ ಮಾನ್ಯ ಖೇರರ ಆಗಮನ

ಲೇಖಕ : ಶ್ರೀ. ಜೆ. ಜಿ. ಕುಲಕರ್ಣಿ

" ಒಂದು ಜೇಡವು ತನ್ನಬೀಡನು ಕಟ್ಟಲೋಸುಗ ಗೆಳೆಯನೆ " ಎಂಬಂತೆ

ನಮ್ಮ ಶಿಕ್ಷಣ ಶಾಲೆಗೀದಿನ ಮಾನ್ಯಖೇರರು ಬರುವರು ।
ಸುಮ್ಮನೇ ತಡವೇಕೆ ಗೆಳೆಯರೆ ಬೇಗ ಪೋಗುವ ಸಾಲೆಗೆ ॥
ಖಾದಿಯಂಗಿ ಖಾದಿಟೊಪ್ಪಿಗೆ ಖಾದಿ ಚಣ್ಣವ ಧರಿಸುವ ।
ಬೀದಿಯಲಿ ನಾವು ಬೇಗಬೇಗನೆ ಸಾಲುಗೊಳ್ಳುತ ಪೋಗುವ ॥
ರಾಮು ಬಂದನು ಶ್ಯಾಮು ಬಂದನು ಭೀಮು ಬಂದನು ಸಾಲೆಗೆ ।
ಸೋಮು ಬಂದನು ಸಂಗ ಬಂದನು ರಂಗ ಬಂದನು ಸಾಲೆಗೆ ॥
ತಳಿರು ತೋರಣಗಳನು ನೋಡಿರಿ ಧ್ವಜಪತಾಕೆಯ ನೋಡಿರಿ ।
ಬಾಗಿಲಲಿ ಸಾಲಾಗಿ ನಿಂತಿಹ ಚಿಕ್ಕಬಾಲರ ನೋಡಿರಿ ॥
ಎಲ್ಲರೂ ತಂತಮ್ಮ ಕಾರ್ಯಗಳಲ್ಲಿ ನಿರುತ ಸುದಕ್ಷರು ।
ಕಾಳೆರಾಯರ ಮಾತು ಕೇಳುತ ಸಿದ್ಧರಾಗಿ ಇರುವರು ॥
ಬಂತು ನೋಟರ ಬಂಡಿಯು ಇದು ಮಾನ್ಯಖೇರರ ಬಂಡಿಯು ।
ನಿಂತು ನೋಡಿದರಾಗ ನಮ್ಮಯ ಕಾಳೆರಾಯರು ಹರುಷದಿ ॥
ಖಾದಿಯಂಗಿ ಖಾದಿಟೊಪ್ಪಿಗೆ ಹಾಕಿಕೊಂಡು ನಿಂತಿಹ ।
ಖಾದಿ ಧೋತರ ಉಟ್ಟುಕೊಂಡು ಬಡಿಗೆ ಹಿಡಿದು ನಿಂತಿಹ ॥
ಶಾಂತಮೂರ್ತಿಯ ನೋಡಿದಾಗಳೆ ಭಕ್ತಿಯಿಂದಲಿ ಸರ್ವರು ।
ಮಂತ್ರಿಖೇರರ ಹೆಸರಿನಿಂದಲಿ ಘೋಷವನ್ನು ಗೈದರು ॥
ಒಳಗೆ ಬರುತಿರೆ ಮಂತ್ರಿವರ್ಯರು ಕಾಳೆರಾಯರ ಸಂಗಡ ।
ಚಿಕ್ಕಬಾಲರು ಭಕ್ತಿಯಿಂ ಸತ್ಕಾರವಂದನಗೈದರು ॥

(ಕಾಲೇಜಿನಿಂದ ತೋಟದ ವರೆಗಿನ ವರ್ಣನೆ)

" ಶಾನು ಪದ್ಯಾವಳಿ"ಯಂತೆ

ವಂದೇಮಾತರಂ ಎನ್ನುತಲಿರುವ । ಸುಂದರ ಬಾಲರ ನೋಡುತಲಿ ।
ಸ್ವಾಗತಪದ್ಯವ ಕೇಳುತಲಿ । ಹುಡುಗರ ಆಟವ ನೋಡುತಲಿ ॥

ಕುಲು ಕುಲು ನಗುತಲಿ ಮಂತ್ರಿಗಳು । ತೋಟಕೆ ಆಗಲೆ ಗಮಿಸಿದರು ।
ಭಾರತಮಾತೆಗೆ ಜಯಜಯಕಾರ । ಕನ್ನಡ ಮಾತೆಗೆ ಜಯ ಜಯಕಾರ ॥
ಎನ್ನುವ ಬಾಲರ ನೋಡುತಲಿ । ಸಂತಸಬಟ್ಟರು ಮಂತ್ರಿಗಳು ।
ಬಾಲರಿಗೆಲ್ಲ ಕೈಗಳ ಮುಗಿದು । ಬಾಲರ ಸಂಗಡ ಮಾತುಗಳಾಡಿ ॥
ಕಾಳೆರಾಯರ ಸಂಗಡ ಮುಂದೆ । ತೋಟವ ಹೊಕ್ಕರು ಹರುಷದಲಿ ।
ಚಂದಿರನ ಬೆಳ್ದಿಂಗಳಲಿ । ಗ್ಯಾಸಿನ ದೀಪದ ಬೆಳಕಿನಲಿ ॥

(ತೋಟದ ವರ್ಣನೆ)

" ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು " ಎಂಬಂತೆ

ನೋಟಕರ ಕಂಗಳಿಗೆ ಕಮನೀಯವಾಗಿರುವ ।
ತೋಟವನು ಮಂತ್ರಿಗಳು ನೋಡಿದುದ ಪೇಳುವೆನು ॥ ಪಲ್ಲ ॥
ಚೂರು ಚೂರಾಗಿರುವ ಕನ್ನಡದ ಭಾಗಗಳ ।
ತೋರಿ ತಿಳಿಸುತಲಿರುವ ಕನ್ನಡದ ನಕ್ಷೆಯನು ॥
ಧೀರವರ ಮಂತ್ರಿಗಳು ನೋಡುತಲೆ ಕರ್ತೃತಣೆಯೆ ।
ಕಾರುಣ್ಯವನು ತೋರಿ ಸಾಗಿದರು ಮುಂದಕ್ಕೆ ॥ ॥ ೧ ॥
ಮುಂದಕ್ಕೆ ಸಾಗುತಿರೆ ಕಾಣಿಸಿತು ವಿಜಯಪುರ ।
ದಂದದಾ ಮಾದರಿಯ ನೋಡಿದರು ಆ ಬಳಿಕ ।
ಮುಂದಿರುವ ಹಾಳಾದ ವಿಜಯನಗರವ ನೋಡಿ ।
ಮಂತ್ರಿಗಳು ಮರಮರನೆ ಮರುಗುತಲೆ ತಿರುಗಿದರು ॥ ॥ ೨ ॥
ಹಿಮವಂತ ಪರ್ವತದ ಮಾದರಿಯ ನೋಡುತಲೆ ।
ಯಮುನೆ ಗಂಗಗಳೆಂಬ ನದಿಗಳನು ನೋಡುತಲೆ ।
ತಮತಮಗೆ ಹರಿಯುವಾ ಚಿಕ್ಕ ನದಿಗಳ ನೋಡಿ ।
ನಮನ ಗೈದಲ್ಲಿಂದ ಸಾಗಿದರು ಮುಂದಕ್ಕೆ ॥ ॥ ೩ ॥
ತರತರದ ನಕ್ಷೆಗಳ ನೋಡುತಲೆ ಸಾಗುತಿರೆ ।
ಸರಸಾದ ಉಗಿಬಂಡಿ ನಿರ್ಮಾಣ ನೋಡುತಿರೆ ।
ವರಮಂತ್ರಿ ಬೇರರಿಗೆ ಕೇಳಿಸಿತು ಸ್ಫೋಟನದು ।
ಬಿರಗಾಗಿ ನೋಡಲು ಕೃತಕ ಜ್ವಾಲಾಮುಖಿಯು ॥ ॥ ೪ ॥
ಗಗನ ನೌಕೆಯ ಮಾರ್ಗ ಹಳ್ಳಿಮಾದರಿಗಳ ।
ಬಗೆ ನೋಡಿ ಮೋದದಲಿ ಕೃತಿಗಳನು ಕೊಂಡಾಡಿ ।
ನಗುಮೊಗದಿ ಉಪಕೃತರು ಕಾಳೆರಾಯರಿಗೆಂದು ।
ಸಾಗಿದರು ಕೈಕೆಲಸಗಳ ಕೋಣೆಗಳಿಗಾಗ ॥ ॥ ೫ ॥

ಶಿಕ್ಷಕರ ಬಾಲಕರ ಕೈಕೆಲಸಗಳನ್ನೋಡಿ ।
ಶಿಕ್ಷಕರ ಶಿಕ್ಷಣಾಲಯದೊಳಗೆ ಕೊಡುತಿರುವ ॥
ಶಿಕ್ಷಣದ ರೀತಿಯನ್ನು ಕೊಂಡಾಡಿ ಮಂತ್ರಿಗಳು ।
ತತ್‌ಕ್ಷಣವೆ ಗಮಿಸಿದರು ಸಂಗೀತದಾ ಸಭೆಗೆ ॥ ॥ ೬ ॥

(ಸಂಗೀತ ಸಭೆಯಲ್ಲಿ ಮಂತ್ರಿವರ್ಯ ಮಾನ್ಯ ಖೇರರು)

ಸಂಗೀತದಾ ಸಭೆಯು ಸಿಂಗರವ ನೋಡುವಡೆ ।
ಕಂಗಳಿವು ಸಾಲವು ಬಣ್ಣಿಪೆನು ನಾನೆಂತು ॥
ಸಿಂಗರಿಸಿದಾಸನದಿ ಮಂಡಿಸಲು ಮಂತ್ರಿಗಳು ।
ಸಂಗಡಲೆ ಸ್ವಾಗತವ ಗೈದರು ಕಲೆಕ್ಟರರು ॥ ॥ ೭ ॥

ಬಹುಮಾನ ಹಂಚಿದರು ಮಾನ್ಯವರ ಖೇರರು ।
ಬಹುಮೂಲ್ಯವಾಗಿರುವ ಭಾಷಣವ ಮಾಡಿದರು ॥
ಬಹುನೋದಬಡುತಲಿ ಬೀಳ್ಕೊಟ್ಟತಾ ಸಭೆಯು ।
ಬಹುವಾದ್ಯರಭಸದಿಂ ಪೋದರಾ ಮಂತ್ರಿಗಳು ॥ ॥ ೮ ॥

ಚಿಕ್ಕಮಕ್ಕಳ ಶಿಕ್ಷಣ

ಮಕ್ಕಳಿಗೂ ಮನಸ್ಸಿದೆಯೇ ಎನ್ನುವ ಜನರೂ ನಮ್ಮಲ್ಲಿ ಇಲ್ಲದೆ ಇಲ್ಲ. ಎಷ್ಟೋ ಜನರಿಗೆ ಮಕ್ಕಳ ಮನಸ್ಸೆಂಬುದು ಒಂದು ಒಗಟಿನಂತಾಗಿದೆ. ಚಿಕ್ಕ ಮಗುವು ತನಗೆ ತಾನೇ ನಗುವದು; ತನ್ನಷ್ಟಕ್ಕೆ ಕಿಲಿಬಿಲಿಮಾಡುವದು; ಕೈಕಾಲು ಗಳನ್ನು ಅಲ್ಲಾಡಿಸಿ ಏನೇನೋ ಸಂಜ್ಞೆಮಾಡುವದು; ಇವಕ್ಕೆಲ್ಲ ಅರ್ಥವೇನು ಜನ್ಮಾಂತರವನ್ನು ನಂಬುವ ನಮ್ಮ ಹಿಂದಿಜನರು ಈ ಸಮಸ್ಯೆಯನ್ನು ಬಿಡಿಸಲು ಹೊರಟು, ಹೊಸದೊಂದು ವಿಚಾರವನ್ನು ಹೇಳಬಿಟ್ಟರು; ಏನೆಂದರೆ, ಮಗುವು ತನ್ನ ಪೂರ್ವಜನ್ಮದ ಅನುಭವಗಳನ್ನು ಈಗ ನೆನಸಿಕೊಂಡು ಇಂಥ ಚೇಷ್ಟೆಗಳನ್ನು ಮಾಡುವದು. ಆದರೆ ಅಧುನಿಕ ಮಾನಸ ಶಾಸ್ತ್ರದ ಒರೆಗಲ್ಲಿಗೆ ಹಚ್ಚಿನೋಡಿದರೆ ಈ ವಿಚಾರಗಳು ಎಷ್ಟೂ ಬೆಸಮಂಜಸವೆನಿಸಲಾರವು.

ಈಗಿನ ಈ ಶಾಸ್ತ್ರೀಯ ಯುಗದಲ್ಲಿ ಮಕ್ಕಳ ಮನಸ್ಸನ್ನು ಶಾಸ್ತ್ರೀಯವಾಗಿ ಅಭ್ಯಾಸಮಾಡಿದ ಎಷ್ಟೋಜನ ಘನವಿದ್ವಾಂಸರು ತಮ್ಮ ಅನುಭವಗಳನ್ನು ಜಗತ್ತಿನ ಮುಂದೆ ಇಟ್ಟಿದ್ದಾರೆ; ಇಡುತ್ತಿದ್ದಾರೆ. ಫ್ರಾಯಿಡ್, ಎಡ್ಲರ, ಕ್ಲೇರ ಇವರೇ ಮೊದಲಾದವರು ಇಂಥ ಮಾನಸ ಶಾಸ್ತ್ರಜ್ಞರಲ್ಲಿ ಪ್ರಮುಖರು.

ಪ್ರಬುದ್ಧರಂತೆಯೇ ಚಿಕ್ಕಮಗುವಿಗೂ ಮನಸ್ಸಿದೆ. ಅದು ಪ್ರಬುದ್ಧರ ಮನಸ್ಸಿನಷ್ಟು ಸುಸಂಸ್ಕೃತವಾಗಿ ಸುಸಂಘಟಿತವಾಗಿ ಕಾರ್ಯಮಾಡದೆ ಇದ್ದರೂ ಪ್ರಬುದ್ಧರಲ್ಲಿ ಕಾಣಬರುವ ಎಲ್ಲ ಇಚ್ಛೆ, ಒಲವು ಮುಂತಾದ ವಿಕಾರಗಳನ್ನು ತೋರ್ಪಡಿಸುವದು. ಸಾಮಾನ್ಯವಾಗಿ ಹೇಳುವದಾದರೆ ತೀರ ಅಸಂಸ್ಕೃತನಾದ ಮನುಷ್ಯನು ತೋರ್ಪಡಿಸುವ ಎಲ್ಲ ಬಗೆಯ ಮನೋವಿಕಾರಗಳನ್ನು ಚಿಕ್ಕ ಮಗುವು ವ್ಯಕ್ತಮಾಡುವದು. ಮಗುವಿನ ಮನಸ್ಸು ಸಹಜ ಪ್ರವೃತ್ತಿಯುಳ್ಳದ್ದೂ ಸ್ವೇಚ್ಛಾಚಾರವನ್ನು ಬಯಸುವಂಥದೂ ಯಾವದೇತರದ ನಿರ್ದಿಷ್ಟ ನಿಯಮಕ್ಕೆ ಒಳಗಾಗದಂಥದೂ ಇರುವದು. ಮಗುವು ತನ್ನ ವಿಚಾರಗಳು ಸರ್ವಮಾನ್ಯವಾದವು, ಸರ್ವವ್ಯಾಪಿಯಾನವು ಎಂದೂ ಪ್ರತಿಯೊಂದು ವಸ್ತುವೂ ತನ್ನಂತೆ ಸಜೀವವಾಗಿರುವದೆಂದೂ ಭಾವಿಸುವದು. ಸ್ವೇಚ್ಛಾಚಾರಕ್ಕೆ ಅಧೀನವಾದ ಮಗುವು ಶಾಲೆಯ ನಿಯಮಗಳನ್ನು ಲಕ್ಷಿಸದೆ ಅನೀತಿಯಿಂದ ನಡೆಯುವದೂ ಉಂಟು. ಆದರೆ ಆ ಮಗುವು ದೊಡ್ಡದಾಗುತ್ತ ಬಂದಂತೆ ಅದರ ಈ ಬಗೆಯ ಸ್ವೇಚ್ಛಾಚಾರ ಪ್ರವೃತ್ತಿಯು ಕಡಿಮೆಯಾಗಿ ತನ್ನ ಸುತ್ತಲಿನ ಪರಿಸ್ಥಿತಿಗೆ ಅಧೀನವಾಗಿ ನಡೆಯಲು ಕಲಿಯುತ್ತಹತ್ತುವದು; ಸುತ್ತಲಿನ ಸಮಾಜವು ಅದನ್ನು ಹೀಗೆ ಮಾರ್ಪಡಿಸಲು ಬಲಾತ್ಕರಿಸುವದು.

ಬಾಲಕರ ಅಂತರ್ಮನ— ಚಿಕ್ಕ ಬಾಲಕರ ಶಿಕ್ಷಣಕಾರ್ಯದಲ್ಲಿ ನೆನಪಿಡತಕ್ಕ ಇನ್ನೊಂದು ಮಹತ್ವದ ಮಾತೇನೆಂದರೆ, ಮಗುವು ತನ್ನ ಅನುಭವಗಳನ್ನು ಮರೆತು ಬಿಡುವದಿಲ್ಲ. ಅದನ್ನು 'ಅಂತರ್ಮನ' ಎಂಬ ಮನಸ್ಸಿನ ಕೆಳಗಿನ ಇನ್ನೊಂದು ಥರದಲ್ಲಿ ಸಂಗ್ರಹಿಸಿಕೊಳ್ಳುವದು. ಒಂದು ಮಗುವು ಬಾಲ್ಯದಲ್ಲಿ ಒಂದು ಕೆಟ್ಟ ಅನುಭವವನ್ನು ಪಡೆಯಿತೆಂದು ತಿಳಿಯುವ. ಆ ಅನುಭವವು ಅದರ ಬಾಲ್ಯಕಾಲದಲ್ಲಿ ಯಾವ ವಿಶಿಷ್ಟ ಪರಿಣಾಮವನ್ನೂ ಪ್ರಕಟಿಸದೆ ಇದ್ದರೂ ಆ ಮಗುವು ಪ್ರಬುದ್ಧವಾದ ಬಳಿಕ ಆ ಹಿಂದಿನ ಬಾಲ್ಯದ ದಿನದ ಅನುಭವವು ಅದರ ನಡತೆಯಲ್ಲಿ ಪ್ರಕಟವಾಗುವುದು. ಅಂತರ್ಮನವು ಮನಸ್ಸಿನ ತೀರ ಆಳವಾದ ಥರವಾಗಿದ್ದು ಮಗುವು ತನ್ನ ಮನೋವಿಕಾರಗಳ ಅನುಭವವನ್ನು ಅಲ್ಲಿ ಸಂಗ್ರಹಿಸಿಕೊಳ್ಳುವದು. ಆಧುನಿಕ ಮಾನಸಶಾಸ್ತ್ರಜ್ಞರ ಅಭಿಪ್ರಾಯದಂತೆ ಈ ಅಂತರ್ಮನವು

ಮನುಷ್ಯನ ಶೀಲದ ಮತ್ತು ಸ್ವಭಾವದ ಮೇಲೆ ಅತಿಪ್ರಬಲವಾದ ಪರಿಣಾಮ ವನ್ನುಂಟು ಮಾಡುವದು.

ಬಾಲ್ಯದಲ್ಲಿ ಕೆಟ್ಟ ಶಿಕ್ಷಣ ಹೊಂದಿದ, ಅಯೋಗ್ಯ ಸಂಸ್ಕಾರಗಳನ್ನು ಪಡೆದ, ಯೋಗ್ಯ ಬೆಳೆವಣಿಗೆಗೆ ಬಾಧಕವಾದ ಅನುಭವಗಳನ್ನು ಹೊಂದಿದ, ಬಾಲಕರು ಮುಂದಿನ ಆಯುಷ್ಯದಲ್ಲಿ ನಿರೋಗಿಗಳೂ ಸುದೃಢರೂ ಆದ ಉದಾಹರಣೆಗಳು ತೀರ ಕ್ವಚಿತ್ತಾಗಿವೆ. ಬೆಳೆಯು ಸಿರಿಯು ಮೊಳಿಕೆಯಲ್ಲಿಯೇ ಗೋಚರವಾಗುವ ದಲ್ಲವೇ ?

ಕನ್ನಡದಲ್ಲಿ "ಶಿಕ್ಷೆಯಿಲ್ಲದ ಮಗು ಭಿಕ್ಷೆಗೆ ಸಂತಿತು" ಎಂಬದೊಂದು ಗಾದೆಯ ಮಾತಿದೆ. ಈ ವಿಚಾರವನ್ನು ಪಾಲಕರ ಮತ್ತು ಶಿಕ್ಷಕರ ಮನಸ್ಸಿನಿಂದ ಅಳಿಸಿ ಬಿಡುವದು ಅತ್ಯವಶ್ಯವಾಗಿದೆ. ಇದು ಗ್ರಾಹ್ಯವಾದ ಶಾಸ್ತ್ರೀಯ ಅಭಿಪ್ರಾಯ ವಲ್ಲ. ಬಾಲಕರು ಜನ್ಮತಃ ಸ್ವೇಚ್ಛಾಚಾರ ಪ್ರವೃತ್ತಿಯುಳ್ಳವರೂ ಚಂಚಲಸ್ವಭಾವ ದವರೂ ಆಗಿರುವರು. ಅವರು ಒತ್ತಟ್ಟಿಗೆ ಕುಳಿತು ಅಭ್ಯಾಸ ಮಾಡಲು ಒಯಸ ಲಾರರು. ಅವರು ಒಬ್ಬ ಪ್ರಬುದ್ಧ ಸಭ್ಯಗೃಹಸ್ಥನಂತೆ ನಡೆದುಕೊಳ್ಳಲಾರರು. ಆದರೆ ನಾವು ಅವರನ್ನು ಹಿಡಿದು ಕೂಡ್ರಿಸಿ ಯಾವದೊಂದು ವಿಷಯದಲ್ಲಿ ಮನಸ್ಸನ್ನು ತೊಡಗಿಸಿ ಅಭ್ಯಾಸ ಮಾಡಿಸಲು ಹಚ್ಚಬೇಕಾಗುವದಲ್ಲ ! ಶಿಕ್ಷೆಯನ್ನು ವಿಧಿಸದೆ, ಅವರ ಸ್ವೇಚ್ಛಾಚಾರಕ್ಕೆ ತಡೆಯನ್ನುಂಟುಮಾಡದೆ, ಅವರ ಚಂಚಲಸ್ವಭಾವಕ್ಕೆ ವಿರೋಧವನ್ನು ತಂದೊಡ್ಡದೆ, ಅವರ ಚಂಚಲತೆಗೆ ತಡೆಗಟ್ಟದೆ, ಈ ಕಾರ್ಯವು ಹೇಗೆ ಸಾಧಿಸಬೇಕು, ಎಂಬದು ಒಂದು ಕೂಟಪ್ರಶ್ನೆ ! ಇದಕ್ಕೂ ನಮ್ಮ ಉತ್ತರವಿದೆ. ನೀವು ಬಾಲಕರಾಗಿರಿ, ಎಂದರೆ ನೀವು ಬಾಲಕರಮನಸ್ಸಿನ ಒಲವುಗಳನ್ನು ತಿಳಿದು ಕೊಳ್ಳಿರಿ; ಅವರೊಡನೆ ಸೇರಿಕೊಂಡು ಸಹಕಾರದಿಂದ ಕೆಲಸಮಾಡಿರಿ. ನೀವೂ ಅವರೂ ಗೆಳೆಯರಾಗಿ ನಡೆದುಕೊಳ್ಳತೊಡಗಿರಿ ಎಂದರೆ ನಿಮ್ಮ ಶಿಕ್ಷಣಕಾರ್ಯವು ಸುಸೂತ್ರವಾಗಿ ಸಾಗತೊಡಗುವದು. ಇದಕ್ಕೆ ವಿರುದ್ಧವಾಗಿ ನೀವು ಅವರನ್ನು ಬೆತ್ತದ ಬಲದಿಂದ ಆಳಲು ಹೊರಟರೆ ನೀವು ಅವರಿಗೆ ವಿಧಿಸುವ ಶಿಕ್ಷೆಗೆ ಪ್ರತಿಯಾಗಿ ಅವರು ನಿಮಗೆ ಶಿಕ್ಷೆಯನ್ನು ವಿಧಿಸದೆ ಇರಲಾರರು. ಯಾಕಂದರೆ, ಬಾಲಕರಿಗೆ ಶಿಕ್ಷೆಯು ಅಪ್ರಿಯವಾದದ್ದೆಂಬದನ್ನು ನೀವೂ ಒಪ್ಪುವಿರಿ. ಆದ್ದರಿಂದ ನಿಮ್ಮ ಶಿಕ್ಷೆಯ ವಿರುದ್ಧವಾಗಿ ಕೆಲಸಮಾಡುವ ಮನಃಪ್ರವೃತ್ತಿಯು ಆಗ ಅವರಲ್ಲಿ ಉಂಟಾಗುವದರಲ್ಲಿ ಸಂಶಯವಿಲ್ಲ. ಶಿಕ್ಷೆಯನ್ನು ಹೊಂದಿದ ಮಕ್ಕಳು ನಿನುಗೆ ಪ್ರತ್ಯುತ್ತರವಾಗಿ "ಈಗ ನೀವು ನಮಗಿಂತ ಕಸುವುಳ್ಳವರಾಗಿದ್ದದರಿಂದ ಕೈಯೊಳಗಿನ ಕೋಲಿನಿಂದ ನಮ್ಮನ್ನು ಹೊಡೆಯುತ್ತೀರಿ. ಆದರೆ ಒಂದು ದಿನ

ನಾವೂ ನಿಮ್ಮಂತೆ ಬೆಳೆದು ಕಸುವುಳ್ಳವರಾದಾಗ ಈಗಿನ ನಿಮ್ಮ ಹೊಡೆತವನ್ನು ತಿರುಗಿ ಮುಟ್ಟಿಸುತ್ತೇವೆ" ಎಂದು ನಿಮಗೆ ಆಡಿತೋರಿಸಿದರೆ ಆಗ ನಿಮ್ಮ ಮನಸ್ಸಿನ ಸ್ಥಿತಿಯೇನಾಗುವದೆಂಬದನ್ನು ಆಲೋಚಿಸಿರಿ. ಬಾಲಕರು ದೌರ್ಬಲ್ಯದ ಮೂಲಕ ಆಗ ನಿಮಗೆ ಹಾಗೆ ಆಡಿತೋರಿಸದೆ ಇದ್ದರೂ ಅವರ ಮನಸ್ಸಿನಲ್ಲಿ ಈ ವಿಚಾರವು ನಡೆದೇ ನಡೆಯುವದು, ಮತ್ತು ಅದರ ಪರಿಣಾಮವು ಅವರ ಅಂತರ್ಮನದಲ್ಲಿ ಆಗಲೇ ಸೇರುವದು. ಹೀಗೆ ಪುನಃಪುನಃ ಶಿಕ್ಷೆಯನ್ನು ಹೊಂದಿದ ಬಾಲಕನ ಮನಸ್ಸು ಈ ಕಾರ್ಯಕ್ಕೆ ಎಂದರೆ ನಿಮ್ಮನ್ನು ಪ್ರತಿಭಟಿಸುವದಕ್ಕೆ ತಾನಾಗಿ ಸಿದ್ಧವಾಗಿ ಬಿಡುವದು.

ತಮ್ಮ ಕ್ರೂರ ಆಚರಣೆಯು ಬಾಲಕರಲ್ಲಿ ಕ್ರೂರ ಆಚರಣೆಯ ಪ್ರವೃತ್ತಿಯನ್ನು ಹುಟ್ಟಿಸುವದೆಂಬದನ್ನು ತಿಳಿದುಕೊಂಡ ತಾಯಿತಂದೆಗಳು ನಮ್ಮಲ್ಲಿ ತೀರ ವಿರಳ. ನಾವು ಕ್ರೂರತನದಿಂದ ನಡಿಸಿಕೊಂಡ ಮಗುವಿನ ಮನಃಶಕ್ತಿಯು ಕುಂದಿ ಹೋಗುವದು. ಅಂಥ ಮಗುವು ಒಂದುವೇಳೆ ತೀರ ಹೇಡಿಯಾಗಿ ಯಾವ ಕೆಲಸವನ್ನೂ ಮಾಡಲು ಮುಂದೆ ಬರುವ ಸಾಹಸವಿಲ್ಲದ ವ್ಯಕ್ತಿಯಾಗಬಹುದು; ಇಲ್ಲವೆ ಎಲ್ಲ ಶಿಕ್ಷೆ ಭಯ ಭೀತಿಗಳಿಗೆ ವಿಕ್ಕಿದ ಅತಿಶಯ ಕ್ರೂರವಾದ ಸಮಾಜಕ್ಕೆ ವಿರೋಧಿಯಾದ ವ್ಯಕ್ತಿಯಾಗಿ ಮಾರ್ಪಡಬಹುದು.

ಕಳವು ಕೊಲೆಸುಲಿಗೆಗಳನ್ನು ಮಾಡಿದ ಅಪರಾಧಿಗಳ ಮನಸ್ಸನ್ನು ನಿರೀಕ್ಷಿಸಿ ಪರೀಕ್ಷಿಸಿದ ಶಾಸ್ತ್ರಜ್ಞರು ಅವರ ಈ ತರದ ಮನಃ ಪ್ರವೃತ್ತಿಗಳಿಗೆ ಅವರ ಪಾಲಕರು ಬಾಲ್ಯದಲ್ಲಿ ವಿಧಿಸಿದ ಕ್ರೂರ ಶಿಕ್ಷೆಗಳೇ ಬಹುಮಟ್ಟಿಗೆ ಕಾರಣವಾದವೆಂದೂ ಆ ಶಿಕ್ಷೆಗಳಿಂದ ಆಗ ಅವರಲ್ಲುಂಟಾದ ಮನಃ ಪ್ರವೃತ್ತಿಗಳೇ ಮುಂದೆ ವಿಕಾಸವಾಗಿ ಅವರನ್ನು ಅಂಥ ಕ್ರೂರವ್ಯಕ್ತಿಗಳನ್ನಾಗಿ ಮಾರ್ಪಡಿಸಿದವೆಂದೂ ಹೇಳುವರು. ಪ್ರೀತಿಯ ಅಭಾವ, ತಾಯ್ತಂದೆಗಳ ತಿರಸ್ಕಾರ, ಇವು ಬಾಲಕರಲ್ಲಿ ಸಮಾಜದ ವಿಷಯಕ್ಕೆ ವಿರೋಧಭಾವವನ್ನು ಹುಟ್ಟಿಸುವವು. ಮತ್ತು ಮುಂದಿನ ವಯಸ್ಸಿನಲ್ಲಿ ಈಗಿನ ತಾಯ್ತಂದೆಗಳ ವಿಷಯದ ಅನಾದರವೇ ಸಮಾಜದ ಮೇಲಿನ ಅನಾದರವನ್ನು ಹುಟ್ಟಿಸುವದಕ್ಕೂ ಕಾರಣವಾಗುವದು. ಇದರಿಂದ ಬಾಲ್ಯದಲ್ಲಿ ಚಿಕ್ಕಮಕ್ಕಳ ಮನೋಭಾವನೆಗಳನ್ನು ಹತ್ತಿಕ್ಕುವದರಿಂದ ಯಾವ ಕೆಟ್ಟ ಪರಿಣಾಮವಾಗುವದೆಂಬದನ್ನು ಊಹಿಸಬಹುದು.

ಇಷ್ಟೇ ಅಲ್ಲ, ಮನೆಯಲ್ಲಿ ಸ್ವಾತಂತ್ರ್ಯವಿಲ್ಲದೆ ಕೇವಲ ಪರಾಧೀನತೆಯು ಬಂಧನದಲ್ಲಿ ಬೆಳೆದ ಮಗುವಿನ ಜ್ಞಾನತಂತುಗಳು ದುರ್ಬಲವಾಗಿ ಅದರ ಮಾನಸಿಕ ಶಕ್ತಿಗಳು ಕುಂದಿ ಹೋಗುವವು. ಅದು ಮುಂದೆ ಪ್ರಬುದ್ಧವಾದ ತರುವಾಯವೂ

ತೀರ ಸಣ್ಣವುಟ್ಟ ಅಡಚಣೆಗಳು ಬಂದರೂ ಸಹ ಅಂಜಿ ಕೈಕಾಲುಬಿಡುವ ಸ್ವಭಾವ ದ್ದಾಗುವದು. ಕೇವಲ ಕಟ್ಟುನಿಟ್ಟಿನ ನಿಯಮಗಳಿಗೆ ಒಳಗಾಗಿ ಹಿರಿಯರ ಶಿಕ್ಷೆ ಯಲ್ಲಿ ಬೆಳೆದ ಮಕ್ಕಳು ಮುಂದೆ ಪ್ರಬುದ್ಧರಾದಾಗ ಎಂಥ ದುರ್ಬಲ ಪ್ರಕೃತಿ ಯವರಾಗುವರೆಂಬದನ್ನು ಪ್ರತ್ಯಕ್ಷ ಪ್ರಯೋಗಾನುಭವಗಳಿಂದ ತೋರಿಸಿ ಕೊಡ ಬಹುದು. ಮುಂದಿನ ಆಯುಷ್ಯದಲ್ಲಿ ಒದಗುವ ಎಷ್ಟೋ ಮಾನಸಿಕ ರೋಗ ಗಳಿಗೆ ಬಾಲ್ಯದಲ್ಲಿ ಅವರು ಅನುಭವಿಸಿದ ಕೆಟ್ಟ ಮಾನಸಿಕ ತಪ್ಪುತಡೆಗಳೇ ಕಾರಣ ವಾಗುವವೆಂದೂ ಗೊತ್ತಾಗಿದೆ.

ಮನೆಯಲ್ಲಿ ನಾವು ನಮ್ಮ ಮಕ್ಕಳನ್ನು ಹೊಡೆದು, ಬಡಿದು, ತಡೆದು, ಹತ್ತಿಕ್ಕಿ ನಡೆಯಿಸಿಕೊಳ್ಳುವದರಿಂದ ಅವರಲ್ಲಿ ನುಂದೆ ಹುಟ್ಟಬೇಕಾದ ಸ್ವಾತಂತ್ರ್ಯ ಪ್ರೀತಿ ಯೆಂಬ ಮನೋಭಾವನೆಯನ್ನು ಅಂಕುರದಲ್ಲಿಯೇ ಕಸುರಿಸಿ ಬಿಡುತ್ತೇವೆಂಬದನ್ನು ಮರೆಯಕೂಡದು. ತಂದೆಯು ತನ್ನ ಮಗನ ಮೇಲೆ ಅಪ್ರತಿಹತವಾದ ಪ್ರಭುತ್ವ ವನ್ನು ನಡೆಯಿಸಿ "ಕೂಡ್ರು ಎಂದರೆ ಕೂಡ್ರು, ನಿಲ್ಲು ಎಂದರೆ ನಿಲ್ಲು" ಈ ರೀತಿಯಾಗಿ ನಡಿಸಿಕೊಳ್ಳಹತ್ತಿದರೆ ಅವನಲ್ಲಿ ಮುಂದೆ ಸ್ವಾತಂತ್ರ್ಯದ ಹಂಬಲವೇ ಹುಟ್ಟಲಾರದು; ಅವನಲ್ಲಿ ಆತ್ಮವಿಶ್ವಾಸದ ಗಾಳಿಯೇ ಸುಳಿಯದು. ಇಂಥ ಪಾಲಕರು ದೇಶದ ತರುಣ ಪೀಳಿಗೆಯಲ್ಲಿ ಅವಶ್ಯವಾಗಿ ಕಂಡುಬರಬೇಕಾದ ಸ್ವಾತಂತ್ರ್ಯಪ್ರೀತಿ ಆತ್ಮವಿಶ್ವಾಸಗಳ ಕೊಲೆ ಮಾಡುತ್ತಿರುವರೆಂದು ತಿಳಿಯ ಬೇಕಾಗುವದು. ಆದ್ದರಿಂದ ತಾಯ್ತಂದೆಗಳು ಮಕ್ಕಳನ್ನು ಪ್ರೀತಿ-ಸಹಾನು ಭೂತಿ-ಸಹಕಾರಗಳ ಭಾವನೆಯಿಂದ ನಡೆಯಿಸಿಕೊಂಡು ಅವರಲ್ಲಿ ಈ ಮನೋ ಭಾವನೆಗಳನ್ನು ಹುಟ್ಟಿಸಿ ಬೆಳೆಸುವದು ಅತ್ಯವಶ್ಯವಾಗಿದೆ.

ಕೃತಿ ಪ್ರೀತಿ— ಬಾಲಕರು ಯಾವಾಗಲು ಒಂದಿಲ್ಲೊಂದು ಕಾರ್ಯದಲ್ಲಿ ತೊಡಗಿರುವರು. ಕೃತಿ ಪ್ರೀತಿಯು ಅವರ ಹುಟ್ಟುಗುಣ. ಆಟವಾಡುವಾಗ, ಏನಾದರೂ ಬರೆಯುವಾಗ, ಚಿತ್ರ ತೆಗೆಯುವಾಗ, ಮನೆಕಟ್ಟುವದು ಮುಂತಾದ ಹುಡುಗಾಟಿಗೆಯ ಕೆಲಸ ಮಾಡುವಾಗ ಉತ್ಪಾದನಪರವಾದುದೊಂದು (creative) ಮನೋಭಾವವು ವ್ಯಕ್ತವಾಗುವದು. ಮತ್ತೆ ಕೆಲವು ಸಾರೆ ಕೈಗೆ ಸಿಕ್ಕ ಸಾಮಾನುಗಳನ್ನು ಹರಿದು ಮುರಿದು ಕೆಡಿಸುವಾಗ, ಜಗಳಾಡು ವಾಗ, ತುಂಟತನ ಮಾಡುವಾಗ ಅವರಲ್ಲಿ ವಿನಾಶಕ (distructive) ಮನೋ ಭಾವವು ಕಂಡುಬರುವದು. ಈ ಎರಡೂ ಬಗೆಯ ಕಾರ್ಯಪ್ರವೃತ್ತಿ (ಕೃತಿ ಪ್ರೀತಿ) ಯು ಅವರಲ್ಲುಂಟಾಗುವದು ಅವರ ಮಾನಸಿಕ ಜಟುವಟಿಕೆಯ ಪರಿಣಾಮವಾಗಿ ರುವದು. ಬಾಲಕರ ಶಿಕ್ಷಣ ಕಾರ್ಯದಲ್ಲಿ ತೊಡಗಿದವರು ಅವರ ಸಹಜವಾದ

ಮಾನಸಿಕ ಚಟುವಟಿಕೆಗಳ ಮೂಲಕ ಪ್ರಕೆಟವಾಗುವ ವಿನಾಶಕ ಪ್ರವೃತ್ತಿಯನ್ನು ಬದಲಿಸಿ ಅದನ್ನು ಉತ್ಪಾದನಪರ ಪ್ರವೃತ್ತಿಯ ರೂಪಕ್ಕೆ ತರುವದಕ್ಕೆ ಯತ್ನಿಸಬೇಕಾಗುವದು. ಆದ್ದರಿಂದ ಅವರು ಬಾಲಕರನ್ನು ಯಾವದೊಂದು ಕಾರ್ಯದಲ್ಲಿ ತೊಡಗಿಸಲು ಯತ್ನಿಸಬೇಕು. ಸಾಮಾನ್ಯವಾಗಿ ಮಗುವು ತನ್ನ ಕೈಗೆ ಯಾವದೊಂದು ಯೋಗ್ಯ ಕೆಲಸವು ಇಲ್ಲವೆನಿಸಿದಾಗಲೇ ತಂಟೆಯನ್ನು ಪ್ರಾರಂಭಿಸುವದು. ಮಗುವಿಗೆ ಆಟಿಗೆಯ ಸಾಮಾನುಗಳನ್ನು ಒದಗಿಸಿ ಕೊಡುವದು ಚಿತ್ರ ತೆಗೆಯುವದಕ್ಕೆ ಬೇಕಾಗುವ ಉಪಕರಣಗಳು ಚಿತ್ರದ ಪುಸ್ತಕಗಳು ಮುಂತಾದವುಗಳನ್ನು ಸಂಗ್ರಹಿಸಿ ಕೊಡುವದು ಮೊದಲಾದವುಗಳಿಂದ ತುಂಬ ಪ್ರಯೋಜನವಾಗುವದು. ಹಿಂದಿಗಳಾದ ನಾವು ನಮ್ಮ ಮಕ್ಕಳನ್ನು ಸಂಗಡ ಕರೆದುಕೊಂಡು ಅಡ್ಡಾಡುವದು ಕಡಿಮೆ. ಯುರೋಪಿಯನರಲ್ಲಿ ಈ ಪದ್ಧತಿಯು ಹೆಚ್ಚಾಗಿ ಪ್ರಚಾರದಲ್ಲಿರುವದು. ಯುರೋಪಿಯನ್ನರು ತಾವು ಹೊರಗೆ ಹೋಗುವಾಗ ಮಕ್ಕಳನ್ನು ಸಂಗಡ ಕರಕೊಂಡು ಹೋಗಿ ವಸ್ತು ಸಂಗ್ರಹಾಲಯಗಳು, ಪ್ರದರ್ಶನ ಸ್ಥಳಗಳು ಮುಂತಾದವುಗಳನ್ನು ತೋರಿಸುವದಕ್ಕೆ ಎಂದೂ ತಪ್ಪುವದಿಲ್ಲ. ನಾವು ನಮ್ಮ ಮಕ್ಕಳು ತಮಗೆ ತಾವೇ ಬೆಳೆದು ದೊಡ್ಡವರಾಗುವಂತೆ ಅವರ ಮನಃಶಕ್ತಿಗಳೂ ತಾವಾಗಿಯೇ ವಿಕಾಸಹೊಂದುವವೆಂದು ತಿಳಿದುಕೊಳ್ಳುತ್ತೇವೆ. ಇದು ಕೇವಲ ತಪ್ಪುತಿಳಿವಳಿಕೆ. ಮಕ್ಕಳ ಬೆಳೆವಣಿಗೆಗೆ ಆಹಾರ, ಉಡುತೊಡಿಗೆಗಳು ಇವು ಬೇಕಾಗುವಂತೆ ಅವರ ಮಾನಸಿಕ ಬೆಳೆವಣಿಗೆಗೂ ತಕ್ಕ ಪರಿಸ್ಥಿತಿಯು ಬೇಕೇಬೇಕು. ಮಕ್ಕಳ ಮನಸ್ಸಿನ ಸಂಸ್ಕಾರಗಳಿಗೆ ತಂದೆತಾಯಿಗಳೂ ಶಿಕ್ಷಕರೂ ಬಹುಮಟ್ಟಿಗೆ ಜವಾಬುದಾರರಾಗಿರುವರು. ಮಗುವು ಹುಟ್ಟಿದಾಗಲೇ ದುರ್ಬಲ ಮನಸ್ಸಿನದಾಗಿ ಇಲ್ಲವೆ ಒಳ್ಳೆಯ ಕೆಟ್ಟ ನಡತೆಗಳನ್ನು ಕಲಿತು ಅಥವಾ ಹೆಚ್ಚು ಕಡಿಮೆ ಬುದ್ಧಿಶಕ್ತಿಯುಳ್ಳದ್ದಾಗಿ ಹುಟ್ಟುವದೆಂಬದು ಸರಿಯಾದ ವಿಚಾರವಲ್ಲ. ಇದರಲ್ಲಿ ಅಲ್ಪಸ್ವಲ್ಪ ತಥ್ಯಾಂಶವಿರುತ್ತಿದ್ದರೂ ಮಕ್ಕಳ ಮನಸ್ಸನ್ನು ಸರಿಯಾಗಿ ವಿಕಾಸಗೊಳಿಸಿ ಬೆಳೆಯಿಸಿ ಯೋಗ್ಯ ದಿಶೆಗೆ ಒಯ್ದು ಮುಟ್ಟಿಸುವದು ಹಿರಿಯರಾದ ನಮ್ಮ ಕರ್ತವ್ಯವಾಗಿದೆ.

ನಮ್ಮ ದೇಶದಲ್ಲಿ ಮಕ್ಕಳನ್ನು ಅಚ್ಚೆಯಿಂದ ಬೆಳಿಸುವ ಪದಿಪಾಠವು ಹೆಚ್ಚು. ಮಕ್ಕಳನ್ನು ಪ್ರೀತಿಸುವದು ಬೇರೆ, ಅವರನ್ನು ಮಿತಿಮೀರಿದ ಮಮತೆಯಿಂದ ಅತ್ತಿತ್ತ ಸರಿಯಗೊಡದಿರುವದು ಬೇರೆ. ಮಕ್ಕಳನ್ನು ಪ್ರೀತಿಸುವದೆಂದರೆ ಅವರಿಗೆ ಉಣಿಸಿ, ತಿನಿಸಿ, ಉಡಿಸಿ, ತೊಡಿಸಿ, ಲಾಲಿಸಿ, ಪಾಲಿಸಿ ತೃಪ್ತಿಪಡದೆ ಅವರನ್ನು ಒಂಟಿಯಾಗಿ ಬಿಡದೆ ಅವರಿಗೆ ಗಾಳಿ, ಬಿಸಿಲು ತಗಲದಂತೆ ಹಗಲಿರುಳು ಅವರನ್ನು ಬೆನ್ನಿಗೆ ಅಂಟಿಸಿಕೊಂಡಿರುವದೆಂದು ಅರ್ಥವಲ್ಲ. ಈ ತರದ ಅಚ್ಚೆಯ ಪಾಲನೆಯು

ಮಕ್ಕಳಿಗೂ ಹಿತಕರವಲ್ಲ; ಸಮಾಜಕ್ಕೂ ಒಳಿತಲ್ಲ. ತಾಯಿಯ ಉಡಿಯೊಳಗೇ ಕುಳಿತು ಬೆಳೆದ ಮಗುವು ಮುಂದೆ ಸ್ವಾತಂತ್ರ್ಯದಿಂದ ನಡೆಯಲು ಧೈರ್ಯಪಡಲಾರದು. ಹೀಗೆ ಮಾಡುವದರಿಂದ, ಸ್ವಾತಂತ್ರ್ಯವನ್ನು ವಹಿಸಿ ಕೆಲಸ ಮಾಡುವದಕ್ಕೆ ಸಂದರ್ಭವೇ ಒದಗದೆ ಇರುವದರಿಂದ, ಇಂಥ ಎಷ್ಟೋ ಹುಡುಗರು ಮುಂದೆ ಯಾವ ಕೆಲಸಕ್ಕೂ ಬಾರದವರಾದದ್ದನ್ನು ನಾವು ನೋಡ ಬಹುದು. ಇದರಿಂದಲೇ ನಮ್ಮಲ್ಲಿ ''ಅಜ್ಜಿ ಸಾಕಿದ ಮಗು ಯಾತಕ್ಕೂ ಬಾರದು'' ಎಂಬ ಗಾದೆಯುಂಟಾಗಿದೆ. ಕನ್ನಡ ಕವಿಯೊಬ್ಬನು ಹೇಳಿದಂತೆ ಮುಪ್ಪಿನಲ್ಲಿ ಮಕ್ಕಳನ್ನು ಹಡೆದ ತಂದೆತಾಯಿಗಳು ತಮ್ಮ ಮಕ್ಕಳನ್ನು ಹಗಲಿರುಳು ಹಿಂಬಾಲಿಸಿರತೊಡಗಿದರೆ ಮುಂದೆ ಅವರು ಕೇವಲ ಪರಾವಲಂಬಿಗಳಾದ ವ್ಯಕ್ತಿಗಳಾಗಿ ಕೂಡುವರು.

''ಅಪ್ಪ ಬಾ ಮಣೆತಲ್ಪ ಬಾ ಕಂ- |
ದರ್ಪಬಾ ಶ್ರುತಿತಲ್ಪಬಾ ಮು- |
ದ್ದಪ್ಪ ಬಾ ಮರಿಯಾನೆ ಬಾ ನೂಣಿಕ್ಕಬಾಯೆನುತ ||
ಅಪ್ಪಿ ತೊಡಿಗೆಯ ತೊಡಿಸಿ ಸುತರುಗ- |
ಳೊಪ್ಪವನು ನೆರೆ ನೋಡಿ ಕಾಯದ |
ಮುಪ್ಪು ಮರೆದಮುರತೆಯ ಪಡೆದವರಂತೆ ಹಿಗ್ಗುವರು ||''

ಹೀಗೆ ಮಕ್ಕಳನ್ನು ಅತಿ ಪ್ರೀತಿಯಿಂದ, ಅಚ್ಚೆಯಿಂದ ಬೆಳಿಸಿ ಕೆಡಿಸಿದ ಉದಾಹರಣೆಗಳನ್ನು ನಮ್ಮ ಹಿಂದಿ ಕುಟುಂಬಗಳಲ್ಲಿ ಎಷ್ಟೋ ಕಾಣಬಹುದು, ಯುರೋಪಿಯನ್ನರಲ್ಲಿ ಮಕ್ಕಳ ರಕ್ಷಣೆಯ ಕಾರ್ಯದಲ್ಲಿ ತಾಯ್ತಂದೆಗಳು ''ನೀವು ನಿಮ್ಮ ಕಾಲಮೇಲೆಯೇ ನಿಲ್ಲುವದಕ್ಕೆ ಕಲಿಯಿರಿ; ಸ್ವಾವಲಂಬಿಗಳಾಗಿರಿ;'' ಎಂಬ ಉಪದೇಶವನ್ನು ಗುರಿಯಾಗಿಟ್ಟುಕೊಂಡಿದ್ದರೆ ನಮ್ಮವರು ''ಮಕ್ಕಳೇ ತಾಯಿತಂದೆಗಳನ್ನು ಮರೆಯಬೇಡಿರಿ. ಮಕ್ಕಳೇ ಮನೆಯೊಳಗಿನ ವಿಣುಕು ದೀಪವಾಗಿರಿ'' ಎಂದು ಉಪದೇಶಿಸುವರು.

ಹಿಂದಿಗಳ ಕೌಟುಂಬಿಕ ಜೀವನದಲ್ಲಿ ಅವ್ಯವಸ್ಥೆಯೂ ಸುವ್ಯವಸ್ಥೆಯಿಲ್ಲದಿರುವದೂ ಮತ್ತೊಂದು ಪ್ರಾಮುಖ್ಯವಾದ ಕೊರತೆಯು. ನಾವು ನಮ್ಮ ಮಕ್ಕಳಿಗೆ ಕೆಲವೊಂದು ನಿಯಮಗಳನ್ನು ಅನುಸರಿಸಿ ನಡೆಯಲಿಕ್ಕೆ ಕಲಿಸಬೇಕು. ಮನೆಯಲ್ಲಿ ಸುವ್ಯವಸ್ಥೆಯಿಂದ ನಡೆಯಲಾರದ ಮಗುವು ಹೊರಗೆ ಸುವ್ಯವಸ್ಥೆಯಿಂದ ನಡೆಯುವದು ಅಸಂಭವವೆನಿಸುವದು. ಕಾಲನಿಯಮವನ್ನು ಅನುಸರಿಸಿ

ಕೆಲಸವಾಡುವದಕ್ಕೆ ಬಾಲಕನು ಮನೆಯಲ್ಲಿಯೇ ಕಲಿಯಬೇಕಾಗುವದು. ಊಟದ ವೇಳೆಯು ಗೊತ್ತಾದದ್ದು ಇರಬೇಕು. ಇದರಿಂದ ಮಕ್ಕಳ ದಿನದ ಜೀವನಕ್ರಮದಲ್ಲಿ ಒಂದು ಬಗೆಯ ಕಾಲಕ್ರಮವು ನೆಲೆಗೊಳ್ಳಲು ಅನುಕೂಲ ವಾಗುವದು. ನಮ್ಮಲ್ಲಿ ಮಗುವು ಅಳಹತ್ತಿದ ಕೂಡಲೆ ಅದಕ್ಕೆ ಆಹಾರವನ್ನು ಕೊಡುವದೊಂದು ಪರಿಪಾಠವಿದೆ. ಅಳುವದನ್ನು ನಿಲ್ಲಿಸುವದಕ್ಕೆ ಇದೊಂದು ಸಾಧನವೆಂದು ಅವರ ಸಾಮಾನ್ಯ ತಿಳುವಳಿಕೆ. ಅದು ಮಗುವಿಗೆ ಆಹಾರವನ್ನು ಕೊಡುವ ಹೊತ್ತು ಹೌದೋ ಅಲ್ಲವೋ ಎಂಬ ವಿಚಾರವೇ ಇರದು.

ಓಣಿಯೊಳಗಿನ ಟಪಾಲಿನ ಪೆಟ್ಟಿಗೆಯು, ಯಾವಾಗ ಯಾವ ಪತ್ರವು ಬಂದು ಬಿದ್ದರೂ ಹೊಟ್ಟೆಯೊಳಗೆ ಹಾಕಿಕೊಳ್ಳುವಂತೆ ಹಿಂದಿ ಬಾಲಕರು ಬೇಕಾದಾಗ ಬೇಕಾದ ಆಹಾರವನ್ನು ನುಂಗಿ ಬಿಡುವರು. ಉಣಿಸು ತಿನಿಸುಗಳು ಬೇಡವೆಂದು ಹೇಳುವದೇ ನಮ್ಮ ಮಕ್ಕಳಿಗೆ ಗೊತ್ತಿಲ್ಲ. ಇದು ನಮಗೆ ಲಜ್ಜಾಸ್ಪದವಾದ ಮಾತು. ಯಾಕಂದರೆ ವಿುತಿವಿುರಿದ ಆಹಾರ ಸೇವನೆಯು ಮಾನಸಿಕ ಶಕ್ತಿಯನ್ನು ದುರ್ಬಲಗೊಳಿಸುವದು. ತಿನ್ನುವದು, ತಿಂದದ್ದನ್ನು ದಕ್ಕಿಸಿಕೊಳ್ಳುವದು, ಇದಕ್ಕಾಗಿಯೇ ಮಗುವಿನ ಶಕ್ತಿಯೆಲ್ಲ ವ್ಯಯವಾಗಿ ಹೋಗುವದರಿಂದ ವಿಚಾರಕ್ಕೂ, ಉತ್ಪಾದಕ ಕಾರ್ಯ ಚಟುವಟಿಕೆಗಳಿಗೂ ಶಕ್ತಿಯೇ ಉಳಿಯದಂತಾಗುವದು.

ಇಂಗ್ಲಿಷಿನವರು ಹೇಳುವ ಮ್ಯಾನರ್ಸ (ಸಭ್ಯಾಚರಣೆ) ಗಳೂ, ನಮ್ಮ ಮಕ್ಕಳಿಗೆ ಬಾಲ್ಯದಲ್ಲಿಯೇ ಕಲಿಸಲ್ಪಡಬೇಕು. ನಮ್ಮವರಲ್ಲಿ ಇಂಗ್ಲಿಷನವರು ತಮ್ಮ ಮಾತಿನಲ್ಲಿ ಅಡಿಗಡಿಗೆ ಉಪಯೋಗಿಸುವ "ಉಪಕಾರವಾಯಿತು" (ಥ್ಯಾಂಕ್ಸ) "ದಯಮಾಡಿ" (ಪ್ಲೀಜ್) ಮೊದಲಾದ ಸಭ್ಯತೆಯ ಮಾತುಗಳು ತೀರ ವಿರಳ; ಇಲ್ಲವೆಂದೇ ಹೇಳಬೇಕು. (ಮೈಸೂರ ಪ್ರಾಂತದವರಲ್ಲಿ ದಯವಿಟ್ಟು ಸ್ವೀಕರಿಸಿರಿ, ದಯವಾಡಿರಿ. ಮುಂತಾದ ಮಾತುಗಳನ್ನು ನಾವು ಕಾಣಬಹುದು.) ನಮ್ಮ ಮನೆತನಗಳಲ್ಲಿಯೂ, ಸಾಲೆಗಳಲ್ಲಿಯೂ, ಇಂಥ ಸಭ್ಯತೆಯ ನಡೆನುಡಿಗಳು ಪ್ರಚಾರದಲ್ಲಿ ಬರುವದು ಅತ್ಯವಶ್ಯವಾಗಿದೆ. ಇತರ ಸುಶಿಕ್ಷಿತ ಜನಾಂಗದ ತರುಣರಿಗೆ ಹೋಲಿಸಿ ನೋಡಿದರೆ ನಮ್ಮ ದೇಶದ ತರುಣ ಪೀಳಿಗೆಯು ಇಂಥ ಸಭ್ಯತೆಯ ನಡೆನುಡಿಗಳಲ್ಲಿ ತೀರ ಹಿಂದುಳಿದಿರುವದೆಂದು ಹೇಳಬೇಕಾಗುವದು.

ಪ್ರಕೃತಿಯೇ ಮನುಷ್ಯನ ಶೀಲಸ್ವಭಾವಗಳನ್ನು ಉಂಟುಮಾಡುವ ಪ್ರಬಲ ಶಕ್ತಿಯು. ನಾವು ನಮ್ಮ ಮಕ್ಕಳಿಗೆ ಶಾಸ್ತ್ರೀಯವಾಗಿ ಶಿಕ್ಷಣ ಕೊಡುತ್ತ ಸಾಗಿದರೆ ಅವರಲ್ಲಿರುವ ಒಳ್ಳೆಯ ಶಕ್ತಿಗಳನ್ನು ಸ್ವಾಭಾವಿಕವಾಗಿ ವಿಕಾಸಗೊಳಿಸಬಹುದು.

ಬಾಲಕರ ಮನಸ್ಸನ್ನೂ ಆರೋಗ್ಯವನ್ನೂ ಶಾಸ್ತ್ರೀಯವಾಗಿ ಅಭ್ಯಾಸಮಾಡಿದ ಮಾರ್ಗದರ್ಶಕರಾದ ವ್ಯಕ್ತಿಗಳು ನಮ್ಮ ದೇಶದಲ್ಲಿ ಇನ್ನೂ ಹೆಚ್ಚಾಗಿ ಮುಂದೆ ಬರಬೇಕಾಗಿದೆ. ನಮಗೆ ಇಂಥವರ ಮಹತ್ವವು ಅತಿಶಯವಾಗಿದೆ.

—N. V. K.

ವ್ಹರ್ನ್ಯಾಕ್ಯೂಲರ ಫೈನಲ್ ಪರೀಕ್ಷೆ ೧೯೩೮

(ಅಕ್ಟೋಬರ ಸಂಚಿಕೆಯಿಂದ ಮುಂದೆ ಸಾಗಿದ್ದು)

ಇತಿಹಾಸ :— ಒಟ್ಟಿನಮೇಲೆ ಈ ವರ್ಷದ ಉಮೇದವಾರರ ಕೆಲಸವು ತಕ್ಕ ಮಟ್ಟಿಗೆ ಸಮಾಧಾನಕರವಾಗಿದೆಯೆಂದು ಹೇಳಬಹುದು. ರಾಜ್ಯದಾಡಳಿತೆಗೆ ಸಂಬಂಧಿಸಿದ ಪ್ರಶ್ನೆಗೆ ಉಮೇದವಾರರು ಬರೆದಿರುವ ಉತ್ತರವನ್ನು ನೋಡಿದರೆ, ಅವರಿಗೆ ಈ ವಿಷಯವನ್ನು ಸರಿಯಾಗಿ ಕಲಿಸಲೇ ಇಲ್ಲವೋ ಅಥವಾ ಶಿಕ್ಷಕರು ಕಲಿಸಿದ್ದನ್ನು ಇವರು ಸರಿಯಾಗಿ ತಿಳಿದುಕೊಂಡೇ ಇಲ್ಲವೋ ಎನ್ನುವಂತಿತ್ತು. ಇತಿಹಾಸದೊಳಗಿನ ಘಟನೆಗಳ ಕಾಲಕ್ರಮದ ವಿಚಾರವು ಉಮೇದವಾರರಿಗೆ ತಿಳಿದೇ ಇಲ್ಲವೆನ್ನಬೇಕಾಗುವದು. ಪ್ರಶ್ನೆಗಳನ್ನು ಚನ್ನಾಗಿ ಓದಿ, ಅದರಲ್ಲಿ ಏನು ಕೇಳಿರುವರೆಂಬದನ್ನು ಸರಿಯಾಗಿ ತಿಳಿದುಕೊಂಡು ಉತ್ತರ ಬರೆಯುವ ಪರಿಪಾಠವು ಬಹು ಜನ ಉಮೇದವಾರರಿಗೆ ಇದ್ದಿಲ್ಲ. ಈ ರೂಢಿಯನ್ನು ಮಾಡಿಸುವದು ಅವಶ್ಯವಾಗಿದೆ.

ಉಮೇದವಾರರು ಪ್ರಶ್ನ ಪತ್ರಿಕೆಯಲ್ಲಿ ಕೇಳಿರುವ ಸೂಚನೆಗಳನ್ನು ಓದಿ ನೋಡಿಕೊಂಡು ಎಷ್ಟು ಪ್ರಶ್ನಗಳಿಗೆ ಉತ್ತರ ಬರೆಯಬೇಕು, ಅದರಲ್ಲಿ ಅವಶ್ಯವಾಗಿ ಬರೆಯಲೇಬೇಕಾದ ಪ್ರಶ್ನೆ ಯಾವದು? ಎಂಬದನ್ನು ತಿಳಿದುಕೊಂಡಿರಲಿಲ್ಲ. ಇದರಿಂದ ಅನೇಕ ತೊಂದರೆಗಳಾದವು.

ಭೂಗೋಲ :— ಪರೀಕ್ಷೆಗೆ ಕುಳಿತ ಉಮೇದವಾರರಲ್ಲಿ ಪಾಸಾದವರ ಪ್ರಮಾಣವನ್ನು ನೋಡಿದರೆ ಒಟ್ಟಿನ ಮೇಲೆ ಭೂಗೋಲ ವಿಷಯದ ಜ್ಞಾನವು ಉಮೇದವಾರಿಗೆ ತಕ್ಕಮಟ್ಟಿಗೆ ಸಮಾಧಾನಕರವಾಗಿ ಆಗಿರುವದೆಂದು ಹೇಳಬಹುದು. ಆದರೆ ಅವರಿಗೆ ನಮ್ಮ ದೇಶದ-ಹಿಂದುಸ್ತಾನದ-ಭೂಗೋಲ ಜ್ಞಾನಕ್ಕಿಂತಲೂ ಯುರೋಪ, ಅಮೇರಿಕಾಖಂಡಗಳ ಭೂಗೋಲ ಜ್ಞಾನವೇ ಚನ್ನಾಗಿ ಇರುವದೆಂದು ಹೇಳುವಂತಾಗಿತ್ತು.

(ಮುಂದೆ ಸಾಗುವದು)

ಸ್ಕೌಟ ವರ್ತಮಾನಗಳು

ನಮ್ಮ ಧಾರವಾಡದ ಸುಪ್ರಸಿದ್ಧ ವಕೀಲರೂ, ರಾಜಕೀಯ ಚಳವಳಿಯ ಪುರಸ್ಕರ್ತರೂ, ದೇಶಾಭಿಮಾನಿಗಳೂ, ಸಾರ್ವಜನಿಕ ಮುಂದಾಳುಗಳೂ ಆದ ಶ್ರೀಮಾನ್ ಜೋಗ ವಿಶ್ವನಾಥರಾಯರು M. L. A. ಅವರು ಧಾರವಾಡ ಜಿಲ್ಲೆಯ ಪರವಾಗಿ ಡಿಸ್ಟ್ರಿಕ್ಟ ಸ್ಕೌಟ ಕಮೀಶನರರಾಗಿ ನಿಯುಮಿಸಲ್ಪಟ್ಟಿರುವರು.

ಸ್ಕೌಟ ಚಳವಳಿಯಲ್ಲಿ ಕೆಲಕಾಲದಿಂದ ಕಂಡುಬರುತ್ತಿದ್ದ ಸಾರ್ವಜನಿಕ ಅಸಂತುಷ್ಟಿಯ ಪರಿಣಾಮವಾಗಿ "ಹಿಂದುಸ್ತಾನ ಸ್ಕೌಟ್" ಎಂಬ ಹೊಸ ಅಭಿಧಾನವನ್ನೂ, ಹೊಸ ಹುಮ್ಮಸವನ್ನೂ ಹೊಂದಿ ಹೊರಗೆ ಬಂದಿರುವ ನಮ್ಮ ದೇಶೀಯ ಸ್ಕೌಟ ಚಳವಳಿಯು ಸರ್ವಾದರಣೀಯವಾಗಬೇಕಾದ ಸಂಧಿಕಾಲವಿದು. ಇಂತಹ ಸಂಧಿಕಾಲದಲ್ಲಿ ನಾವೆಲ್ಲರೂ ಹೊಸ ಹುರುಪಿನಿಂದ ಕಾರ್ಯಾರಂಭ ಮಾಡುವದು ಅತ್ಯವಶ್ಯವಾಗಿದೆ. ಮೇಲೆ ಹೇಳಿದಂತೆ ಶ್ರೀ. ಜೋಗ ವಿಶ್ವನಾಥ ರಾಯರು ನಮ್ಮ ಡಿಸ್ಟ್ರಿಕ್ಟ ಸ್ಕೌಟ ಕಮೀಶನರರಾಗಿ ಮುಂದೆ ಬಂದಿರುವದು, ನಮ್ಮ ಜಿಲ್ಲೆಯ ಸ್ಕೌಟ ಚಳವಳಿಯ ಸುದೈವವೆನ್ನಬೇಕಾಗಿದೆ. ಯಾವ ಕಾರ್ಯ ದಲ್ಲಿಯೇ ಆಗಲಿ ಇವರು ಒಮ್ಮೆ ಕೈಹಾಕಿ ಕೆಲಸವನ್ನು ಪ್ರಾರಂಭಿಸಿದರೆಂದರೆ ಅವರಿಗೆ ಅದರಲ್ಲಿ ಯಶಸ್ಸು ಕಟ್ಟಿಟ್ಟಬುತ್ತು. ಧಾರವಾಡ ಜಿಲ್ಲೆಯ ಸ್ಕೌಟ ಚಳವಳಿಯು ಯಾವಾಗಲೂ ಹತ್ತು ಹೆಜ್ಜೆ ಮುಂದೇ ಇದ್ದದ್ದು; ಆದುದರಿಂದ ಈಗಿನ ಈ ನೂತನ ವಾತಾವರಣದಲ್ಲಿ ನೂತನ ಡಿಸ್ಟ್ರಿಕ್ಟ ಕಮೀಶನರ ಪ್ರೋತ್ಸಾಹ ದಿಂದ ಅದು ಇನ್ನಷ್ಟು ಮುಂದುವರಿಯಬಹುದೆಂದು ಆಶಿಸಿದರೆ ತಪ್ಪಾಗದು. ಹಿಂದಿನ ನಮ್ಮ ಸ್ಕೌಟ ಚಳವಳಿಯ ಪುರಸ್ಕರ್ತರಾದ ಶ್ರೀ. ಬಿ. ಎಸ್ ರಾಜಾಧ್ಯಕ್ಷ I. C. S. ಇವರ ಉದಾರಾಶ್ರಯದ ಕೆಳಗೆ ಉದಯಹೊಂದಿ ಅತ್ಯಂತ ಚತುರ ಕಾರ್ಯದಕ್ಷರಾದ ಇಂಜನಿಯರೆನಿಸಿಕೊಂಡ ನಮ್ಮ ಧಾರವಾಡ ಡಿಸ್ಟ್ರಿಕ್ಟಿನ ಅಸಿಸ್ಟಂಟ ಕಮೀಶನರರಾದ ಶ್ರೀ. ಎಮ್ ರಾಮಸ್ವಾಮಿಯವರ ಕಾರ್ಯಕ್ಷಮತೆ ಯಿಂದ ಮೂರ್ತಿಮಂತ ಸುಂದರ ಸ್ವರೂಪಕ್ಕೆ ಇಳಿದ ಧಾರವಾಡ "ಡಿಸ್ಟ್ರಿಕ್ಟ ಸ್ಕೌಟ್ ಹೆಡ್ ಕ್ವಾರ್ಟರ" ಎಂಬ ನೂತನ ಕಟ್ಟಡವು ಇದೇ ಈಗ ಪೂರ್ಣವಾಗಿದೆ. ಹೊಸ ಡಿಸ್ಟ್ರಿಕ್ಟ ಸ್ಕೌಟ್ ಕಮೀಶನರರಾದ ಶ್ರೀ. ಜೋಗ ವಿಶ್ವನಾಥರಾಯರಿಗೆ ಸುಸ್ವಾಗತವನ್ನು ಬಯಸುವದೂ, ಕಾರ್ಯಗೌರವಗಳಿಂದ ಸ್ಥಳಾತರಹೊಂದಿದ ಶ್ರೀಮಾನ್ ರಾಜಾಧ್ಯಕ್ಷರ ಮತ್ತು ಶ್ರೀ. ರಾಮಸ್ವಾಮಿಯವರ ಆಭಾರವನ್ನಿಸು

ವದೂ ನಮ್ಮ ಸ್ಕೌಟ ಬಾಂಧವರ ಕರ್ತವ್ಯವಾಗಿದೆ, ಮತ್ತು ದೇಶಾಭಿಮಾನ ದ್ಯೋತಕವಾದ ಹೊಸ ಹೆಸರಿನಿಂದ ಈ ನೂತನ ಕಾರ್ಯಕ್ಷಮತೆಯ ಹೊಸ ಹುಮ್ಮಸದಿಂದಲೂ ಹೊರಟಿರುವ ಹಿಂದುಸ್ತಾನ ಸ್ಕೌಟ ಜಳವಳಿಯಲ್ಲಿ ಎಲ್ಲರೂ ಹೊಸ ಹುರುಪಿನಿಂದ ಸೇರಿ ದೇಶಹಿತದ ಕಾರ್ಯಕ್ಕೆ ಮುಂದೆಬರಬೇಕೆಂದು ಪ್ರಾರ್ಥಿಸುವೆವು.

ಪ್ರಾಯ್ಮರಿ ಸ್ಕೂಲು ಲೀವ್ವಿಂಗ್ ಸರ್ಟಿಫಿಕೇಟ ಹೆಣ್ಣುಮಕ್ಕಳ ಪರೀಕ್ಷೆ ೧೯೩೯

ಈ ಪರೀಕ್ಷೆಯು ಈ ವರ್ಷ ಕೆಳಗೆ ಕಾಣಿಸಿದ ಸೆಂಟರುಗಳಲ್ಲಿ ಸೋಮವಾರ ೧೩ ನೆಯ ಮಾರ್ಚ ೧೯೩೯ ನೆಯ ದಿವಸ ಹಾಗು ಆದರ ಮುಂದಿನ ದಿವಸಗಳಲ್ಲಿ ನಡೆಯುವದು.

೧. ೧ ಧಾರವಾಡ ೨ ಹುಬ್ಬಳ್ಳಿ ೩ ಗದಗ ೪ ಬೆಳಗಾವ ೫ ವಿಜಾಪುರ ೬ ಕಾರವಾರ ೭ ಕೊಲ್ಹಾಪುರ.

೨. ಪ್ರತಿಯೊಂದು ಸೆಂಟರಿನಲ್ಲಿ ಪರೀಕ್ಷೆಯ ಕಮೀಟಿಯವರು ಪರೀಕ್ಷೆಯನ್ನು ನಡೆಯಿಸುವರು.

ಆಯಾಕಮೀಟಿಗಳ ಚೆಯರಮನ್ನರು ಕೆಳಗೆ ಕಾಣಿಸಿದಂತೆ ಇರುವರು.

ಧಾರವಾಡ— ಮೆ॥ ಲೇಡೀ ಸುಪರಿಂಡೆಂಟರು ಟ್ರೇ. ಕಾ. ಫಾರ್ ವಿಮೆನ್ ಧಾರವಾಡ.

ಹುಬ್ಬಳ್ಳಿ— ಮೆ॥ ಹೆಡ್‌ಮಾಸ್ತರರು ಆಂಗ್ಲೋ ಉರ್ದು ಹೈಸ್ಕೂಲು ಧಾರವಾಡ.

ಗದಗ— ಮೆ॥ ಸೀನಿಯರ ಅಸಿ. ಡೆಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರು, ಧಾರವಾಡ.

ಬೆಳಗಾವ— ಮೆ॥ ಹೆಡ್‌ಮಾಸ್ತರರು ಸರದಾರ ಹೈಸ್ಕೂಲು ಬೆಳಗಾವ.

ವಿಜಾಪುರ— ಮೆ॥ ಹೆಡ್‌ಮಾಸ್ತರರು ಗವ್ಹರ್ಮೆಂಟ ಹೈಸ್ಕೂಲು ವಿಜಾಪುರ.

ಕಾರವಾರ— ಮೆ॥ ಹೆಡ್‌ಮಾಸ್ಟರಿಸ್ ಗವ್ಹರ್ಮೆಂಟ ಹೈಸ್ಕೂಲು ಕಾರವಾರ.

ಕೊಲ್ಹಾಪುರ—ಮೆ॥ ಎಜ್ಯುಕೇಶನಲ್ ಇನಸ್ಪೆಕ್ಟರ ಸಾ॥ ಕೊಲ್ಹಾಪೂರ.

೩. ಉಮೇದವಾರರು ಪರೀಕ್ಷೆಗೆ ಕೂಡಲಿಚ್ಛಿಸುವ ಸೆಂಟರಿನ ಪರೀಕ್ಷಾ ಕಮೀಟಿಯ ಚೆಅರಮನ್ನರ ಕಡೆಗೆ ಪರವಾನಿಗಿ ಅರ್ಜಿಯನ್ನು ಛಾಪಿಸಿದ ಅರ್ಜಿ ನಮೂನೆಗಳ ಮೇಲೆ ಕಳಿಸತಕ್ಕದ್ದು. ಛಾಪೀ ಅರ್ಜಿ ನಮೂನೆಗಳು ಆಯಾ ಸೆಂಟರಿನ ಚೆಅರಮನ್ನರ ಕಡೆಗೆ ಇರುವವು. ಬೇಕಾದವರು ತರಿಸಿಕೊಳ್ಳಬೇಕು. ಇದಕ್ಕೆ ರೊಕ್ಕ ಕೊಡಬೇಕಾಗುವದಿಲ್ಲ.

೪. ಪರೀಕ್ಷೆಗಳಿಗಾಗಿ ಉಮೇದವಾರರು ಕಳಿಸುವ ಅರ್ಜಿಗಳನ್ನು ೩ ರೂಪಾಯಿ ಫೀ ಸಹಿತವಾಗಿ ತಮ್ಮ ಸೆಂಟರಿನ ಚೆಅರಮನ್ನರ ಕಡೆಗೆ ೧೫-೨-೧೯೩೯ ನೆಯ ದಿವಸ ಅಥವಾ ಅದಕ್ಕೂ ಮೊದಲು ಮುಟ್ಟುವಂತೆ ಕಳಿಸತಕ್ಕದ್ದು. ತಡವಾಗಿ ಬಂದ ಅಥವಾ ಫೀ ಇಲ್ಲದೆ ಬಂದ ಅರ್ಜಿಗಳನ್ನು ನಿರಾಕರಿಸಲಾಗುವದು.

೫. ಉರ್ದು ಪ್ರಾಯ್ಮರಿ ಲೀವ್ವಿಂಗ್ ಸರ್ಟಿಫಿಕೇಟ ಪರೀಕ್ಷೆಯು ಸಹ ಮೇಲೆ ಬರೆದ ತಾರೀಖುಗಳ ದಿವಸನೇ ಮೇಲೆ ಬರೆದ ಸೆಂಟರುಗಳಲ್ಲಿ ನಡೆಯುವದು.

೬. ಪರೀಕ್ಷೆಗಳಿಗಾಗಿ ನಿಯಮಿಸಿದ ಬುಕ್ಕುಗಳು ಕನ್ನಡ, ಮರಾಠಿ, ಹಾಗು ಉರ್ದು ಇತ್ಯಾದಿಗಳು ಮುಂಬಯಿ ಗವರ್ನಮೆಂಟ ಗ್ಯಾಝೆಟ್ ಭಾಗ ೧ ಪಾನು ೧೨೩೨-೧೨೩೩ ತಾ. ೨೩-೬-೧೯೩೮ ನೆಯ ದರಲ್ಲಿ ಪ್ರಸಿದ್ಧಿಸಲ್ಪಟ್ಟಿರುವವು.

೭. ಮೇಲಿನ ಪರೀಕ್ಷೆಯ ಉಮೇದವಾರರ ಪರೀಕ್ಷೆಯ ವಿಷಯಗಳು ಹಾಗು ವಿದ್ಯಾರ್ಥಿನಿಯರ ವಯಸ್ಸು ಇತ್ಯಾದಿಗಳನ್ನು ಮುಂಬಯಿ ಗವರ್ನಮೆಂಟ ಗ್ಯಾಝೆಟಿನ ಮೇಲೆ ವಿವರಿಸಿದ ೨ನೆಯ ಪ್ಯಾರಾದಲ್ಲಿ ನೋಡಿಕೊಳ್ಳಬೇಕು.

ವಿ. ಇ. ಸಾ॥ ದ. ಭಾಗ
ರವರ ಕಚೇರಿ
ತಾ॥ ೧೩-೧೨-೧೯೩೮

ಬಿ. ಜೆ. ಜಿ. ಶಾಸ್ತ್ರಿ,
ಎಜ್ಯುಕೇಶನಲ್ ಇನಸ್ಪೆಕ್ಟರ ಸಾ॥ ದ. ಭಾ.

೧೯೩೯ನೆಯ ಇಸವಿಯ ಹೆಣ್ಣುಮಕ್ಕಳ ಪ್ರಾಯ್ಮರಿ ಸ್ಕೂಲು ಲೀವ್ವಿಂಗ್ ಸರ್ಟಿಫಿಕೇಟ ಪರೀಕ್ಷೆಯ
(ಕನ್ನಡ, ಮರಾಠಿ, ಉರ್ದು) ವೇಳಾಪತ್ರಿಕೆಯು

ತಾರೀಖು	ಸ್ಟಾ ಟಾಯಿಮು ಇಂದ	ಸ್ಟಾ ಟಾಯಿಮು ವರೆಗೆ	ವಿಷಯಗಳು.	ಗುಣಗಳು.	ಶರಾ.
ಸೋಮವಾರ ೧೩-೩-೩೯	೧೦ ಘಂ.	೧೦-೪೫ ಪೂರ್ವಾಹ್ನ	ಉಮೇದವಾರರ ಹಾಜರಿ ತೆಗೆದು ಕೊಳ್ಳುವದು.		
ಸದರ	೧೧ ,,	ಅಪರಾಹ್ನ ೧ ಘಂ.	೧ನೆಯ ಸದರ (ಅ) ಹಾಗು (ಬ) ಮರಾಠಿ, ಗುಜರಾಥಿ ಕನ್ನಡ, ಉರ್ದು.	(ಅ) ೭೫ (ಬ) ೭೫ ೧೮೦	
ಸದರ	೨ ,,	೪ ,,	೨ನೆಯ ಸದರ ನಿಬಂಧ ಹಾಗು ಕೈಬರಹ		
ಮಂಗಳವಾರ ೧೪-೩-೩೯	೧೧ ,,	೧ ,,	೫ನೆಯ ಸದರ ಇತಿಹಾಸ.	೭೫	
ಸದರ	೨ ,,	೪ ,,	೬ನೆಯ ಸದರ ಆರೋಗ್ಯಶಾಸ್ತ್ರ.	೭೫	
ಬುಧವಾರ ೧೫-೩-೩೯	೧೧ ,,	೨ ,,	೩ನೆಯ ಸದರ (ಅ ಹಾಗು (ಬ ಗಣಿತ ಹಾಗು ಮನೆಯ ಜಮಾಖರ್ಚು.	(ಅ) ೬೦ ಹಾಗು (ಬ) ೩೦	
ಸದರ	೩ ,,	೫ ,,	೪ನೆಯ ಸದರ ಭೂಗೋಲ	೭೫	

ಹೆಚ್ಚಿನ ಮಾಹಿತಿಗಾಗಿ ಶ್ರೀ. ಸ. ಜರೀಕಟ್ಟಿ.

೨೦

ತಾರೀಖು	ಸ್ಪೈ. ಟಾಯಿಮು		ವಿಷಯಗಳು.	ಗುಣಗಳು.	ಶರಾ.
	ಇಂದ	ವರೆಗೆ			
ಗುರುವಾರ ೧೬-೩-೫೯	೧೧	೨	೭ನೆಯ ಸದರ ಹೊಲಿಗೆಯ ಕೆಲಸ	೧೦೦	
ಸದರ	೩	೫	೬ನೆಯ ಸದರ ಐಚ್ಛಿಕ ವಿಷಯ (ಡ್ರಾಯಿಂಗ್ ಪ್ರಕೃತಿ ವಿಮರ್ಶೆ ಅಥವಾ ಗಾಯನ)	೭೫	

ಸೂಚನೆ:— ಉಮೇದವಾರರು ಈ ಮೂರರಲ್ಲೊಂದು ಐಚ್ಛಿಕ ವಿಷಯವನ್ನು ತೆಗೆದುಕೊಳ್ಳಲೇಬೇಕು. ಹಾಗು ಉಮೇದವಾರರು ಪರೀಕ್ಷೆಯ ಆರಂಭದ ದಿವಸ (೧೩-೩-೫೯) ಮಾತ್ರ ಪರೀಕ್ಷೆ ಆರಂಭವಾಗುವ ಮೊದಲು ೧ ತಾಸು ಮುಂಚಿತವಾಗಿ ಪರೀಕ್ಷೆಯ ಹಾಲಿನಲ್ಲಿ ಹಾಜರ ಇರಬೇಕು.

ತ್ವರೆಮಾಡಿರಿ ಪ್ರಾ. ಸ್ಕೂಲ್ ಲೀ. ಪರೀಕ್ಷೆಯ ತ್ವರೆಮಾಡಿರಿ !!

ಗದ್ಯ-ಪದ್ಯ ಸಮುಚ್ಚಯ

ಪುಟ ೩೫೦ !] [ಬೆಲೆ ೧೩ ಆಣೆ !

ಚಿಕ್ಕ ಕಥೆಗಳೂ, ಪ್ರಬಂಧಗಳೂ, ಏಕಾಂಕ ನಾಟಕ, ಬೇರೆಬೇರೆ ಕಥೆ-ಕಾದಂಬರಿಗಳಲ್ಲಿಯ ವಿಷಯಗಳೂ, ಸಂಭಾಷಣೆಗಳೂ, ಬೇರೆಬೇರೆ ಗ್ರಂಥಕರ್ತರಿಂದ ಆರಿಸಿದ ಭಾಗಗಳುಳ್ಳ ಪುಸ್ತಕವೆಂದರೆ ಇದೊಂದೇ ! ಈಗಿನ ಸಾಹಿತ್ಯದ ಮಾದರಿಯು ಇದರಿಂದ ಸರಿಯಾಗಿ ಗೊತ್ತಾಗುವಂತಿದೆ. ಇದರ ಕೊನೆಗೆ ಕನ್ನಡದಲ್ಲಿಯ ಹಳೆಯ ಹಾಗೂ ಹೊಸಮಾದರಿಯ ಎಲ್ಲ ಪ್ರಸಿದ್ಧ ಕವಿಗಳ ಕವನಗಳೂ ಮಾದರಿಯ ಪ್ರಶ್ನೆಗಳೂ ಅಡಕವಾಗಿವೆ. ಶ್ರೀ. ಮುದವೀಡು ಕೃಷ್ಣರಾಯರು, ಶ್ರೀ. ಆಲೂರ ವೆಂಕಟರಾಯರು, ಪ್ರೊ. ಮುಗಳಿ, ಶ್ರೀ. ಕೃಷ್ಣಶರ್ಮ ಬೆಟಗೇರಿ, ಪ್ರೊ. ಗುಂಜೀಕರ, ಪ್ರೊ. ಏಮಾಂಸ, ಪ್ರೊ. ಟಿ. ಎಸ್. ಪಾಟೀಲ, ಶ್ರೀ. ಕೈ. ಹೊಸಕೆರೆ ಚಿದಂಬರಯ್ಯ, ಶ್ರೀ. ಹ. ಗೋ. ದೇಶಪಾಂಡೆ, ಶ್ರೀಯುತ ಹುಯಿಲಗೋಳ ನಾರಾಯಣರಾಯರು ಮೊದಲಾದವರ ಗದ್ಯ ಭಾಗಗಳು ಸಾಹಿತ್ಯದ ಮಾದರಿಗಳಾಗಿವೆ. ಅದರಂತೆ ಶ್ರೀ. ಬಿ. ಎಸ್. ಶ್ರೀಕಂಠಯ್ಯ, ಶ್ರೀ. ಆನಂದಕಂದ, ಪ್ರೊ. ಎ. ಕೃ. ಗೋಕಾಕ, ಶ್ರೀ. ಸಾಲಿ ರಾಮಚಂದ್ರರಾವ ಮೊದಲಾದವರ ಅರ್ವಾಚೀನ ಪದ್ಯಗಳೂ ಶ್ರೀಪುರಂದರದಾಸ, ಸರ್ವಜ್ಞ ಕವಿಗಳನ್ನು ಮೊದಲುಗೊಂಡು ಷಡಕ್ಷರಿ, ಪಂಪ, ರನ್ನ, ಹೊಸ್ಸರ ಕಾವ್ಯಗಳ ಮಾದರಿಗಳೂ ಹೇರಳವಾಗಿ ನೋಡಲು ದೊರೆಯುವವು. ಕನ್ನಡದಲ್ಲಿ ಇದುವರೆಗೂ ಈ ಪ್ರಕಾರದ ವಿಷಯಗಳಿಂದ ಕೂಡಿದ ಗ್ರಂಥವು ಇಲ್ಲವೇ ಇಲ್ಲ. ನೋಡಿದರೆ ಬಿಡುವಂತಿಲ್ಲ ! ತ್ವರೆಮಾಡಿರಿ !! ಒಂದು ಪ್ರತಿ ತರಿಸಿ ನೋಡಿ ಅನುಭವಪಡೆಯಿರಿ. ಎಲ್ಲ ಬುಕ್ಕ ಸೇಲರರಲ್ಲಿಯೂ ಈ ಪುಸ್ತಕಗಳು ದೊರೆಯುತ್ತವೆ. ಒಮ್ಮೆ ಕೊಂಡು ಅನುಭವ ಪಡೆಯಿರಿ.

ಸೋಲ ಎಜಂಟರು :

ಎ. ಆರ್. ಶಿವನಾಗಪ್ಪಾ, ವಾಗ್ವಿಲಾಸ ಬುಕ್‌ಡಿಪೊ,

ಹುಬ್ಬಳ್ಳಿ.

ಪಿ. ಘ. ಕಟ್ಟಿಮನಿ
ಕೃತ
*
* ಕನ್ನಡ ಬಾಲಬೋಧೆ
ಬೆಲೆ : ೦-೧-೬
* ಕನ್ನಡ ಶಿಶುಬೋಧೆ
ಬೆಲೆ : ೦-೧-೩
* ಕಂದನ ಕಾವ್ಯ
ಬೆಲೆ : ಮೂರಾಣೆ
ಇವು ಮಕ್ಕಳ ನೆಚ್ಚಿನ
ಪುಸ್ತಕಗಳು
*
ದೊರೆಯುವ ಸ್ಥಳ
ರಾಮಾಶ್ರಯ
ಬುಕ್ ಡಿಪೋ,
ಧಾರವಾಡ
ತೋಂಟದಾರ್ಯ
ಪ್ರೆಸ್, ಧಾರವಾಡ.

ಕಂದನ ಕಾವ್ಯ

ಚಿತ್ರಮಯವಾಗಿದೆ ಬೆಲೆ : ಮೂರಾ

ಇದು ತೀರ ಚಿಕ್ಕಮಕ್ಕಳಿಗೂ ಕೂಡ ತಿಳಿಯುವಂ
ಅತಿ ಸರಳವಾದ ಸುಲಭ ಶೈಲಿಯಲ್ಲಿ ಬರೆಯಲ್ಪ
ಮಕ್ಕಳ ಕಾವ್ಯ. ಹಾಡುಗಳಲ್ಲೆಲ್ಲ ಉಚ್ಚತರವಾ
ಮಕ್ಕಳ ವಿಚಾರಗಳೂ ಭಾವನೆಗಳೂ ತುಂಬಿಕೊಂಡಿ
ಮಕ್ಕಳು ಇದರಲ್ಲಿರುವ ಹಾಡುಗಳನ್ನು ಓದಿ ಹಾಡಿ
ರಾಗಿ ನಲಿದಾಡುವರು. **ಇಂಥ ಪುಸ್ತಕವು ಕನ್ನ
ದಲ್ಲಿ ಪ್ರಕಟವಾದುದು ಇದೇ ಮೊದಲು.** ಮಕ್ಕ
ಮನೋಗತವನ್ನರಿತು ಮಕ್ಕಳ ಆಟ-ನೋಟ-ವಿನೋ
ಪುಂತಾದ ಬೇರೆಬೇರೆ ವಿಷಯಗಳನ್ನನುಲಕ್ಷಿಸಿ ತಕ
ವಾದ ಹಾಡುಗಳನ್ನು ರಚಿಸಿ ಪ್ರಕಟಿಸಿರುವುದರಿಂದ
ಪುಸ್ತಕಕ್ಕೆ ಶೈಕ್ಷಣಿಕ ದೃಷ್ಟಿಯಿಂದ ಅತಿ ಪ್ರಾಧಾ
ತೆಯು ದೊರೆತಿದೆ.

ಪ್ರಾಯ್ಮರಿ ಸ್ಕೂಲ್ ಲೀವ್ವಿಂಗ್ ಸರ್ಟಿಫಿಕೇಟ್
ಪರೀಕ್ಷೆಯ ಉಮೇದವಾರರಿರಾಗಿ

೧. **ಕನ್ನಡ ವಾಚನಪಾಠಮಾಲೆ** ಬೆಲೆ ೦ ೧೨-೦
೨. **ಕನ್ನಡ ಕವಿತಾಪಾಠಮಾಲೆ** ಬೆಲೆ ೦ -೬-೦
ಎರಡನ್ನೂ ಕೂಡಿಸಿ ಬಾಯಿಂಡ್ ಮಾಡಿದ ಪುಸ್ತಕ ೧- ೧-೦

ಗಣಿತ ನೆಯ ಇಸವಿಯಿಂದ ಮೇಲೆ ಬರೆದ ಪರೀಕ್ಷೆಯು ಕನ್ನಡ ವಿಷಯ
ಬದಲಾಗಿದೆಯಷ್ಟೇ. ಈ ಹೊಸ ಕ್ರಮದ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಉತ್ತ
ಕೊಡಲು ಸಮರ್ಥರಾಗಬೇಕೆಂದು ಈ ಪುಸ್ತಕವು ಪ್ರಕಟಿಸಲ್ಪಟ್ಟಿದೆ. ಇದರ
ವಾಚನಪಾಠ ಕವಿತಾ ಪಾಠಗಳ ಸಂಗ್ರಹವಿರುವದು. ಕೋಶ, ಟಿಪ್ಪ
ಶಬ್ದವ್ಯುತ್ಪತ್ತಿ ಇತ್ಯಾದಿಗಳನ್ನೂ ಹೊಸ ಮಾದರಿಯ ಪ್ರಶ್ನೆಗಳನ್ನೂ ಕೊ
ಕೊಟ್ಟಿದೆ. ಇವುಗಳಿಂದ ಶಿಕ್ಷಕರಿಗೂ ಉಪಯೋಗವಾಗುವಂತೆ ಅದೆ. ಪುಸ್ತಕ
ಎಲ್ಲ ಬುಕ್ ಡಿಪೋಗಳಲ್ಲಿಯೂ ದೊರೆಯುವವು.

ಪ್ರಕಾಶಕರು

ಸ್ಥಾಪನೆ : ೧೮೬೫ ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯ ಶತಮಾನೋತ್ತರ ಬೆಳ್ಳಿ ಹಬ್ಬದ

ಪುಸ್ತಕ ಪ್ರದರ್ಶನ ೧೯೮೯



ಶತಮಾನೋತ್ತರ ಬೆಳ್ಳಿ ಹಬ್ಬ
(ಎಸ್.ಎಸ್.ಎಲ್.ಸಿ ೧೦ನೆ)
ವರ್ಷ

ಡಿ.ಚನ್ನಬಸಪ್ಪನವರು
(೧೮೭೫–೧೯೪೧)
ನೆಯ ಸಂಪುಟ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡಿಪ್ಯೂಟಿ ಚನ್ನಬಸಪ್ಪ ವೃತ್ತ, ರೊದ್ದರಸ್ತೆ, ಧಾರವಾಡ – ೮

ಜನವರಿ ೧೯೪೦ Reg. No B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕಿಯೂ ಸಮಾವೇಶವಾಗಿವೆ.)

ಕನ್ನಡ
ಪ್ರಾಥಮಿಕ ಶಿಕ್ಷಣ
Kannada Prathamika Shikshana

ಸಂಪಾದಕರು:

ರಾಘವೇಂದ್ರರಾವ ಶೇಷಗಿರಿರಾವ ಮಡಿಮನ್, ಬಿ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧.	ನಮ್ಮ ವಿದ್ಯಾಧಿಕಾರಿಗಳು	೧
೨.	೨೪ನೆಯ ಕನ್ನಡ ಸಾಹಿತ್ಯ ಸಮ್ಮೇಲನ	೩
೩.	ಹೆಣ್ಣುಮಕ್ಕಳ ಪ್ರಾಯ್ಮರಿ ಸ್ಕೂಲ್ ಲೀವ್ಸಿಂಗ್ ಸರ್ಟಿಫಿಕೇಟ್ ಪರೀಕ್ಷೆ—೧೯೪೦	೫
೪.	ಧಾರವಾಡ ಡಿ. ಎಸ್. ಬಿ. ಯ ಶಾರೀರಿಕ ಶಿಕ್ಷಣ ಶಿಬಿರ ಹಾವೇರಿ..	೧೬
೫.	ಬೆನಕನ ಪಬ್ಬ	೧೭
೬.	ಪ್ರಕಟನೆ	೨೫

Printed by K. R. Bhise at the Karnatak Printing Works, Dharwar and Published by R. S. Madiman, B. A., Head Master Training School, Dharwar at his Office.

ಓದಿರಿ ! ತ್ವರಿಮಾಡಿರಿ !!

ವಾಗ್ವಿಲಾಸ ಬುಕ್‌ಡೀಪೋಕ್ಕೆ ಇಂದೇ ಪತ್ರ ಬರೆಯಿರಿ

ಶಾಸ್ತ್ರೀಯ ಪಾಠಗಳ ಟಿಪ್ಪಣಿಗಳು

ಕನ್ನಡ ೭ನೇ ಇಯತ್ತೆ ಹಾಗು ಮುಲಕಿ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಬಹು ಬೆಲೆಯುಳ್ಳ ಪುಸ್ತಕವಾಗಿದೆ. ಶ್ರೀ. ಆರ್. ಕೆ. ನಾಯಿಕ, ಬಿ. ಎ. ಎಜ್‌ಮಿನಿಸ್ಟ್ರೇಟಿವ್ಹ ಆಫೀಸರ ಡಿಸ್ಟ್ರಿಕ್ಟ ಸ್ಕೂಲಬೋರ್ಡ ಧಾರವಾಡ ಇವರು ಶ್ರಮವಹಿಸಿ ಬರೆದ ಪುಸ್ತಕವಿದು. ಬೆಲೆ: ೬ ಆಣೆ ಮಾತ್ರ.

ಸುಲಭ ಬಾಲಬೋಧೆ

ಇದು ಸರಕಾರದಿಂದ ಮಂಜೂರಾಗಿದ್ದು ಎಲ್ಲ ಶಾಲೆಯವರು ಉಪಯೋಗಿಸುತ್ತಿರುವರು. ಶ್ರೀ. ಬಸವಾರ್ಯ ಬೂದಿಹಾಳಮಠ ಸುಪರವಾಯಿಝರರು ಗ್ರಂಥಕರ್ತರು. ೧ ರ. ೯ ಪೈ.

ಕನ್ನಡಿಗರ ಕಥೆ ಅಥವಾ ಕರ್ನಾಟಕ ಇತಿಹಾಸ

ಏಳನೆಯ ಇಯತ್ತೆಯ ಕನ್ನಡ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವೆಂದು ಹೆಸರುಪಡೆದಿದೆ. ಬರೆದವರು ಕ. ರಾ. ಅಡಬಡ್ಡಿ. ಬೆಲೆ: ೬ ಆಣೆ

ವರ್ಷಭವಿಷ್ಯ

(ಶ್ರೀ. ರಾಮಭಟ್ಟ ಕೃತ ಬೆಲೆ: ೬ ಆಣೆ)

ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಪುಸ್ತಕಗಳು, ಕಥೆ ಕಾದಂಬರಿಗಳು, ಪಂಚಾಂಗಗಳು ಮಾರಾಟಕ್ಕೆ ಸಿಗುತ್ತವೆ. ವ್ಯಾಪಾರಸ್ಥರಿಗೆ ಧಾರವಾಡ ಕವಿಶಾಸನ ಕೊಡುವೆವು. ಸ್ವಲ್ಪದರಲ್ಲಿ ಹೇಳುವದೆಂದರೆ ನಮ್ಮಲ್ಲಿ ಸಿಗದಿರುವ ಪುಸ್ತಕಗಳೇ ಇಲ್ಲ.

ಎ. ಆರ್. ಶಿವನಾಗಪ್ಪ,
ಪ್ರೊಪ್ರೈಟರ
ವಾಗ್ವಿಲಾಸ ಬುಕ್ ಡೀಪೋ, ಹುಬ್ಬಳ್ಳಿ

ಪ್ರಾಥಮಿಕ ಶಿಕ್ಷಣ

ಸಂಪಾದಕರು :
ರಾಘವೇಂದ್ರರಾವ ಶೇಷಗಿರಿರಾವ ಮಡಿವಾನ್, ಬಿ.ಎ.,

ಸಂಪುಟ ೭೮ | ಜನವರಿ ೧೯೪೦ | ಪರ್ವ ೧೧. ಸಂ. ೧೦

ನಮ್ಮ ವಿದ್ಯಾಧಿಕಾರಿಗಳು

ಡ. ಭಾಗದ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು

ಹಿಂದಿನ ಸಂಚಿಕೆಗಳಲ್ಲಿ ವಿವರಿಸಿದಂತೆ ನಮ್ಮ ಭಾಗದ ಅಸಿ. ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾಗಿದ್ದ ಶ್ರೀಮಾನ್ ತಾವಡೆ ಸೀತಾರಾಮರಾಯರು ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ್ದರಿಂದ ತೆರವಾದ ಆ ಸ್ಥಳಕ್ಕೆ ಧಾರವಾಡ ಹೈಸ್ಕೂಲಿನ ಹೆಡ್‌ಮಾಸ್ಟರರಾಗಿದ್ದ ಶ್ರೀ. ಬಿ. ಡಿ. ಥಿಟೆ, ಬಿ.ಎ., ಇವರು ನೇಮಕವಾದ ಸಂಗತಿಯನ್ನು ನಮ್ಮ ವಾಚಕರು ಈ ಮೊದಲೇ ತಿಳಿದಿರಬಹುದು. ಆ ಮಹನೀಯರ ವಿಷಯದ ಕೆಲವು ಮುಖ್ಯ ಮಾತುಗಳನ್ನು ನಮ್ಮ ಶಿಕ್ಷಕವರ್ಗದ ತಿಳುವಳಿಕೆಗಾಗಿ ಇಲ್ಲಿ ಕೊಟ್ಟಿದ್ದೇವೆ.

ಶ್ರೀಮಾನ್ ಥಿಟೆ ಭೀಮರಾಯರು ವಿಜಾಪುರ ಜಿಲ್ಲೆಯವರು. ಬಾದಾಮಿ ತಾಲೂಕಿನೊಳಗಿನ ಬಂದಾ ಚಿಕ್ಕ ಹಳ್ಳಿಯು ಅವರು ಹುಟ್ಟಿದ ಊರು. ಅವರ ಪ್ರಾಥಮಿಕ ಶಿಕ್ಷಣವು ಬೀಳಗಿ ಪೇಠೆಯಲ್ಲಿ ಮುಗಿದ ಬಳಿಕ ಬಾಗಲಕೋಟೆಗೆ ಬಂದು ಮಾಧ್ಯಮಿಕ ಶಿಕ್ಷಣವನ್ನು ಹೊಂದಿದರು. ಅವರು ಹುಟ್ಟಿದ್ದು ಕ್ರಿ. ಶ. ೧೮೮೬ನೆಯ ಇಸವಿಯಲ್ಲಿ. ವಿಜಾಪುರ ಜಿಲ್ಲೆಯು ನಮ್ಮ ಕರ್ನಾಟಕದ ಇತರ ಭಾಗಗಳಿಗಿಂತಲೂ ತೀರ ಹಿಂದುಳಿದಿದ್ದೆಂದು ಈಗಲೂ ತಿಳಿಯಲ್ಪಡುವದು. ಕೇವಲ ವಿದ್ಯಾಶಾಲೆಯುಳ್ಳ ಊರುಕೂಡಿಯೂ ವಿದ್ಯಾರ್ಥಿಗಳಷ್ಟೇ ಸಾಲೆಗೆ ಹೋಗುವ ಆಗಿನ ಪರಿಸ್ಥಿತಿಯಲ್ಲಿ ನಮ್ಮ ಭೀಮರಾಯರು ಮಾಧ್ಯಮಿಕ ಶಿಕ್ಷಣವನ್ನು ಮುಗಿಸುವಷ್ಟರಿಂದಲೇ ಕೃತಕೃತ್ಯರಾದೆ ಕಾಲೇಜಿನ ಶಿಕ್ಷಣಕ್ಕಾಗಿ ಪುಣೆಗೆ ಹೋಗಿ ಫರ್ಗ್ಯೂಸನ್ ಕಾಲೇಜಿನಲ್ಲಿ ತಮ್ಮ ಅಭ್ಯಾಸವನ್ನು ಮುಂದರಿಸಿದರು. ಭಾಷೆ,

ಸಾಹಿತ್ಯಗಳ ಅಭ್ಯಾಸದಲ್ಲಿ ಪ್ರಾರಂಭದಿಂದಲೂ ಪ್ರೀತಿಯುಳ್ಳ ಇವರು ಇಂಗ್ಲಿಷು ಸಂಸ್ಕೃತ ಭಾಷೆಗಳನ್ನು ಮುಖ್ಯ ವಿಷಯಗಳಾಗಿ ಆಯ್ದುಕೊಂಡು ಬಿ. ಎ. ಪಾಸಾದ ಬಳಿಕ ಪವಿತ್ರವಾದ ಶಿಕ್ಷಣದ ಕಾರ್ಯಕ್ಷೇತ್ರದಲ್ಲಿ ಸೇರಿ ನೌಕರಿಯನ್ನು ಆರಂಭಿಸಿದರು. ಸುಶಿಕ್ಷಿತರ ಸಂಖ್ಯೆಯು ನಾಕಷ್ಟು ಇಲ್ಲದ ಆಗಿನಕಾಲದಲ್ಲಿ ಮನಸ್ಸುಮಾಡಿದ್ದರೆ ಹೆಚ್ಚಿನ ಅಧಿಕಾರ ಉತ್ಪನ್ನಗಳು ದೊರೆಯಬಹುದಾದ ರೆವಿನ್ಯೂ ಮೊದಲಾದ ಇತರ ಖಾತೆಗಳಲ್ಲಿ ಇವರಿಗೆ ನೌಕರಿಯು ಸಹಜವಾಗಿ ದೊರೆಯುವಂತಿದ್ದಿತು. ಆದರೆ ಪವಿತ್ರವಾದ ಶಿಕ್ಷಣಕಾರ್ಯದಲ್ಲಿ ಸಹಜವಾದ ಪ್ರವೃತ್ತಿಯುಳ್ಳ ಇವರು ಹೈಸ್ಕೂಲಿನಲ್ಲಿ ಒಬ್ಬ ಶಿಕ್ಷಕರಾಗಿ ಸೇರಿಕೊಂಡು ಬಹುಕಾಲ ವಿದ್ಯಾರ್ಥಿಗಳಿಗೂ ಸಹ ವ್ಯವಸಾಯಿಗಳಿಗೂ ಮೇಲಣ ಅಧಿಕಾರಿಗಳಿಗೂ ತುಂಬ ಪ್ರಿಯರಾಗಿ ಕೆಲಸ ಮಾಡುತ್ತ ಬಂದರು. ವಿಜಾಪುರ ಹೈಸ್ಕೂಲಿನಲ್ಲಿಯೇ ಬಹುಕಾಲ ಕೆಲಸ ಮಾಡಿದ ತರುವಾಯ ಬೆಳಗಾಂವಿಯ ಹೈಸ್ಕೂಲಿನ ಮೊದಲನೆಯ ಅಸಿಸ್ಟಂಟರಾಗಿ ನೇಮಕಪಟ್ಟ ಸ್ವಲ್ಪ ದಿನಗಳಲ್ಲಿಯೇ ಕಾರವಾರ ಹೈಸ್ಕೂಲಿನ ಮುಖ್ಯಾಧ್ಯಾಪಕರಾಗಿ ಹೋಗುವ ಸಂದರ್ಭವು ಇವರಿಗೆ ಕೂಡಿಬಂದಿತ್ತು. ಅಲ್ಲಿಂದ ಧಾರವಾಡ ಹೈಸ್ಕೂಲಿನ ಮುಖ್ಯಾಧ್ಯಾಪಕರಾಗಿ ಬಂದವರು ಈಗ ಅಸಿಸ್ಟಂಟ ಇನ್‌ಸ್ಪೆಕ್ಟರರ ಪದವಿಗೆ ಏರಿರುವರು.

ಈ ವಿವರಣೆಯಿಂದ ಶ್ರೀಮಾನ್ ಥಿಟೆ ಭೀಮರಾಯರು ಹೈಸ್ಕೂಲುಗಳಲ್ಲಿಯೇ ಬಹುಕಾಲ ಕೆಲಸಮಾಡಿದ ನುರಿತ ಶಿಕ್ಷಕರೆಂಬುದು ಸಹಜವಾಗಿ ಕಂಡುಬರುವದು. ಅವರು ಹೈಸ್ಕೂಲಿನ ಎಲ್ಲ ಚಟುವಟಿಕೆಗಳಲ್ಲಿ ಮುಂಚಾಳಾಗಿ ಕೆಲಸ ಮಾಡುವ ಪ್ರವೃತ್ತಿಯುಳ್ಳವರು. ವಿದ್ಯಾರ್ಥಿಗಳ ಪ್ರವಾಸ, ಶಾರೀರಿಕ ಚಟುವಟಿಕೆಗಳು, ವಾಚನಾಲಯ ವಸತಿಗೃಹಗಳು, ಸ್ಕೌಟ ಕಾರ್ಯಕಲಾಪಗಳು, ಮೊದಲಾದ ಎಲ್ಲ ಕಾರ್ಯಗಳಲ್ಲಿ ಇವರು ತುಂಬ ಉತ್ಸಾಹದಿಂದ ಕೆಲಸ ಮಾಡುತ್ತಿದ್ದರು. ಇಂಗ್ಲಿಷು ಕನ್ನಡ ಭಾಷೆಗಳನ್ನು ಕಲಿಸುವದರಲ್ಲಿ ತುಂಬ ಕುಶಲರಾಗಿದ್ದು ವಿದ್ಯಾರ್ಥಿಗಳ ಮನಸ್ಸನ್ನು ಆಕರ್ಷಿಸಿಕೊಂಡು ಬಹು ದಕ್ಷತೆಯಿಂದ ಪಾಠ ಹೇಳುತ್ತಿದ್ದರೆಂಬುದು ಅವರ ವರ್ಗದಲ್ಲಿ ಕಲಿತ ವಿದ್ಯಾರ್ಥಿಗಳ ಅನುಭವದ ಮಾತು.

ಶಿಕ್ಷಣ ಕಾರ್ಯದಲ್ಲಿ ತುಂಬ ಪ್ರೀತಿ ಅನುಭವಗಳುಳ್ಳ ಶಾಂತ ದಾಂತ ಸರ್ವ ಸಮತಾಬುದ್ಧಿಯ ಈ ಮಹನೀಯರು ಇಂಥ ಗೌರವದ ಸ್ಥಳಕ್ಕೆ ಬಂದಿರುವದು ಶಿಕ್ಷಕರ ಮತ್ತು ಶಿಕ್ಷಣ ಸಂಸ್ಥೆಗಳ ಸುದೈವವೆನ್ನಬೇಕು. ದೇವರು ಈ ಮಹನೀಯರಿಗೆ ಇದಕ್ಕೂ ಹೆಚ್ಚಿನ ಅಧಿಕಾರವೈಭವಗಳನ್ನು ದಯಪಾಲಿಸಲೆಂದು ಹಾರೈಸುವೆವು.

೨೪ನೆಯ ಕನ್ನಡ ಸಾಹಿತ್ಯ ಸಮ್ಮೇಲನ ಬೆಳಗಾಂವಿ ೧೯೩೯

ಕಳೆದ ಡಿಸೆಂಬರ ತಿಂಗಳ ಕೊನೆಯ ವಾರದಲ್ಲಿ (ತಾ. ೨೫, ೨೬, ೨೭, ೨೮) ಬೆಳಗಾಂವಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವು ತುಂಬ ಯಶಸ್ವಿಯಾಗಿ ನೆರವೇರಿತೆಂಬದನ್ನು ನಮ್ಮ ವಾಚಕರು ಕಂಡು, ಕೇಳಿ, ಓದಿ ತಿಳಿದಿರಬಹುದು. ಉತ್ತರ ಕರ್ನಾಟಕದ ವೀರ-ದೇಶಭಕ್ತರೂ ಭಾಷಾಭಿಮಾನಿಗಳೂ ಆದ ಶ್ರೀ. ಮುದವೀಡು ಕೃಷ್ಣರಾಯರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಇತ್ತೀಚೆಗೆ ಕನ್ನಡಿಗರ ಮನಸ್ಸನ್ನು ಬಹುವಾಗಿ ಆಕರ್ಷಿಸಿಕೊಂಡ ಉತ್ತರ ಕರ್ನಾಟಕದ ಒಂದು ಪ್ರಮುಖ ಪಟ್ಟಣವೂ ಹಿಂದಿನಕಾಲದ ಕನ್ನಡದ ತಿರುಳ್ನಾಡಿನ ಪ್ರಸಿದ್ಧ ಸ್ಥಳವೂ ಆದ ಬೆಳಗಾಂವಿಯಲ್ಲಿ ಈ ಸಮ್ಮೇಲನವು ನೆರವೇರಿದ್ದು ಈಗ ಮೂರನೆಯ ಸಾರೆ. ಈ ಕಾರಣಗಳಿಂದ ಈ ಸಾರೆಯ ಸಮ್ಮೇಲನವು ಮೊದಲೇ ಎಲ್ಲ ಕನ್ನಡಿಗರ ಮನಸ್ಸನ್ನು ಆಕರ್ಷಿಸಿಕೊಂಡಿದ್ದಿತು. ರಾಜಸೇವಾಸಕ್ತ ಶ್ರೀ. ಬಿ. ಎಮ್. ಶ್ರೀಕಂಠಯ್ಯನವರು, ಶ್ರೀ. ಮಾಸ್ತಿಯವರು, ಶ್ರೀ. ಎ. ಆರ್. ಕೃಷ್ಣಶಾಸ್ತ್ರಿಗಳು, ಶ್ರೀ. ಸಿ. ಕೆ. ವೆಂಕಟರಾಮಯ್ಯನವರು, ಶ್ರೀ. ವಿ. ಸೀತಾರಾಮಯ್ಯನವರು ಮೊದಲಾದ ಆಧುನಿಕ ಕನ್ನಡ ಸಾಹಿತ್ಯಭಕ್ತರೂ ನಾಡುನುಡಿಗಳ ಪುರಸ್ಕರ್ತರೂ ಪ್ರಚಾರಕರೂ ಆದ ಮಹನೀಯರ ದೂರದ ಆಗಮನದಿಂದ ಸ್ಥಾನಿಕ ಮತ್ತು ಉತ್ತರ ಕರ್ನಾಟಕದ ಇತರ ಭಾಗಗಳೊಳಗಿನ ತಾಯ್ನುಡಿಯ ಪ್ರೀತಿಯ ಮಕ್ಕಳೂ, ವೀರಸೇವಕರೂ ತಂಡತಂಡವಾಗಿ ನೆರೆದು ಸಮ್ಮೇಲನದ ಕಾರ್ಯಕ್ರಮವನ್ನು ಹುರುಪು, ಉತ್ಸಾಹ, ಆಸಕ್ತಿ, ಅಭಿಮಾನಗಳಿಂದ ತುಂಬಿತುಳುಕುವಂತೆ ಮಾಡಲು ಕಾರಣವಾಯಿತೆಂದು ಹೇಳಬಹುದು.

ಮಹಿಳಾಗೋಷ್ಠಿ, ವೃತ್ತಪತ್ರಿಕಾಗೋಷ್ಠಿ, ನಾಟಕಗೋಷ್ಠಿ, ಸಾಹಿತಿಗಳ ಗೋಷ್ಠಿ, ಸಂಘಗಳ ಸಮ್ಮೇಲನ ಇವು ಮುಖ್ಯ ಸಮ್ಮೇಲನದ ಅಂಗೋಪಾಂಗಗಳಾಗಿ ನೆರವೇರಿದುವು.

ಈ ಸಾರೆಯ ಸಮ್ಮೇಲನದಲ್ಲಿ ನಡೆದ ಹಿಂದಿನ ಸಮ್ಮೇಲನಗಳಲ್ಲಿ ನಡೆಯದೆ ಇದ್ದ ಹೊಸದೊಂದು ಕಾರ್ಯಕ್ರಮವೆಂದರೆ, ಕನ್ನಡ ಬಾವುಟಕ್ಕೆ ವಂದನೆ. ಪ್ರತಿದಿನ ಬೆಳಿಗ್ಗೆ ಅಧ್ಯಕ್ಷರೂ ಪ್ರತಿನಿಧಿಗಳೂ ಪ್ರೇಕ್ಷಕರೂ ಪ್ರತಿನಿಧಿಗಳ ಬೀಡಾರದ ಮುಂದಿನ ಬಯಲಲ್ಲಿ ನೆರೆದು ಮುಂದೆ ಹೇಳುವ ಬಾವುಟದ ವಂದನೆಯ ಕನ್ನಡ ಹಾಡನ್ನು ಅತ್ಯಂತ ಭಕ್ತ್ಯಾದರಗಳಿಂದ ಹಾಡಿ, ಬಾವುಟವನ್ನು ವಂದಿಸಿ, ತಮ್ಮ ಮುಂದಿನ ಕಾರ್ಯಕ್ರಮಗಳಿಗೆ ತೆರಳುತ್ತಿದ್ದರು.

ಅಧ್ಯಕ್ಷರ ಮತ್ತು ಸ್ವಾಗತಾಧ್ಯಕ್ಷರಾದ ಶ್ರೀಮಾನ್ ಮಲ್ಲೇಶಪ್ರಭು ವಾಲಿಯವರ ಮನನೀಯ ಭಾಷಣಗಳು ಈಗಾಗಲೆ ಹಲವು ವೃತ್ತಪತ್ರಿಕೆಗಳಲ್ಲಿ ಪ್ರಕಟ

ವಾಗಿವೆ. ಆದ್ದರಿಂದ ಬಾವುಟ ವಂದನೆಯ ಪದ್ಯವೊಂದನ್ನು ಮಾತ್ರ ನಾವು ನಮ್ಮ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಇದರಡಿಯಲ್ಲಿ ಕೊಟ್ಟಿರುವೆವು.

॥ ೀಸಿರಿಗನ್ನಡಂ ಗೆಲ್ಗೆ ॥

ಕನ್ನಡ ಬಾವುಟಕ್ಕೆ ವಂದನೆ

(ಶ್ರೀ. ಬಿ. ಎಂ. ಶ್ರೀಕಂಠಯ್ಯನವರಿಂದ)

ಏರಿಸಿ ಹಾರಿಸಿ ಕನ್ನಡ ಬಾವುಟ ॥
ಓಹೋ ಕನ್ನಡ ನಾಡು ।
ಆಹಾ ಕನ್ನಡ ನುಡಿ ॥ ಪಲ್ಲ ॥

ಹಾರಿಸಿ ತೋರಿಸಿ ಕೆಚ್ಚೆವೆ ಬಾವುಟ
ಗಾಳಿಲಿ ಫಟಫಟ ದಾಳಿಲಿ ಫಟಫಟ ।
ಉರಿಯಿತೋ ಉರಿಯಿತು ಹಗೆಹಟ ಮನೆಮಟ
ಹಾಳ್ ಹಾಳ್ಸುರಿಯಿತು ಹಗೆಯ ಬೀಡಕ್ಕಟ ॥
ಬಾಳ್ ಕನ್ನಡ ತಾಯೇ
ಏಳ್ ಕನ್ನಡ ತಾಯೇ
ಆಳ್ ಕನ್ನಡ ತಾಯೇ
ಕನ್ನಡಿಗರೊಡತಿ ಓ ರಾಜೇಶ್ವರೀ ॥ ೧ ॥

ಇಂದಿನದೋ ಹೇಳಿರಿ ಈ ನಮ್ಮ ಬಾವುಟ
ಕುಂದಿಹುದೋ ನೋಡಿರಿ ನಮ್ಮ ಬಾವುಟ
ಏನೇನ್ ಕಂಡುದು ನಮ್ಮದೀ ಬಾವುಟ
ಆವುದ ಕಾಣದೋ ಜೀವಕಳೆ ಬಾವುಟ
ಕನ್ನಡ ಬಾವುಟಗಳೊಂದಾದ ಬಾವುಟ
ಬಾಳ್ ಕನ್ನಡ ತಾಯೇ
ಏಳ್ ಕನ್ನಡ ತಾಯೇ
ಆಳ್ ಕನ್ನಡ ತಾಯೇ
ಕನ್ನಡಿಗರೊಡತಿ ಓ ರಾಜೇಶ್ವರೀ ॥ ೨ ॥

ತೇಲಿಡು ಓಲಿಡು ಮೇಲಿಡು ಬಾವುಟ
ಚೆಲುವಾಗು ಗೆಲುವಾಗು ಬಲವಾಗು ಬಾವುಟ
ಹೊನ್ನಾಗಿ ಹೆಣ್ಣಾಗಿ ಪಸನಾದ ಮಣ್ಣಾಗಿ
ಪೊಸ ಪೊಸ ಕಣ್ಣಾಗಿ ಬೆಳಕಾಗಿ ಬೆಳೆಯಾಗಿ
ಕೂಡುವ ಕನ್ನಡದ ಹೊನ್ನುಗೆಯ ನಾಡಾಗಿ
ಬಾಳಲಿ ಬಾವುಟ ಬೆಳಗಲಿ ಬಾವುಟ
ಬಾಳ್ ಕನ್ನಡ ತಾಯೇ
ಏಳ್ ಕನ್ನಡ ತಾಯೇ
ಆಳ್ ಕನ್ನಡ ತಾಯೇ
ಕನ್ನಡಿಗರೊಡತಿ ಪೇರಾಜೇಶ್ವರೀ ॥ ೩ ॥

೨೪ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಿಂದ ಪ್ರಕಟವಾದುದು. ಬೆಳಗಾವಿ

ಹೆಣ್ಣುಮಕ್ಕಳ ಪ್ರಾಯುಮರಿ ಸ್ಕೂಲ ಲೀವ್ವಿಂಗ್ ಸರ್ಟೀಫಿಕೇಟ ಪರೀಕ್ಷೆ—೧೯೪೦

೧. ಈ ಪರೀಕ್ಷೆಯು ಈ ವರ್ಷ ಕೆಳಗೆ ಕಾಣಿಸಿದ ಸೆಂಟರುಗಳಲ್ಲಿ ಶಾ. ೧೧–೩–೧೯೪೦ ಸೋಮವಾರ ಮತ್ತು ಮುಂದಿನ ದಿನಗಳಲ್ಲಿ ನಡೆಯುವುದು.

೧. ಧಾರವಾಡ ೨. ಹುಬ್ಬಳ್ಳಿ ೩. ಗದಗ ೪. ಬೆಳಗಾಂವ
೫. ವಿಜಾಪುರ ೬. ಕಾರವಾರ ೭. ಕೊಲ್ಲಾಪುರ.

೨. ಈ ಎಲ್ಲ ಸೆಂಟರುಗಳಿಗೆ ಒಂದೊಂದು ಪರೀಕ್ಷಾ ಕಮೀಟಿಯಿದ್ದು ಅವುಗಳ ಚೇಅರಮನ್ನರು ಈ ಕೆಳಗಿನಂತೆ ಇರುವರು.

ಧಾರವಾಡ—ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜದ ಲೇಡೀ ಸುಪರೀಟೆಂಡೆಂಟರು, ಧಾರವಾಡ.

ಹುಬ್ಬಳ್ಳಿ— ಆಂಗ್ಲೋ-ಉರ್ದು ಹೈಸ್ಕೂಲಿನ ಹೆಡ್‌ಮಾಸ್ತರರು, ಹುಬ್ಬಳ್ಳಿ.

ಗದಗ— ಸೀನಿಯರ್ ಅ. ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು, ಧಾರವಾಡ.

ಬೆಳಗಾಂವಿ— ಸರದಾರ ಹೈಸ್ಕೂಲಿನ ಹೆಡ್‌ಮಾಸ್ತರರು, ಬೆಳಗಾಂವಿ.

ವಿಜಾಪುರ— ಸರಕಾರೀ ಹೈಸ್ಕೂಲಿನ ಹೆಡ್‌ಮಾಸ್ತರರು, ವಿಜಾಪುರ.

ಕಾರವಾರ— ಸರಕಾರೀ ಹೈಸ್ಕೂಲಿನ ಹೆಡ್‌ಮಾಸ್ತರರು, ಕಾರವಾರ

ಕೊಲ್ಹಾಪುರ—ಕೊಲ್ಹಾಪುರ ಸರಕಾರದ ಪ್ರಾಥಮಿಕ ಶಿಕ್ಷಣದ ಇನ್‌ಸ್ಪೆಕ್ಟರರು, ಕೊಲ್ಹಾಪುರ

೩. ೧೯೩೯ನೆಯ ಇಸವಿಯ ಅಗಸ್ಟ ೩೫ನೆಯ ತಾರೀಖಿನ ೬೪೭೨ನೆಯ ನಂಬರಿನ ವಿದ್ಯಾಖಾತೆಯ ಸರಕಾರೀ ಠರಾವಿನ ಮೇರೆಗೆ ೧೯೪೦ನೆಯ ಇಸವಿಯಲ್ಲಿ ಹೆಣ್ಣುಮಕ್ಕಳ ಪ್ರಾಯ್ಮರಿ ಸ್ಕೂಲ್ ಲೀವ್ವಿಂಗ್ ಸರ್ಟೀಫಿಕೇಟ ಪರೀಕ್ಷೆಯು ಹೊಸ ಅಭ್ಯಾಸಕ್ರಮ ಮತ್ತು ಹಳೆಯ ಅಭ್ಯಾಸಕ್ರಮ ಈ ಎರಡೂ ಬಗೆಯಿಂದ ಏಕಕಾಲಕ್ಕೆ ನಡೆಯುವದು. ಕಳೆದ ವರ್ಷಗಳಲ್ಲಿ ಈ ಪರೀಕ್ಷೆಗೆ ಕುಳಿತು ನಾಪಾಸಾದ ವಿದ್ಯಾರ್ಥಿನಿಯರಿಗಷ್ಟೇ ಹಳೆಯ ಅಭ್ಯಾಸಕ್ರಮದಂತೆ ಪರೀಕ್ಷೆಗೆ ಕುಳಿತುಕೊಳ್ಳಲು ಅಪ್ಪಣೆ ದೊರೆಯುವದು.

೪. ಉಮೇದುವಾರರು ಪರವಾನಗಿಯ ಅರ್ಜಿಯನ್ನು ತಾವು ಕುಳಿತು ಕೊಳ್ಳಲು ಅಪೇಕ್ಷಿಸುವ ಸೆಂಟರಿನ ಚೇಅರಮನ್ನರ ಕಡೆಗೆ ಛಾಪಿಸಿದ ಅರ್ಜಿಯ ನಮೂನೆಯ ಮೇಲೆ ಕಳುಹಿಸತಕ್ಕದ್ದು. ಅರ್ಜಿಯ ನಮೂನೆಗಳು ಆಯಾ ಸೆಂಟರಿನ ಚೇಅರಮನ್ನರ ಕಡೆಗೆ ಅರ್ಜಿಮಾಡಿಕೊಂಡರೆ ಪುಕ್ಕಟೆಯಾಗಿ ದೊರೆಯುವವು.

೫. ಉರ್ದು ಪ್ರಾಯ್ಮರಿ ಸ್ಕೂಲ್ ಲೀವ್ವಿಂಗ್ ಸರ್ಟಿಫಿಕೇಟ ಪರೀಕ್ಷೆಯೂ ಸಹ ಮೇಲೆ ಹೇಳಿದ ತಾರೀಖುಗಳ ದಿವಸವೇ ಆ ಎಲ್ಲ ಸೆಂಟರುಗಳಲ್ಲಿ ನಡೆಯುವದು.

೬. ಅಪ್ಪಣೆಯನ್ನು ಬೇಡುವ ಅರ್ಜಿಗಳನ್ನು ಆಯಾ ಸೆಂಟರುಗಳ ಚೇಅರಮನ್ನರಿಗೆ ೧೯೪೦ನೆಯ ಇಸವಿಯ ಫೇಬ್ರುವರಿ ತಿಂಗಳ ೧೫ನೆಯ ತಾರೀಖಿನ ದಿನ ಅಥವಾ ಅದಕ್ಕೂ ಮೊದಲೇ ಮುಟ್ಟುವಂತೆ ಕಳುಹಿಸಬೇಕು. ಅರ್ಜಿಯ ಸಂಗಡಲೇ ಮೂರು ರೂಪಾಯಿ, ಹಿಂದುಳಿದ ವರ್ಗದ ವಿದ್ಯಾರ್ಥಿನಿಯರ ಸಲುವಾಗಿ ೧ ರೂಪಾಯಿ (ಎಬೋರಿಜಿನಲ್ ಮತ್ತು ಗುಡ್ಡಗಾಡು ಜನರ ಪಂಗಡಗಳ ವಿದ್ಯಾರ್ಥಿನಿಯರು ಸಹಿತ) ಫೀಯನ್ನೂ ಕಳುಹಿಸಲೇಬೇಕು. ಆ ತಾರೀಖಿನ ತರುವಾಯ ಬಂದ ಅರ್ಜಿಗಳನ್ನು ಸ್ವೀಕರಿಸಲಿಕ್ಕಿಲ್ಲ.

೭. ಈ ಪರೀಕ್ಷೆಯ ಪುಸ್ತಕಗಳು ಕನ್ನಡ, ಮರಾಠಿ, ಉರ್ದು, ಮುಂತಾದ ಎಲ್ಲ ವಿವರಗಳು ತಾ|| ೨೩-೬-೧೯೩೯ನೆಯ ದಿವಸದ ಮುಂಬಯಿ ಸರಕಾರೀ ಗ್ಯಾಝೆಟಿನ ೧೯೩೯ನೆಯ ಭಾಗದ ೧೨೩೨-೩೩ನೆಯ ಪುಟಗಳಲ್ಲಿಯೂ ತಾ. ೨೧-೧-೧೯೩೯ನೆಯ ದಿವಸದ ೨೨೮೮ನೆಯ ನಂಬರಿನ ವಿದ್ಯಾಖಾತೆಯ ಸರಕಾರೀ ಠರಾವಿನಲ್ಲಿಯೂ ಈ ಸಂಬಂಧದಿಂದ ಕಾಲಕಾಲಕ್ಕೆ ಪ್ರಕಟವಾದ ಸರಕಾರದ ಗ್ಯಾಝೆಟುಗಳಲ್ಲಿಯೂ ಪ್ರಕಟವಾಗಿರುವವು.

೮. ಈ ಪರೀಕ್ಷೆಯ ವಿಷಯಗಳು, ಉಮೇದವಾರರ ವಯಸ್ಸು ಮುಂತಾದ ಎಲ್ಲ ವಿವರಗಳು ಮೇಲೆ ಹೇಳಿದ ಸರಕಾರೀ ಠರಾವುಗಳಲ್ಲಿ ವರ್ಣಿತವಾಗಿರುವವು.

ದಕ್ಷಿಣಭಾಗದ ಎಜ್ಯುಕೇಶನಲ್
ಇನ್‌ಸ್ಪೆಕ್ಟರರ ಕಚೇರಿ,
ಧಾರವಾಡ.
೧೩-೧೨-೧೯೩೯

Sd/- S. R. TAWADE,
Educational Inspector.

೧೯೪೦ನೆಯ ಇಸ್ವಿಯಲ್ಲಿ ಹಳೆಯ ಅಭ್ಯಾಸ ಕ್ರಮವನ್ನು ಮೇರೆಗೆ ನಡೆಯುವ (ಮರಾಠಿ, ಕನ್ನಡ ಮತ್ತು ಉರ್ದು)
ಹೆಣ್ಣುಮಕ್ಕಳ ಪ್ರಾಥಮಿಕ ಸ್ಕೂಲ್ ಲೀವ್ಹಿಂಗ್ ಸರ್ಟಿಫಿಕೇಟ ಪರೀಕ್ಷೆಯ ಕಾರ್ಯಕ್ರಮವು.

ತಾರೀಖು	ಸ್ಟಾ. ಟಾಯಿಮ್ ಇಂದ	ವರೆಗೆ	ವಿಷಯ	ಗುಣಗಳು
ಸೋಮವಾರ	ಪ್ರಾತಃಕಾಲ ೧೦	೧೦–೪೫	ಪರೀಕ್ಷೆಗೆ ಕೂಡ್ರುವ ಉಮೇದವಾರರ ಹಾಜರಿತೆಗೆದುಕೊಳ್ಳುವದು	(ಅ) ೭೫
೧೧–೩–೪೦	,, ೧೧	೧–೩೦	ಮೊದಲನೆಯ ಸದರು (ಅ) ಮತ್ತು (ಬ) ಪ್ರಾಂತಿಕ ಭಾಷೆ ಎಂದರೆ ಮರಾಠಿ, ಗುಜರಾಥಿ, ಉರ್ದು, ಕನ್ನಡ.	(ಬ) ೭೫
	ಸಾ. ಕಾಲ ೨–೩೦	೫	ಎರಡನೆಯ ಸದರು– ನಿಬಂಧ ಮತ್ತು ಕೈಬರೆಹ.	೧೦೦
ಮಂಗಳವಾರ	ಪ್ರಾತಃಕಾಲ ೧೧	೧	ಐದನೆಯ ಸದರು– ಇತಿಹಾಸ.	೭೫
೧೩–೩–೪೦	ಸಾ. ಕಾಲ ೨–೩೦	೪–೩೦	ಆರನೆಯ ಸದರು ಆರೋಗ್ಯಶಾಸ್ತ್ರ.	೭೫
ಬುಧವಾರ	ಪ್ರಾತಃಕಾಲ ೧೧	೧–೩೦	ಮೂರನೆಯ ಸದರು (ಅ) ಮತ್ತು (ಬ) ಅಂಕಗಣಿತ ಮತ್ತು ಮನೆತನದ ಜಮಾಖರ್ಚು.	(ಅ) ೮೦ (ಬ) ೨೦
೧೫–೩–೪೦	ಸಾ. ಕಾಲ ೨–೩೦	೪–೩೦	ನಾಲ್ಕನೆಯ ಸದರು ಭೂಗೋಲ.	೭೫
ಗುರುವಾರ	ಪ್ರಾತಃಕಾಲ ೧೧	೧–೩೦	ಏಳನೆಯ ಸದರು ಹೊಲಿಗೆಯ ಕೆಲಸ.	೧೦೦
೧೪–೩–೪೦	ಸಾ. ಕಾಲ ೨–೩೦	೪–೩೦	ಎಂಟನೆಯ ಸದರು ಐಚ್ಛಿಕ ವಿಷಯ* (ಡ್ರಾಯಿಂಗು, ಪ್ರಕೃತಿ ವಿಮರ್ಶೆ, ಗಾಯನ.)	೭೫

* ಉಮೇದುವಾರರು ಈ ಮೂರರಲ್ಲಿ ಯಾವವಾದರೊಂದು ಐಚ್ಛಿಕ ವಿಷಯವನ್ನು ತೆಗೆದುಕೊಳ್ಳಲೇಬೇಕು.

ವಿ. ಸೂ— ಉಮೇದುವಾರರು ಪರೀಕ್ಷೆಯ ಮೊದಲನೆಯ ದಿನ ಪ್ರತ್ಯಕ್ಷ ಪರೀಕ್ಷೆಯು ಪ್ರಾರಂಭವಾಗುವ ವೇಳೆಗಿಂತ ಒಂದು ತಾಸು ಮೊದಲು ಪರೀಕ್ಷೆಯು ನಡೆಯುವ ಸ್ಥಳದಲ್ಲಿ ಹಾಜರ ಇರಲೇಬೇಕು.

೧೯೪೦ನೆಯ ಇಸ್ವಿಯಲ್ಲಿ ತಿದ್ದುಪಡಿ ಹೊಂದಿದ ಹೊಸ ಅಭ್ಯಾಸ ಕ್ರಮದ ಮೇರಗ ನಡೆಯುವ

(ಕನ್ನಡ ಮರಾಠಿ ಮತ್ತು ಉರ್ದು) ಹೆಣ್ಣುಮಕ್ಕಳ ಪ್ರಾಯ್ಮರಿ ಸ್ಕೂಲ್ ಲೀವ್ವಿಂಗ್ ಸರ್ಟಿಫಿಕೇಟ ಪರೀಕ್ಷೆಯ ಕಾರ್ಯಕ್ರಮವು

ತಾರೀಖು	ಸ್ಟ್ಯಾಂಡರ್ಡ್ ಟಾಯಿಮ್ಸ್ ಇಂದ		ವರೆಗೆ	ವಿಷಯ	ಗುಣಗಳು
ಸೋಮವಾರ	ಪ್ರಾತಃಕಾಲ	೧೦	೧೦–೪೫	ಪರೀಕ್ಷೆಗೆ ಕೂಡ್ರುವ ಉಮೇದವಾರರ ಹಾಜರಿ ತಕ್ಕೊಳ್ಳುವದು.	
೧೧–೩–೪೦	,,	೧೧	೧ ೩೦	ಪೊದಲನೆಯ ಸದರು (ಅ) ಮತ್ತು (ಬ) ಪ್ರಾಂತಿಕ ಭಾಷೆ (ಎಂದರೆ ಕನ್ನಡ ಮರಾಠಿ ಗುಜರಾಥಿ ಉರ್ದು)	(ಅ) ೭೫ (ಬ) ೨೫
	ಸಾ. ಕಾಲ	೨–೩೦	೫	ಪೊದಲನೆಯ ಕಾಗದ (ಅ) ಗದ್ಯ ಮತ್ತು ಪದ್ಯ ಮತ್ತು (ಬ) ವ್ಯಾಕರಣ. ಪೊದಲನೆಯ ಸದರು ಪ್ರಾಂತಿಕಭಾಷೆ ಎರಡನೆಯ ಕಾಗದ ನಿಬಂಧ ಮತ್ತು ಕೈಬರೆಹ	೧೦೦
ಮಂಗಳವಾರ	ಪ್ರಾತಃಕಾಲ	೧೧	೧–೩೦	ಮೂರನೆಯ ಸದರು (ಅ) ಮತ್ತು (ಬ) ಇತಿಹಾಸ ಭೂಗೋಲ.	(ಅ) ೫೦ (ಬ) ೫೦
೧೨–೩–೪೦	ಸಾ. ಕಾಲ	೨–೩೦	೪–೩೦	ನಾಲ್ಕನೆಯ ಸದರು ವ್ಯಾವಹಾರಿಕ ಶಾಸ್ತ್ರೀಯ ವಿಷಯ.	೧೦೦
ಬುಧವಾರ	ಪ್ರಾತಃಕಾಲ	೧೧	೧–೩೦	ಎರಡನೆಯ ಸದರು (ಅ) ಮತ್ತು (ಬ) ಅಂಕಗಣಿತ ಮತ್ತು ಮನೆತನದ ಜಮಾಖರ್ಚು	(ಅ) ೮೦ (ಬ) ೨೦
೧೩–೩–೪೦	ಸಾ. ಕಾಲ	೨–೩೦	೪–೩೦	ಆರನೆಯ ಸದರು ಐಚ್ಛಿಕ ವಿಷಯ ಗಾಯನ *	೧೦೦
ಗುರುವಾರ	ಪ್ರಾತಃಕಾಲ	೧೧	೧–೩೦	ಐದನೆಯ ಸದರು ಹೊಲಿಗೆಯ ಕೆಲಸ.	೧೦೦
೧೪–೩–೪೦	ಸಾ. ಕಾಲ	೨–೩೦	೪–೩೦	ಆರನೆಯ ಸದರು ಐಚ್ಛಿಕ ವಿಷಯಗಳು ಡ್ರಾಯಿಂಗು ಮತ್ತು ಪ್ರಕೃತಿ ವಿಮರ್ಶೆ	೧೦೦

ಉಮೇದುವಾರರು ಮೂರರಲ್ಲೊಂದು ಐಚ್ಛಿಕ ವಿಷಯವನ್ನು ತೆಗೆದುಕೊಳ್ಳಲೇಬೇಕು.

ವಿ. ಸೂ:—ಉಮೇದವಾರರು ಪರೀಕ್ಷೆಯ ಪೊದಲನೆಯ ದಿನ ಪ್ರತ್ಯಕ್ಷ ಪರೀಕ್ಷೆಯು ಪ್ರಾರಂಭವಾಗುವ ವೇಳೆಗಿಂತ ಒಂದು ತಾಸು ಪೊದಲು ಪರೀಕ್ಷೆಯು ನಡೆಯುವ ಸ್ಥಳದಲ್ಲಿ ಹಾಜರು ಇರಬೇಕೆಂದು

ಧಾರವಾಡ ಡಿ. ಎಸ್. ಬಿ. ಯ ಶಾರೀರಿಕ ಶಿಕ್ಷಣ ಶಿಬಿರ
ಹಾವೇರಿ

೧. ಮೆ. ಎ. ಇ. ತಾವಡೆ ಸಾಹೇಬರ ಮನನೀಯ ಭಾಷಣ

ಧಾರವಾಡ ಡಿ. ಎಸ್. ಬಿ. ಯವರು ಪ್ರಾಥಮಿಕ ಶಾಲಾಶಿಕ್ಷಕರಿಗಾಗಿ, ೨೫ ೬-೧೧-೧೯೩೯ರಿಂದ ೨೬-೧೧-೩೯ ರವರೆಗೆ, ಹಾವೇರಿಯಲ್ಲಿ ಶಾರೀರಿಕ ಶಿಕ್ಷಣದ ಏರ್ಪಾಡನ್ನು ಮಾಡಿದ್ದರು; ಈ ಶಿಕ್ಷಣ-ಶಿಬಿರದ ಉದ್ಘಾಟನ ಸಮಾರಂಭವು, ಶ್ರೀಮಾನ್ ವಿ. ವಿ. ಪಾಟೀಲ ಪ್ರೆಸಿಡೆಂಟ ಡಿ. ಎಲ್. ಬಿ. ಧಾರವಾಡ ಇವರ ಅಧ್ಯಕ್ಷತೆಯಲ್ಲಿ "ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ

ಶ್ರೀಮಾನ್ ಎಸ್. ಆರ್. ತಾವಡೆ; ಎಮ್. ಎ., ಟಿ. ಡಿ (ಕೊಲಂಬಿಯಾ); ಡಿಪ್. ಡಿ (ಆಕ್ಸಫೋರ್ಡ); ಎಮ್. ಆರ್. ಎಸ್. ಟಿ. (ಲಂಡನ್); ಈ

ಮಹನೀಯರ ಹಸ್ತದಿಂದ ಸೆರವೇರಿತು. ಆಗ್ಗೆ 'ಶ್ರೀಮಾನ್ ತಾವಡೆ' ಸಾಹೇಬರು ಮಾಡಿದ ಉದ್ಬೋಧನೀಯವೂ, ಮನನೀಯವೂ ಆದ ಭಾಷಣದ ಸಾರಾಂಶವನ್ನು ಇದರಡಿಯಲ್ಲಿ ಕೊಟ್ಟಿದೆ.

ಭಾಷಣದ ಸಾರ

" ನನ್ನ ಹುಟ್ಟು-ಬೆಳವಣಿಗೆಗಳು ತೀರ ಬಡತನದಲ್ಲಿ ಆಗಿರುವವು; ನನ್ನ ತಂದೆಯವರು ಶಾರೀರಿಕಶಿಕ್ಷಣದ ಉಪಾಧ್ಯಾಯರಾಗಿದ್ದರು; ಅವರ ಸಂಬಳವು ಅತ್ಯಲ್ಪವಾದದ್ದಿತ್ತು; ದೊಡ್ಡ ಕುಟುಂಬ, ಅದರಲ್ಲಿ ಮುಂಬಯಿಯಂತಹ ದೊಡ್ಡ ಪಟ್ಟಣದವಾಸ; ಹೀಗಾಗಿ ನಮ್ಮ ಬಡತನದ ತ್ರಾಸವು ಬಲಿದು ಹೋಗಿತ್ತು! ಇಂತಹ ಬಡತನದ ಬಾಧೆಯಲ್ಲಿಯೇ ನನ್ನ ಹುಟ್ಟು-ಬೆಳವಣಿಗೆಗಳು ಸಾಗಿದವು."

" ನನಗೆ ಚಿಕ್ಕಂದಿನಿಂದಲೂ ಶಾರೀರಿಕ ಶಿಕ್ಷಣದಲ್ಲಿ ಪ್ರೇಮವು ಬಹಳ; ಬಾಲ್ಯದಿಂದಲೆ ಶಾರೀರಿಕ ವ್ಯಾಯಾಮವನ್ನು ಮಾಡತೊಡಗಿದೆನು; ವ್ಯಾಯಾಮ ವಾದನೆಂತೆಲೆ ಕುಡಿಯಲಿಕ್ಕೆ ಹಾಲು ಸಿಗುವಂತಹ ಪರಿಸ್ಥಿತಿಯು ನನ್ನದಿದ್ದಿಲ್ಲ; ನನಗೆ ದೊರೆಯಬಹುದಾದ ನೆನೆಗಡಲೆ ಮೊದಲಾದುವುಗಳನ್ನು ಸೇವಿಸಿ ದೇಹದ ಬೆಳವಣಿಗೆಗೆ ಅನುಕೂಲತೆಯನ್ನು ಕಲ್ಪಿಸಿಕೊಳ್ಳುತ್ತಿದ್ದೆನು; ಶಾರೀರಿಕ-ವ್ಯಾಯಾಮ ಮಾಡುವವರೆಲ್ಲರೂ ಹಾಲಿನಂತಹ ಪೌಷ್ಟಿಕ ಆಹಾರವನ್ನು ತೆಗೆದು ಕೊಳ್ಳಲೇಬೇಕೆಂಬ ಆಗತ್ಯವನ್ನು ಹೇಳುವವನು ನಾನಲ್ಲ; ಉಂಡ ಅನ್ನವು ಚೆನ್ನಾಗಿ ಅರಗಿ, ನಿರ್ದುಷ್ಟವಾದ ಒಳ್ಳೆಯರಕ್ತವಾಗಲಿಕ್ಕಾದರೂ ವ್ಯಾಯಾಮವು ಆಗತ್ಯ ವಾಗಿ ಬೇಕು. ಇಂತಹ ಶಾರೀರಿಕ ಶಿಕ್ಷಣದೊಂದಿಗೇ ನನ್ನ ಬೌದ್ಧಿಕ ಶಿಕ್ಷಣವೂ ಸಾಗಿತ್ತು."

" ಗಗನದಲ್ಲಿ ವಿಹರಿಸುವ ಗರುಡನಿಗೆ ಎರಡು ರೆಕ್ಕೆಗಳು ಆಗತ್ಯವಾಗಿರು ವಂತೆ, ಈ ಸಂಸಾರದಲ್ಲಿ ಬಾಳುವ ಮನುಷ್ಯನಿಗೆ ದೇಹಶಕ್ತಿ ಬೌದ್ಧಿಕ ಶಕ್ತಿಗಳೆ ರಡೂ ಅತ್ಯಗತ್ಯವಾದವುಗಳು! ಇದನ್ನರಿತು ನಾನು ಚಿಕ್ಕಂದಿನಿಂದಲೂ ಶಾರೀರಿಕ ಶಿಕ್ಷಣವನ್ನು ಮರೆಯದೆ ಸಾಗಿಸಿದುದರಿಂದ ಈಗ ನನಗೆ ೪೫ ವರ್ಷಗಳು ತುಂಬುತ್ತ ಬಂದಿದ್ದರೂ ೨೦-೨೫ ವರ್ಷದ ತರುಣರಂತೆ ಉತ್ಸಾಹವುಳ್ಳವನಾಗಿರುವೆನೆಂದು ತಿಳಿಸಲಿಕ್ಕೆ ನನಗೆ ಅತ್ಯಂತ ಅಭಿಮಾನವೆನಿಸುವದು!"

" ನಾನು ಕೆಲಕಾಲ ಸಾತಾರಾ ಜಿಲ್ಲೆಯ ಎ. ಓ. ನಾಗಿದ್ದೆನು; ಯಾವತ್ತು ಪ್ರಾಥಮಿಕ ಶಾಲೆಗಳಲ್ಲಿ ಶಾರೀರಿಕ ಶಿಕ್ಷಣವನ್ನು ಕಡ್ಡಾಯವಾಗಿ ಸಾಗಿಸಲೇ ಬೇಕೆಂದು, ಎ. ಓ. ನಾದ ಕೂಡಲೆ ಮೊಟ್ಟಮೊದಲನೆಯ ಪರಿಪತ್ರ (ಸರ್ಕ್ಯುಲರ) ವನ್ನು ಹೊರಡಿಸಿದೆನು; ಮುಂದೆ ಆ ಶಿಕ್ಷಣದ ಬೆಳವಣಿಗಾಗಿ ಸುದೀರ್ಘ-

ಪ್ರಯತ್ನವನ್ನು ನಡೆಸಿದೆನು; ಆ ಪ್ರಯತ್ನದ ಸತ್ಫಲವು ಎಲ್ಲ ಶಾಲೆಗಳಲ್ಲಿ ತೋರ ಹತ್ತಿತು; ಶಾರೀರಿಕ ಶಿಕ್ಷಣದ ಬೆಳವಣಿಗೆಯಿಂದ ಜಿಲ್ಲೆಯಲ್ಲಿ ಶಾಲೆಗಳ ಸಂಖ್ಯೆಯೂ ಒತ್ತರದಿಂದ ಬೆಳೆಯಿತು; ಈ ಹಾವೇರಿಯಂತಹ ಶಾರೀರಿಕ ಶಿಕ್ಷಣ ಶಿಬಿರಗಳನ್ನು ಅಲ್ಲಲ್ಲಿ ತೆರೆಯಿಸಿದೆನು; ಆ ಶಿಬಿರಗಳಲ್ಲಿ ಶಿಕ್ಷಕರಲ್ಲಿ ಬೆರೆತು, ಹುರುಪಿನಿಂದ ದುಡಿದೆನು. "

" ಬೇನೆಯಿಂದ ಸೊರಗಿ ಕೊರಗುವ ಮುದ್ದುಮಕ್ಕಳು ಬಲಶಾಲಿಗಳೂ ಬುದ್ಧಿಶಾಲಿಗಳೂ ಆಗಿ ಬೆಳೆದು, ಪರಿಪರಿಯಿಂದ ಸುಂದರವಾಗಿ ತೋರಬೇಕೆಂಬುದೇ ನನ್ನ ಗುರಿ! ನಾನು ಶಾಲೆಗೆ ಹೋದಕೂಡಲೆ ಹುಡುಗರಿಗೆ ಇತಿಹಾಸ-ಭೂಗೋಲಗಳನ್ನು ಕೇಳುವ ಆತುರಕ್ಕೊಳಗಾಗುತ್ತಿದ್ದಿಲ್ಲ; ಗಣಿತವನ್ನು ಹೇಳುವ ಹವ್ಯಾಸಕ್ಕೆ ಬೀಳುತ್ತಿದ್ದಿಲ್ಲ; ಹುಡುಗರ ಬಟ್ಟೆಗಳನ್ನು ತೆಗೆಯಿಸಿ, ಅವರ ಸ್ನಾಯು, ಎದೆ, ತೊಡೆ ತೋಳುಗಳನ್ನು ನೋಡುತ್ತಿದ್ದೆನು; ಹಲ್ಲು-ಕಣ್ಣುಗಳು ಜಳಜಳವಾಗಿರುವದನ್ನು ನಿರೀಕ್ಷಿಸುತ್ತಿದ್ದೆನು; ಅವರ ಆಟ, ನೋಟ, ಹಾರಾಟಗಳನ್ನು ವಿಚಾರಿಸುತ್ತಿದ್ದೆನು; ಇಷ್ಟೆಲ್ಲ ಆದಮೇಲೆ, ಗಣಿತ ಭಾಷೆ ಮೊದಲಾದ ವಿಷಯಗಳನ್ನು ಕೇಳುತ್ತಿದ್ದೆನು; ಸಣ್ಣಮಕ್ಕಳಿಗೆ ಬೌದ್ಧಿಕ ಶಿಕ್ಷಣಕ್ಕಿಂತಲೂ ಶಾರೀರಿಕ ಶಿಕ್ಷಣವು ಅತ್ಯವಶ್ಯಕವು! ಶಾರೀರಿಕ ಶ್ರಮಕ್ಕೆ ತಕ್ಕ ಆಹಾರ, ಸ್ವಚ್ಛತೆ, ಶಿಕ್ಷಕರ ಕರ್ತವ್ಯ ತತ್ಪರತೆ, ಜಾಗರೂಕತೆಗಳು ಒಟ್ಟಾಗಿ ಕೂಡಿದರೆ, ನಮ್ಮ ನಾಡು ಹಾ ಹಾ ಅನ್ನುವದರೊಳಗೆ ತಲೆ ಎತ್ತಿ ಮೆರೆದು ಬಾಳುವಂತಾಗಬಹುದು! "

ಸಾಹೇಬರ ಹೇಳಿಕೆಯಂತೆ ನಡೆಯುವ ಶಿಕ್ಷಕರನ್ನೂ ಶಿಕ್ಷಣಾಧಿಕಾರಿಗಳನ್ನೂ ನಮ್ಮ ಧಾರವಾಡ ಜಿಲ್ಲೆಯು ಆತುರ ದೃಷ್ಟಿಯಿಂದ ನಿರೀಕ್ಷಿಸುತ್ತಿರುವದು! ಸಾಹೇಬರು ಎ. ಓ. ರಂತಹ ಸಣ್ಣ ಅಧಿಕಾರಿಗಳಾಗಿದ್ದಾಗ್ಗೆಯೇ ಸಾತಾರೆ ಜಿಲ್ಲೆಯೊಳಗೆ ಶಾರೀರಿಕ ಶಿಕ್ಷಣದ ವಿಷಯಕ್ಕೆ ಇಷ್ಟೆಲ್ಲ ಕ್ರಾಂತಿಯನ್ನು ಮಾಡಿರುವರೆಂದಮೇಲೆ, ೪ ಜಿಲ್ಲೆಗಳ ಸರ್ವಸತ್ತಾಧಿಕಾರಿತ್ವದ ಈಗಿನ ವೇಳೆಯಲ್ಲಿ ಶಾರೀರಿಕ ಶಿಕ್ಷಣಕ್ಕೆ ಸಾಹೇಬರಿಂದ ಹೆಚ್ಚು ಮಹತ್ವವು ತಪ್ಪದೆ ಬರುವದೆಂದು ಎಲ್ಲರೂ ತವಕಿಸಹತ್ತುವದು ಸಹಜವು!

ಸಾಹೇಬರು ಶಾರೀರಿಕ ಶಿಕ್ಷಣದ ಬಗ್ಗೆ ಇಷ್ಟೆಲ್ಲ ಹೇಳಿದ ಮೇಲೆ, ಶಿಕ್ಷಕರು, ಅವರ ಸ್ಥಾನ-ಮಾನಗಳು, ನಡೆ-ನುಡಿಗಳು ಇವುಗಳ ಬಗ್ಗೆಯೂ ತಮ್ಮ ಮನೋಗತವನ್ನು ಅರುಹಿದರು.

" ಶಿಕ್ಷಕರ ಮಾನ-ಮರ್ಯಾದೆಗಳೂ ಗುಣ-ಗೌರವಗಳೂ ಇತ್ತೀಚೆಗೆ ತೀರ ನಿಕೃಷ್ಟವಾಗಿ ಹೋಗಿವೆ! ಇದಕ್ಕೆ ಕಾಲದ ಬದಲಾವಣೆಯೇ ಕಾರಣವು;

ವಿದ್ಯಾಧಿಕಾರಿಗಳು ಶಿಕ್ಷಕರನ್ನು ತೀರ ಕೀಳ್ಪೆರದ ಹೇಯ ದೃಷ್ಟಿಯಿಂದ ಕಾಣುವರು; ಶಿಕ್ಷಕರು ಬೇಕಾದಂತಹ ಮಹತ್ವದ ಅವಸರದ ಕೆಲಸವನ್ನು ಹೇಳಲಿಕ್ಕೆಂದು ಬಂದಿದ್ದರೂ ಅಧಿಕಾರಿಗಳು ಅವರ ಹೇಳಿಕೆಗೆ ಕಿವಿಗೊಡುತ್ತಿರುವದಿಲ್ಲ ; ಹಾಗು ಶಿಕ್ಷಕರನ್ನು ಅಸ್ಪೃಶ್ಯರಂತೆ ಅತಿ ದೂರವಾಗಿಯೇ ಕುಳ್ಳಿರಿಸಿಬಿಡುವರು; ಹುಲಿಯೆದುರಿನ ಚಿಗರೆಯ ಮರಿಯಂತೆ ಶಿಕ್ಷಕರನ್ನು ಅಂಜಿಕೆಯಿಂದಿರಿಸುವರು; ಈ ದುಸ್ಥಿತಿಯು ಬೇಗನೆ ಮಾಯವಾಗಲಿಕ್ಕೆ ಬೇಕು ! ತಮ್ಮ ಮಕ್ಕಳು ಮರಿಗಳನ್ನು ಯೋಗ್ಯ ನಾಗರಿಕರನ್ನಾಗಿ, ಭಾವೀ ರಾಷ್ಟ್ರದ ಆಧಾರಸ್ತಂಭವನ್ನಾಗಿ ಮಾಡುವ ಗುರು (ಶಿಕ್ಷಕ) ವರ್ಗವನ್ನು ವಿದ್ಯಾಧಿಕಾರಿಗಳು ಸುಶೀಲತೆಯಿಂದಲೂ, ಸುಜನತೆಯಿಂದಲೂ ಕಾಣಬೇಕು ; ಅವರ ಅಡಚಣಿಗಳನ್ನು ಆದರದಿಂದ ಕೇಳಿಕೊಳ್ಳಬೇಕು ; ಅವರ ಕುಂದು-ಕೊರತೆಗಳನ್ನು ಬೇಗನೆ ಹೋಗಲಾಡಿಸಲು ಹೆಣಗುತ್ತಿರಬೇಕು ; ವಿದ್ಯಾಧಿಕಾರಿಗಳು ಶಿಕ್ಷಕರಿಗೆ ಕರ್ತವ್ಯ ಜಾಗೃತಿಯ ಮುಂಬೆಳಗನ್ನು ತೋರಿಸುವ ಕೈದೀವಿಗೆಗಳಿಂತಿರಬೇಕು ; ಶಿಕ್ಷಕರು ತಮ್ಮ ಬಾಧುಗಳು, ತಮ್ಮ ಸಹೋದ್ಯೋಗಿಗಳು ಎಂಬ ಸದ್ಭಾವನೆಗಳಿಂದ ಅಧಿಕಾರಿಗಳು ತಪ್ಪದೆ ನಡೆಯತಕ್ಕದ್ದು. ''

ವಿದ್ಯಾಧಿಕಾರಿಗಳು ಸಾಹೇಬರ ಮೇಲಿನ ವಿಚಾರಗಳನ್ನು ಚೆನ್ನಾಗಿ ಮನನ ಮಾಡಬೇಕು; ಬರೇ ಹುಳುಕನ್ನಾಯುವ ಹುಳಗಳೂ, ಅಧಿಕಾರದ ಮಬ್ಬಿನಿಂದ ಸೆಟೆದಾಡುವ ಕೀಡಿಗಳೂ ಆಗಬಾರದು ! ತಾವೂ ಒಬ್ಬ ರಾಷ್ಟ್ರಸೇವಕರೆಂಬದನ್ನು ಸರಿಯಾಗಿ ಸ್ಮರಣದಲ್ಲಿಟ್ಟುಕೊಂಡಿರಬೇಕು.

ಸಾಹೇಬರು ಇದೇ ವಿಷಯವನ್ನು ಮುಂದೆ ಸಾಗಿಸುತ್ತ '' ಶಿಕ್ಷಕರ ಈಗಿನ ಈ ಅವನತಿಗೆ ಬರೇ ಹೊರಗಿನವರಷ್ಟೇ ಕಾರಣರಲ್ಲ ; ಶಿಕ್ಷಕರೂ ಕಾರಣರಾಗಿರುವರು ; ಶಿಕ್ಷಕರು ತಮ್ಮ ಕರ್ತವ್ಯವನ್ನು ತೊರೆದು, ಭಿಡೆ ಮುರವತ್ತುಗಳ ದುರಾಶೆಯಿಂದ ಮುಂದಿನ ಬೆನ್ನು ಹತ್ತಿ ತಿರುಗುವದೂ ಲಾಂಗೂಲ-ಚಾಲನೆಯಿಂದಿರುವದೂ ಅತಿ ಲಾಂಛನಾಸ್ಪದವು ! ಶಿಕ್ಷಕರು ಶಾಂತತೆಯಿಂದ ನಡೆದು, ಶಿಕ್ಷಕವೃತ್ತಿಯನ್ನು ಪರಿಪಾಲಿಸಿ, ಅದರಲ್ಲಿಯೇ ತಮ್ಮ ಕೀರ್ತಿ-ಪೂರ್ತಿಗಳನ್ನು ದೊರಕಿಸಿಕೊಳ್ಳಬೇಕು; ಎರಡು ಕಣ್ಣಿನವರಿಗೆ (ಮೆಂಬರರಿಗೆ) ಅಳುಕದೆ, ತಮ್ಮೆಡುರಿಗಿರುವ ವಿದ್ಯಾರ್ಥಿಗಳ ಲಂ ಕಣ್ಣುಗಳಿಗೆ ಅಳುಕಿ ನಡೆಯುವವರಾಗಬೇಕು; ವಿದ್ಯಾರ್ಥಿಗಳು ಸುಪುಷ್ಟರೂ, ಸುಜ್ಞರೂ ಆಗುವಂತೆ ಹೆಣಗುವ ಹೃದಯದ ಕಾರುಜಿಯು ಶಿಕ್ಷಕರಲ್ಲಿ ನೆಗೆದಾಡುತ್ತಿರಬೇಕು; ಅಂದರೆ ಮಾನ-ಮರ್ಯಾದೆಗಳು ತಾವಾಗಿಯೇ ಬಂದು ಕಾಲ್ಗೆರಗತೊಡಗುವವು ! ಈಗ ಶಿಕ್ಷಕರ ಪಗಾರವು ಹೇಳಲಿಕ್ಕೆ ಕೂಡ ನಾಚಿಕೆ ಬರುವಷ್ಟು ಕಡಿಮೆಯಾಗಿರಬಹುದು. ಆದರೆ,

ಶಿಕ್ಷಕರು ಕೇವಲ ಹಣದಾಸೆಗಾಗಿ ಶಿಕ್ಷಕವೃತ್ತಿಯನ್ನು ಕೈಕೊಳ್ಳಬಾರದು; ಭಾವೀ ಜನಾಂಗದ ಉನ್ನತಿಗೆ ತ್ರಿಕರಣಪೂರ್ವಕವಾಗಿ ಹೆಣಗಿ, ಆ ಮುಖದಿಂದ ತಮ್ಮ ಗುರುತ್ವ (ಗೌರವ) ವನ್ನು ಪ್ರದರ್ಶಿಸಲೆಂದಾಶಿಸುವೆನು" ಶಿ. ಶಿ. ಯರು ಈ ವಿಷಯಗಳನ್ನು ಕೇಳಿ, ಮನಸನಮಾಡಿ, ನಿಧಿಧ್ಯಾಸಗೊಳಿಸಿಕೊಳ್ಳತಕ್ಕದ್ದು!

"ನಾನು ವಿದ್ಯೆಯಿಂದ ತೀರ ಹಿಂದುಳಿದ ಈ ದಕ್ಷಿಣ ಭಾಗದಲ್ಲಿ ದುಡಿದು, ಜನತಾಸೇವೆಯನ್ನು ಮಾಡಬೇಕೆಂಬ ಸದುದ್ದೇಶವುಳ್ಳವನಾಗಿರುವೆನು. ಯಾವ ದೊಂದು ಜಾತಿ, ಮತ, ನಾಡು, ನುಡಿಗಳಿಗೆ ಅಂಟಿಕೊಳ್ಳಬೇಕೆಂಬ ವಿಚಾರವು ನನ್ನಲ್ಲಿರಲಾರದು; ನಾನು ಮರಾಠಿಗನಲ್ಲ, ಜನತಾಸೇವಕನು! ನನಗೆ ಕನ್ನಡ-ನುಡಿಯು ಬರುವದಿಲ್ಲವೆಂದು ತಿಳಿಸಲು ಅತಿ ಕಷ್ಟವೆನಿಸುತ್ತಿರುವದು! ಆದರೂ ಕನ್ನಡನುಡಿಯನ್ನು ಬೇಗನೆ ಕಲಿತು, ನಿಮ್ಮೊಡನೆ ಅತಂಕವಿಲ್ಲದೆ ಸುಖ-ಸಲ್ಲಾಪ ಗಳನ್ನು ಮಾಡುವ ಸುಯೋಗವನ್ನು ಹಾರೈಸುತ್ತಿರುವೆನು! ವಿದ್ಯೆಯಿಂದ ಹಿಂದಿರುವ ಈ ಭಾಗವನ್ನು ಮುಂದಿಯಲ್ಲಿ ತರುವದೇ ನನ್ನ ಹೆಗ್ಗುರಿಯು! ಅದಕ್ಕೆ ತಾವೆಲ್ಲ ಶಿಕ್ಷಕರು ಉದಾರಹೃದಯದಿಂದ ನೆರವಿಗರಾಗಿ ದುಡಿಯಬೇಕೆಂದು ಕೋರುವೆನು."

"ಧಾರವಾಡ ಡಿ. ಎಸ್. ಬಿ. ಯವರು ಕೈಕೊಂಡ ಈ ಶಾರೀರಿಕ ಶಿಕ್ಷಣದ ಕಾರ್ಯವು ಅತಿ ಸ್ತುತ್ಯವಾದದ್ದು! ಈ ಹಾವೇರಿಯಂತಹ ಹಲವು ಶಾರೀರಿಕ-ಶಿಕ್ಷಣ-ಶಿಬಿರಗಳು ಹುಟ್ಟಿ ಬರಬೇಕಾಗಿದೆ. ಈ ಶಾರೀರಿಕ ಶಿಕ್ಷಣದ ಕಾರ್ಯವನ್ನು ನಾವು (ಸರಕಾರದವರು) ಕೈಕೊಳ್ಳತಕ್ಕವರಿರುವೆವು, ತಡೆಯಬೇಕೆಂದು ಹೇಳಿದರೂ ಧಾರವಾಡ ಡಿ. ಎಸ್. ಬಿ. ಯವರು ಆತುರತೆಯಿಂದ ಈ ಶಾ. ಶಿ. ಕಾರ್ಯವನ್ನು ಕೈಕೊಂಡಿರುವರು; ಈ ವಿಷಯಕ್ಕೆ ನನ್ನದೇನೇನೂ ಅಕ್ಷೇಪವಿಲ್ಲ! ಅವರೊಡನೆ ನನ್ನ ಗಾಢವಾದ ಸಹಕಾರವೇ ಇರುವದು! ಅವರು ಕಾರ್ಯದ ಆಗು-ಹೋಗುಗಳನ್ನು ಅಳೆದು, ನಮ್ಮ ಮುಂದಿನ ಹಾದಿಯನ್ನು ಕಂಡುಕೊಳ್ಳಲಿಕ್ಕೆ ನಮಗೆ ನೆರವಾಗುವರೆಂದು ನಂಬಿರುವೆನು."

"ನನ್ನ ಈಗಿನ ಪ್ರತ್ಯೇಕ ಕಾರ್ಯಕ್ಕೆ ತಮ್ಮ ನೆರವು ಅತ್ಯವಶ್ಯವಾಗಿ ಬೇಕು; ನನ್ನಿಂದಾಗಬಹುದಾದ ಜನತಾಸೇವೆಯನ್ನು ತಪ್ಪದೆ ಮಾಡಿಸಿಕೊಳ್ಳಬೇಕು; ಜಾತಿ, ಮತ, ಭಾಷೆಗಳೆಂಬ ನಿಷ್ಪ್ರಯೋಜಕ ಭಾವನೆಗಳನ್ನು ಬಗ್ಗುಬಡಿದು, ಮಕ್ಕಳ ಶಾರೀರಿಕ ಬೌದ್ಧಿಕ ಶಿಕ್ಷಣಗಳ ಬೆಳಿಗೆ ಏಳಿಗೆಗಳತ್ತ ನಮ್ಮ ಒಲವು-ನಲಿವು ಗಳನ್ನು ಹೊರಳಿಸಿ, ನಮ್ಮ ನಾಡಿನ ಭಾಗ್ಯೋದಯಕ್ಕೆ ನಾವೆಲ್ಲರೂ ಕಾರಣೀಭೂತ ರಾಗಬೇಕೆಂದು ಹಾರೈಸುವೆನು."

"ನಾವು ಇಂದಿನ ವರೆಗೆ ಪರದಾಸ್ಯದಲ್ಲಿ ನೊಂದು, ಬೆಂದು, ಬೆಂಡಾಗಿ ಹೋಗಿರುವೆವು! ನಮ್ಮ ಮುಂದಿನ ಪೀಳಿಗೆಯು ವಿನಾಶಕವಾದ ಈ ದಾಸ್ಯದಿಂದ ಬಿಡುಗಡೆಯಾಗುವ ಸದ್ಭಾವನೆಯನ್ನು ಸರ್ವತ್ರ ಜಾಗೃತಗೊಳಿಸುವದೇ ನಮ್ಮ ಆದ್ಯಕರ್ತವ್ಯವು!!" S. F. M.

---

೨. ಶ್ರೀಮಾನ್ ಟಿ. ಆರ್. ನೆಸ್ವಿ ಬಿ.ಏಜಿ. ಎಮ್.ಎಲ್.ಎ. ಇವರ ಭಾಷಣ

ಧಾರವಾಡ ಡಿ. ಎಸ್. ಬಿ. ಯವರು ಸಾಗಿಸಿದ ಶಾರೀರಿಕ ಶಿಕ್ಷಣ-ಶಿಬಿರದ ಸಮಾಪ್ತಿ-ಸಮಾರಂಭವು "ಶ್ರೀಮಾನ್ ಟಿ. ಆರ್. ನೆಸ್ವಿ ಬಿ. ಏಜಿ. ಎಮ್. ಎಲ್. ಎ." ಇವರ ಹಸ್ತದಿಂದ ನೆರವೇರಿತು. ಆ ಕಾಲಕ್ಕೆ ಅವರು ಮಾಡಿದ ವಿಚಾರ ಪರಿಪ್ಲುತವಾದ ಭಾಷಣದ ಸಾರಾಂಶವನ್ನು ಇದರಡಿಯಲ್ಲಿ ಕೊಟ್ಟಿದೆ.

"ಈ ಶಿಕ್ಷಣ-ಶಿಬಿರ ಸಮಾಪ್ತಿಯನ್ನು ಮಾಡುವ ಕೊನೆಯ ಕೆಲಸವು ನನ್ನ ಪಾಲಿನದಾಗಿದೆ. ಅತ್ಯವಶ್ಯಕವಾದ ಈ ಶಿಬಿರದಲ್ಲಿಯೂ ಇಂದಿನ ಈ ಸಮಾರಂಭದಲ್ಲಿಯೂ ದುಡಿದ ಎಲ್ಲ ಜನರಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಸಮರ್ಪಿಸುವೆನು"

ಆ ಮೇಲೆ ಶಿಕ್ಷಕರನ್ನುದ್ದೇಶಿಸಿ ಮುಂದಿನ ನಾಲ್ಕು ಮಾತುಗಳನ್ನು ಹೇಳಿದರು.

"ಶಿಕ್ಷಕರು ಮೊಟ್ಟಮೊದಲು ತಮ್ಮ ಹೊಣೆಗಾರಿಕೆಯನ್ನು ಅರಿತುಕೊಳ್ಳಬೇಕು; 'ಶಿಕ್ಷಕ ವೃತ್ತಿಯು ಕಡಿಮೆತರಗತಿಯದು' ಎಂಬ ದುರ್ಭಾವನೆಯನ್ನು ಬಿಸಾಟಿ ಬಿಡಬೇಕು; ಅಜ್ಞ ಜನರ ಈ ತರದ ವಿಚಾರಗಳಿಗೆ ಶಿಕ್ಷಕರು ಲಕ್ಷ್ಯಗೊಡ ಕೂಡದು. ಇಂತಹ ಅವರ ಮಾತುಗಳನ್ನು ಕಿವಿಯ ಮೇಲೆ ಕೂಡ ಹಾಕಿಕೊಳ್ಳ ಕೂಡದು! ಶಿಕ್ಷಕ ವೃತ್ತಿಯು ಜಗತ್ತಿಗೆ ಜ್ಞಾನಸಮಾರ್ಗವನ್ನು ತೋರಿಸುವಂತಹ ಘನವಾದ ವೃತ್ತಿಯು! ತತ್ವಜ್ಞಾನಿಗಳು, ಕವಿಗಳು, ಸಂಶೋಧಕರು, ರಾಷ್ಟ್ರ ಭಕ್ತರು ಮೊದಲಾದವರೆಲ್ಲರು ಸತ್ ಶಿಕ್ಷಕರಿಂದಲೇ ಬೆಳಕಿಗೆ ಬಂದಿರುವರು; ಮುಂದೆ ಬರುತ್ತಲೂ ಇರುವರು. ಅಂದಮೇಲೆ ಶಿಕ್ಷಕ ವೃತ್ತಿಯು "ಎಷ್ಟು

ಶ್ರೇಷ್ಠವಾದದ್ದು, ಎಂತಹ ಪವಿತ್ರವಾದದ್ದು, ಯಾವ ಬಗೆಯ ಹೊಣೆಗಾರಿಕೆಯದು!" ಎಂಬದನ್ನು ಶಿಕ್ಷಕರು ತಿರುತಿರುಗಿ ವಿಚಾರಿಸಿ ಕಾರ್ಯೋಪ್ರವೃತ್ತರಾಗಬೇಕು. ಕೈಕೊಂಡ ಕೆಲಸದಲ್ಲಿ ಶಿಕ್ಷಕರಿಗೆ ಪ್ರೇಮವಿರಲಿಕ್ಕೆಬೇಕು. ರಾಷ್ಟ್ರವನ್ನು ಗಗನದ ವರೆಗೆ ಮೇಲಕ್ಕೆತ್ತುವವರೂ, ರಸಾತಳದತನಕ ಕೆಳಗೊತ್ತುವವರೂ ಶಿಕ್ಷಕರೇ. ಈ ಬಗೆಯ ಮಹತ್ತರವಾದ ಹೊಣೆಗಾರಿಕೆಯನ್ನು ನೀಗಿಸುವ ಸದ್ಬುದ್ಧಿಯಿಂದ ಶಿಕ್ಷಕರು ಕಾರ್ಯೋಪ್ರವೃತ್ತರಾಗಬೇಕು."

"ಶಿಕ್ಷಕ-ಬಂಧುಗಳೇ, ನೀವು ಜಾಣರಿರುವಿರಿ; ಹಳ್ಳಿಯ ವಾಸದಿಂದ ನಿಮ್ಮ ಹಲಕೆಲವು ಶೀಲಗಳು ಕಡಿಮೆಯಾಗಹತ್ತುವವು. ನಿಮ್ಮವನೇ ಆದ ನಾನು ಅವನ್ನು ನಿಮ್ಮೊದುರಿಗಿಡಲು ಹೆಣಗುವೆನು. ಗೊತ್ತು ಮಾಡಿದ ಹೊತ್ತಿಗೆ ಶಿಕ್ಷಕರು ತಪ್ಪದೆ ಶಾಲೆಗೆ ಬರುವ ನಿಯಮಿತತನವನ್ನು ಪಾಲಿಸಲಿಕ್ಕೆಬೇಕು; ಅಂದರೆ ಹುಡುಗರೂ ನಿಯಮಿತತನದೀದ ನಡೆಯುವ ಶೀಲವುಳ್ಳವರಾಗುವರು; ಶಿಕ್ಷಕರು ನುಡಿದಂತೆ ನಡೆಯುವವರಿರಬೇಕು; ಅಂಪರೆ ಹುಡುಗರಲ್ಲಿಯೂ ಅದೇ ವೃತ್ತಿಯು ನೆಲೆಗೊಳ್ಳುವದು. ಹುಡುಗರು ಕೇವಲ ತಮ್ಮ ಶಿಕ್ಷಕರ ನಡೆನುಡಿಗಳನ್ನು ಅನುಕರಿಸುತ್ತಿರುವರು. ಆದುದರಿಂದ, ಶಿಕ್ಷಕರು ಮಾದರಿಯ ಮನುಷ್ಯರಾಗಿರತಕ್ಕದ್ದು. ಶಿಕ್ಷಕರಲ್ಲಿದ್ದ ಕೆಲವೊಂದು ಪಾಲಿನ ಶೀಲಗಳನ್ನು ವಿದ್ಯಾರ್ಥಿಗಳು ಅನುಕರಿಸುತ್ತಿರುವರು; ಹುಡುಗರು ಸುಶೀಲರಾಗಬೇಕಾದರೆ ಶಿಕ್ಷಕರಲ್ಲಿ ಸುಶೀಲತೆಯು ನೆಲೆಗೊಂಡಿರಲಿಕ್ಕೆಬೇಕು; ನಾವೆಲ್ಲರೂ ಮಹಾತ್ಮಾ ಗಾಂಧಿಯವರ ಶಿಷ್ಯರಿರುವೆವು. ಅವರಲ್ಲಿಯ ಶೀಲಗಳೆಲ್ಲ ನಮ್ಮಲ್ಲಿರಲಿಕ್ಕೆ ಶಕ್ಯವಿಲ್ಲ. ಅವರ ಶೀಲಗಳ ಕೆಲವೊಂದು ಅಂಶವು ನಮ್ಮಲ್ಲಿರಬಹುದು. ಮಹಾತ್ಮಾಜಿಯವರ ಸಚ್ಚೀಲದ ತೇಜಸ್ಸೇ ಜಗತ್ತನ್ನೆಲ್ಲ ಸೆಳೆದುಕೊಂಡು ಬಿಟ್ಟಿರುವದು! ಆದಕಾರಣ ಶಿಕ್ಷಕರೂ ಶೀಲವುಳ್ಳರಾಗಿ ತಮ್ಮ ಶಿಷ್ಯರನ್ನು ಆಕರ್ಷಿಸಿಕೊಳ್ಳಬೇಕು; ಶಿಕ್ಷಕರು ಪ್ರತಿನಿತ್ಯ ಸ್ನಾನ ಮಾಡಿ ಸ್ವಚ್ಛತೆಯಿಂದ ಶಾಲೆಗೆ ಬರುತ್ತಿರಬೇಕು; ಧೂಮ್ರಪಾನವೇ ಮೊದಲಾದ ವ್ಯಸನಗಳನ್ನು ಬಿಟ್ಟುಬಿಡಬೇಕು; ಶಾಲೆಯಲ್ಲಿ ಸ್ವಚ್ಛತೆಯು ಒಡೆದು ತೋರುತ್ತಿರಬೇಕು; ಸುತ್ತಲಿನ ಇಂತಹ ಸಂಸರ್ಗದಿಂದ ವಿದ್ಯಾರ್ಥಿಗಳೂ ತಪ್ಪದೆ ಅದೇ ವೃತ್ತಿಯರಾಗುವರು; ಶಿಕ್ಷಕರು ಕರ್ತವ್ಯತತ್ಪರರೂ, ಸದಾಚಾರಿಗಳೂ ಆಗಿದ್ದರೆ, ಇಡೀ ಊರೇ ಅವರಿಗೆ ಶಿರಬಾಗಿ ಅಳುಕಿ ನಡೆಯುವದು! ಇಂತಹ ಶಿಕ್ಷಕರೂ ಇರುವರು; ಅಂಥ ಸತ್+ಶಿಕ್ಷಕರು ಹಳ್ಳಿಹಳ್ಳಿಗೆ ಬೇಕಾಗಿರುವರು; ರಾಜಕಾರಣದ ಜ್ಞಾನವನ್ನು ಶಿಕ್ಷಕರು ವಿದ್ಯಾರ್ಥಿಗಳಿಗೆ ಮಾಡಿಕೊಡತಕ್ಕದ್ದು; ಆದರೆ ಬಣಗಳಲ್ಲಿ ಸೇರತಕ್ಕದ್ದಲ್ಲವೆಂಬದನ್ನು ಮರೆಯಕೂಡದು.'

" ದೇಶಸೇವೆಗಾಗಿ ದುಡಿಯುವದು ಶಿಕ್ಷಕರ ಕರ್ತವ್ಯವೇ ಇರುವದು; ಆದರೆ ಕೆಲ ನೌಕರರು ದೇಶಸೇವೆಯ ಕೆಲಸವು ಕಾಂಗ್ರೆಸ್ಸಿನವರದು; ನಾವು ಬರೇ ನವಕರಿಯನ್ನು ಮಾಡುವವರು " ಎಂಬ ಆರದಿಳಿಯವರಿರುತ್ತಾರೆ. ಅವರ ಈ ವಿಚಾರವು ತಪ್ಪಾದದ್ದು ! ಎಲ್ಲ ನೌಕರಿಗಳು ಜನತಾ ಸೇವೆಗಾಗಿಯೇ ಇರುತ್ತವೆ. ನೌಕರರು ತಮ್ಮ ಕೆಲಸವನ್ನು ದೇಶಹಿತದ ಪವಿತ್ರ ಬುದ್ಧಿಯಿಂದ ಸಾಗಿಸತಕ್ಕದ್ದು. ಶಿಕ್ಷಕರಂತೂ ರಾಷ್ಟ್ರದ ಹಣೆಯ ಬರಹವನ್ನು ಬರೆಯತಕ್ಕವರು; ಅಂದರೆ ಭೂಲೋಕದ ವಿಧಿ (ಬ್ರಹ್ಮ)ಗಳು; ಅವರು ಹಣೇಬರಹವನ್ನು ಚಲೋ ಭಾವನೆಯಿಂದ ಬರೆದರೆ ರಾಷ್ಟ್ರೋದ್ಧಾರವು ಖಂಡಿತವಾಗಿ ಆಗುವದು ! ಇಲ್ಲವಾದರೆ ರಾಷ್ಟ್ರಕ್ಕೆ ನಿಜವಾದ ವಿಧಿಗಳೇ ಆಗುವರು !"

"ಇಂಗ್ಲಂಡದಲ್ಲಿ 'ಬ್ರಿಟನ್ನವು ಯಾವಾಗಲೂ ಸಾಮ್ರಾಜ್ಯವನ್ನಾಳಬೇಕು; ಎಲ್ಲ ಸಮುದ್ರಗಳ ಒಡೆತನವು ಅದರ ಕೈಯಲ್ಲಿಯೇ ಇರಬೇಕು' ಎಂದು ದಿನಾ ಮುಂಜಾನೆ ವಿದ್ಯಾರ್ಥಿಗಳಿಂದ ಅನ್ನಿಸುವರು. ಅದರಂತೆಯೇ ನೀವು ನಿಮ್ಮ ವಿದ್ಯಾರ್ಥಿಗಳಿಂದ ದಿನಾ ಮುಂಜಾನೆ " ಹಿಂದುಸ್ಥಾನವು ಸ್ವತಂತ್ರವಾಗಲಿಕ್ಕೆ ಬೇಕು. " ಎಂದು ಅನ್ನಿಸಿರಿ, " ರಾಜಾಪ್ರತ್ಯಕ್ಷದೇವತಾ " ಎನ್ನಿಸುವದಕ್ಕಿಂತ " ರಾಜಾ ಪ್ರತ್ಯಕ್ಷ ರಾಷ್ಟ್ರಸೇವಕ " ಎಂದು ಕಲಿಸಿರಿ. "

" ಶಿಕ್ಷಕ ಬಂಧುಗಳೇ, ನೀವು ನಾಲ್ಕು ರೂಪಾಯಿಗಳ ಸಲುವಾಗಿ ಜನರನ್ನು ಹೊಗಳುವದಕ್ಕಿಂತ ನಿಮ್ಮ ಕರ್ತವ್ಯದಲ್ಲಿ ನಿರತರಾಗಿರಿ. ಆಂದರೆ ಆ ರೂಪಾಯಿಗಳು ತಾವಾಗಿಯೇ ಬಂದು ನಿಮ್ಮ ಉಡಿಯಲ್ಲಿ ಬೀಳತೊಡಗುವವು. ಒಂದು ವೇಳೆ ರೂಪಾಯಿಗಳು ದೊರೆಯದಿದ್ದರೂ, ಕರ್ತವ್ಯತತ್ಪರತೆಯಿಂದ ಮನಶಾಂತಿಯು ಅವೋಘವಾದ ಧನಪ್ರಾಪ್ತಿಯು ನಿಶ್ಚಯವಾಗಿ ದೊರೆಯುವದು ! ಅದರಿಂದ ಹೆಸರು ವಾಸಿಗಳೂ ಆಗುವಿರಿ. ನೀವು ಈ ಶಿಬಿರದಲ್ಲಿ ಕಲಿತದ್ದನ್ನು ಹಳ್ಳಿಯ ಮುಕ್ಕಳಲ್ಲಿ ಒಡಮೂಡಿಸಿರಿ. ಆಂದರೆ ಶಿಬಿರವನ್ನು ತೆಗೆದದ್ದು ಸಾರ್ಥಕವಾಗುವದು"

ಹಾವೇರಿ
ತಾ|| ೬-೧೨-೩೯

S. F. MARDUR,
Member D. S. B. Dharwar

ಬೆನಕನಹಬ್ಬ

(ಹಿಂದಿನ ಸಂಚಿಕೆಯಿಂದ ಮುಂದೆಸಾಗಿದ್ದು)

ನಾಲ್ಕುದಿಕ್ಕಿಗೆ ನಾಲ್ಕು ವಿನಾಯಕರ ಮೂರ್ತಿಗಳು ಕೊರೆಯಲ್ಪಟ್ಟಿದ್ದು ಅದರ ಮೇಲಿನ ಲೇಖದಲ್ಲಿ ವಿನಾಯಕನ ಪ್ರಾರ್ಥನೆ ಮಾಡಿದ್ದು ಕಂಡುಬರುತ್ತದೆ. ಗುಡ್ಡಗಳಲ್ಲಿ ಕೊರೆದ ಎಷ್ಟೋ ಪುರಾತನ ದೇವಸ್ಥಾನಗಳಲ್ಲಿ ಸಹ ಗಣಪತಿಯ ಮೂರ್ತಿಯು ಕೊರೆದದ್ದು ದೃಗ್ಗೋಚರವಾಗುತ್ತದೆ. ಇದರ ಮೇಲಿಂದ ಒಂದು ಸಾವಿರ ವರ್ಷಕ್ಕೆ ಪೂರ್ವದಲ್ಲಿಯೇ ಗಣಪತಿಯ ಉಪಾಸನೆಯು ನಮ್ಮ ದೇಶದಲ್ಲಿ ಬಳಿಕೆಯಲ್ಲಿ ಬಂದಿರುವದೆಂದೆನ್ನಲು ಯಾವ ಪ್ರತ್ಯವಾಯವೂ ಇಲ್ಲ.

ಗಣಪತಿಯ ಉಪಾಸನೆಯನ್ನು ವಿಶಿಷ್ಟರೀತಿಯಿಂದ ಆಚರಿಸುವ ಪಂಗಡಕ್ಕೆ "ಗಾಣಪತ್ಯಪಂಥ"ವೆಂಬ ಹೆಸರಿದೆ. ಈ ಪಂಥವು ಒಂದು ಕಾಲದಲ್ಲಿ ನಮ್ಮ ದೇಶದೊಳಗೆ ಆಸೇತುಹಿಮಾಚಲದ ವರೆಗೆ ವ್ಯಾಪ್ತವಾಗಿದ್ದಂತೆ ಕಂಡುಬರುತ್ತದೆ. ನಮ್ಮ ದೇಶದಲ್ಲಿ ಎಲ್ಲೆಡೆಯಲ್ಲಿ ಈಗಲೂ ಕಂಡುಬರುವ ಗಣೇಶ ವಿಗ್ರಹಗಳೂ, ಗಣೇಶ ಮೂರ್ತಿಗಳೂ, ಗಣೇಶಭಕ್ತರೂ ಇದಕ್ಕೆ ಸಾಕ್ಷಿಯಾಗಿದ್ದಾರೆ. ಗಾಣಪತ್ಯ ಪಂಥದ ವಿಶೇಷ ಪ್ರಭಾವ-ಪ್ರಸಾರಗಳಿಂದಲೇ ವೈದಿಕ ಧರ್ಮವನ್ನು ಪುನರುಜ್ಜೀವನಗೊಳಿಸಿದ ಶ್ರೀಮದಾದ್ಯ ಶಂಕರಾಚಾರ್ಯರು ಗೃಹಸ್ಥರು ಮಾಡಬೇಕಾದ ನಿತ್ಯಪೂಜೆಯ ಪಂಚಾಯತನದಲ್ಲಿ ಗಣಪತಿಗೆ ಒಂದು ಸ್ಥಾನವನ್ನು ಕೊಟ್ಟಿರುವರು-ಮಹಾರಾಷ್ಟ್ರ ಪ್ರಾಂತವಂತೂ ಒಂದು ಕಾಲದಲ್ಲಿ ಗಾಣಪತ್ಯ ಪಂಥದ ತವರು ಮನೆಯೇ ಆಗಿತ್ತು. ಪವಿತ್ರ ಅಷ್ಟ ವಿನಾಯಕರ ಪವಿತ್ರ ದೇವಸ್ಥಾನಗಳು ಅದೇ ಪ್ರಾಂತದಲ್ಲಿವೆ. ಚಿಂಚವಡ, ಮೋರಗಾವ, ಪಾರೋಳೆ, ರಂಜನಗಾವ, ಪುಳೆ ಮೊದಲಾದ ಗ್ರಾಮಗಳಲ್ಲಿಯ ಗಣೇಶ ದೇವಸ್ಥಾನಗಳು ಅತ್ಯಂತ ಜಾಗೃತವಿರುವ ವೆಂದು ಮಹಾರಾಷ್ಟ್ರ ಪ್ರಾಂತದಲ್ಲಿ ಇಂದಿಗೂ ಪ್ರಸಿದ್ಧಿಯಿದೆ. ಮರಾಠೀ ಭಾಷೆಯಲ್ಲಿ ಗಣೇಶಪ್ರತಾಪ, ಗಣೇಶಲೀಲಾಮೃತ, ಗಣೇಶಭಾಗವತ, ಗಣೇಶ ಪುರಾಣ, ಗಣೇಶ ವಿಜಯ ಮೊದಲಾದ ಹಳೆಯ ಓವೀಬದ್ಧ ಗ್ರಂಥಗಳು ವಿಶೇಷ ಪ್ರಸಿದ್ಧವಿದ್ದು, ಅವುಗಳ ಒಟ್ಟು ಶ್ಲೋಕಸಂಖ್ಯೆ ಒಂದುವರೆ ಲಕ್ಷಕ್ಕೆ ಏರಿಕ್ಕಿದೆ. ಶ್ರೀ ಶಿವಪ್ರಭುವಿನ ನಂತರದಲ್ಲಿ ಮರಾಠಾ ರಾಜ್ಯದ ಸೂತ್ರಧಾರರಾಗಿದ್ದ ಪೇಶವೆ ಮನೆತನದವರು ಗಣೇಶ ಭಕ್ತರಿದ್ದಂತೆ ಕಂಡುಬರುತ್ತದೆ. ಶ್ರೀಮಂತ ಪ್ರಥಮ ಮಾಧವರಾವ ಪೇಶವೆಯವರು ಹೆಸರಾದ ಗಣೇಶಭಕ್ತರಿದ್ದು, ಥೇಊರಲ್ಲಿರುವ ಗಣಪತಿಯ ಉಪಾಸನೆಯನ್ನು ಒಳ್ಳೇ ಮನೋಭಾವದಿಂದ ಮಾಡುತ್ತಿದ್ದಂತೆ ಮಹಾರಾಷ್ಟ್ರ ಇತಿಹಾಸ ಗ್ರಂಥಗಳಾದ "ಬಖರ"ಗಳಲ್ಲಿ ಉಲ್ಲೇಖವಿದೆ. ಪೇಶವೆಯವರ ಅವಶೇಷರಾದ ಸದ್ಯದ ಪಟವರ್ಧನ ಸಂಸ್ಥಾನಿಕರ ಕುಲದೈವತವು

ಗಣಪತಿಯೇ ಆಗಿದೆ. ಸಾಂಗಲಿಯಲ್ಲಿಯ ಅಪರ ಕುಲಸ್ವಾಮಿಯಾದ ಗಣಪತಿಯ ದೇವಸ್ಥಾನವು ಪ್ರಸಿದ್ಧವೇ ಇದೆ.

ಗಾಣಪತ್ಯಪಂಥದಲ್ಲಿ ಮಹಾ, ಹರಿದ್ರಾ, ಉಚ್ಛಿಷ್ಟ, ನವನೀತ, ಸ್ವರ್ಣ ಸಂತಾನ ಎಂಬ ಆರು ಉಪಭೇದಗಳಿರುವವೆಂದು ಆನಂದಗಿರಿಯವರು ಬರೆದ "ಶಾಂಕರದಿಗ್ವಿಜಯ" ಎಂಬ ಗ್ರಂಥದಲ್ಲಿ ಹೇಳಲ್ಪಟ್ಟಿದೆ. ಮಹಾಗಣಪತಿ ಪಂಥದವರು ಗಣಪತಿಯೇ ಜಗತ್ಕರ್ತನಾಗಿದ್ದು, ಅವನಿಂದಲೇ ಬ್ರಹ್ಮಾದಿ ದೇವತೆಗಳು ಸಕಲ ವಿಶ್ವವೂ ನಿರ್ಮಿತವಾಗಿರುವವೆಂದು ತಿಳಿಯುವರು. ಹರಿದ್ರಾ-ಗಣಪತಿ-ಪಂಥದವರು ವೇದದಲ್ಲಿ ಉಲ್ಲೇಖಿಸಲ್ಪಟ್ಟ ಬ್ರಹ್ಮಣಸ್ಪತಿಯೇ ಸರ್ವಶ್ರೇಷ್ಠ ಗಣಪತಿಯೆಂದು ತಿಳಿಯುವರು. ಗಣಪತಿಯ ಮೂರ್ತಿ, ಯಜ್ಞೋಪವೀತ, ವಸ್ತ್ರ ಇವೆಲ್ಲವೂ ಪೀತವರ್ಣದವಿರಬೇಕು; ಅವನ ಸೊಂಡಿಲು, ಏಕದಂತ ಇವುಗಳ ತಪ್ಪ ಮುದ್ರೆಗಳನ್ನು ಮೈಮೇಲೆ ಧರಿಸಬೇಕು, ಎಂದು ಅವರ ಮತವಿದೆ. ತಪ್ಪ ಮುದ್ರಾಧಾರಣ ವಿಷಯದಲ್ಲಿ ಈ ಪಂಥವು ಮಾಧ್ವಪಂಥಾನುಯಾಯಿಗಳ ಅನುಕರಣ ಮಾಡಿರುವದೋ ಇಲ್ಲವೆ ಮಾಧ್ವರು ಈ ಹರಿದ್ರಾಗಣಪತಿಪಂಥದವರ ಅನುಕರಣ ಮಾಡಿರುವರೋ ಎಂಬುದು ವಿದ್ವಜ್ಜನರು ಸಂಶೋಧನ ಮಾಡತಕ್ಕ ವಿಷಯವಾಗಿದೆ. ಉಚ್ಛಿಷ್ಟಗಣಪತಿ ಪಂಥದವರು ವಾಮಮಾರ್ಗದಿಂದ ಶಾಕ್ತ ಪಂಥದವರಂತೆ ನಿಂದ್ಯರೀತಿಯಿಂದ ಗಣಪತಿಯ ಅರ್ಚನೆ ಮಾಡುವರು. ನವನೀತ-ಸ್ವರ್ಣ-ಸಂತಾನ-ಗಣಪತಿ-ಪಂಥದವರು ತಾವು ಶ್ರುತಿಯಂತೆ ಗಣಪತಿಯ ಪೂಜೆ ಮಾಡುವೆವೆಂದು ಹೇಳುವರು. ಗಣಪತಿಯು ಆದಿಕಾರಣನೂ, ದೇವಾಧಿದೇವನೂ ಇರುವ ಮೂಲಕ ಪ್ರತಿಯೊಂದು ಶುಭಕಾರ್ಯಾರಂಭದಲ್ಲಿ ಅವನ ಪೂಜೆ ಮಾಡುವೆವೆಂದು ಅವರು ಪ್ರತಿಪಾದಿಸುವರು. ಪುತ್ರಸಂತಾನವಿಲ್ಲದ ಸ್ತ್ರೀಯರು ಗಣೇಶೋತ್ಸವದಲ್ಲಿ ಯಾವದೊಂದು ಮನೆಯಲ್ಲಿ ವಿಧ್ಯುಕ್ತವಾಗಿ ಸ್ಥಾಪಿತವಾದ ಮೃತ್ತಿಕೆಯ ಗಣೇಶ ಮೂರ್ತಿಯನ್ನು ಆ ಮನೆಯವರಿಗೆ ಗೊತ್ತಾಗದಂತೆ ಕದ್ದು ತಂದು, ಅದನ್ನು ತಮ್ಮ ಮನೆಯಲ್ಲಿ ಗುಪ್ತವಾಗಿ ಸೆರೆಹಾಕಿ, ಮುಂದೆ ತಮ್ಮಿಚ್ಛೆಯಂತೆ ಪುತ್ರಸಂತಾನವಾದಮೇಲೆ ಆ ಮೂರ್ತಿಯನ್ನು ಭಕ್ತಿಭಾವದಿಂದ ಪೂಜಿಸಿ, ವೈಭವದಿಂದ ಅದನ್ನು ವಿಸರ್ಜಿಸುವ (ಹೆರವರಿಗೆ ಕೆಡುಕನ್ನು ಕೋರಿ ತಮಗೆ ಹಿತವನ್ನಿಚ್ಛಿಸುವ) ತಾಮಸ ಗಣೇಶ ಭಕ್ತಿಯ ಹೀನ ಪದ್ಧತಿಯು ಈ ಸಂತಾನ ಗಣಪತಿ ಪಂಥದಿಂದಲೇ ಬಳಿಕೆಯಲ್ಲಿ ಬಂದಂತೆ ಕಾಣುತ್ತದೆ.

"ಭಾದ್ರಪದ ಶುದ್ಧ ಚತುರ್ಥಿಯ ದಿವಸ ಮೃತ್ತಿಕಾ ಗಣಪತಿ ಪ್ರತಿಮೆಯ ಪೂಜೆ ಮಾಡಬೇಕು. ಈ ದೇವತೆಗೆ ಅತ್ಯಂತ ಪ್ರೀತ್ಯಾಸ್ಪದವಾದ ಕರಿಕೆ-ಮೋದಕಗಳನ್ನು ಸಮರ್ಪಿಸಬೇಕು. ಶಕ್ತ್ಯಾನುಸಾರವಾಗಿ ನವವಿಧ ಭಕ್ತಿಗಳಿಂದ ಅವನನ್ನು

ಸಂತುಷ್ಟಪಡಿಸಬೇಕು. ಗಣಪತಿಯ ವಿಸರ್ಜನವನ್ನು ಒಂದು, ಐಯ್ದು, ಏಳು, ಹನ್ನೊಂದು ದಿವಸಗಳಿಗೆ ಮಾಡಬೇಕು. ವಿಸರ್ಜನವಾಗುವವರೆಗೂ ಉತ್ಸವವನ್ನು ಸಾಗಿಸಬೇಕು. ಉತ್ತರ ಪೂಜೆಯ ನಂತರ ಪ್ರತಿಮೆಯನ್ನು ಜಲದಲ್ಲಿ ವಿಸರ್ಜಿಸ ಬೇಕು." ಹೀಗೆ ವಾರ್ಷಿಕ ಗಣಪತಿ ಪೂಜೆಯ ಶಾಸ್ತ್ರೋಕ್ತವಿಧಿಯಿದೆ. ಕೆಲವರು ದಸರೆಯವರೆಗೂ ಇನ್ನು ಕೆಲವರೂ ವರುಷ ಪರಿಯಂತರವೂ ಗಣಪತಿಯನ್ನಿಡು ವರು. ಗಣೇಶ ಚತುರ್ಥಿಯನ್ನು ಪಾಲಿಸುವ ಪದ್ಧತಿಯು ವಿಂಧ್ಯಾದ್ರಿಯ ದಕ್ಷಿಣದಲ್ಲಿ ಮಾತ್ರ ಬಳಿಕೆಯಲ್ಲಿದೆ. ದಕ್ಷಿಣ ದೇಶದಿಂದ ಉತ್ತರ ಹಿಂದುಸ್ತಾನದಲ್ಲಿ ಹೋಗಿ ನೆಲಿಸಿದ ಜನರೂ ಈ ಉತ್ಸವವನ್ನು ಪಾಲಿಸುವರು. ಮುಂಬಯಿ ಇಲಾಖೆಯ ಕೆಲ ಭಾಗದಲ್ಲಿ ಈ ದಿವಸ ಕಾಗದದ ಮೇಲೆ ಇಲ್ಲವೆ ಚಂದನ ಪತ್ರದ ಮೇಲೆ ತಾತ್ಪರ್ತಿಕವಾಗಿ ತೆಗೆದ ಗಣಪತಿಯ ಚಿತ್ರವನ್ನು ಪೂಜಿಸುವರು. ವಿಧರ್ಮಿಗಳ ದಬ್ಬಾಳಿಕೆಗೆ ಕಂಗೆಟ್ಟು ಗತಿಗಾಣದೆ ದೇಶತ್ಯಾಗ ಮಾಡಿ, ಅಡವಿಯ ಪಾಲಾಗಿ ಓಡಿಹೋಗುವ ಭೀಕರ ಪ್ರಸಂಗ ಬಂದದ್ದರಿಂದಲೇ ತಮ್ಮ ಧಾರ್ಮಿಕ ವಿಧಿಗಳನ್ನು ಹೇಗಾದರೂ ರಕ್ಷಣ ಮಾಡಿಕೊಳ್ಳುವದಕ್ಕಾಗಿ ನಮ್ಮ ಪೂರ್ವಜರು ಇಂಥ ಉಪಾಯಗಳನ್ನು ಅವಲಂಬಿಸಿದಂತೆ ಕಾಣುತ್ತದೆ. ಇದೇ ಕುಲಾಚಾರವು ಕೊಂಕಣ ನಾಡಿನ ಕೆಲಭಾಗದಲ್ಲಿ ಇಂದಿಗೂ ಪ್ರಚಾರದಲ್ಲಿದೆ. ದ್ರಾವಿಡ ದೇಶದಲ್ಲಿ ರಾಮೇಶ್ವರದವರೆಗೆ ಗಣೇಶೋತ್ಸವವು ನಡೆಯುತ್ತಿದ್ದು ಆದರ ಆಚರಣೆಯ ಕ್ರಮ ದಲ್ಲಿ ಮಾತ್ರ ಸ್ಥಳಪರತ್ವದಿಂದ ಭಿನ್ನತೆಯಿದೆ. ಕರ್ನಾಟಕದಲ್ಲಿ ಗಣೇಶ ಚತುರ್ಥಿಗೆ "ಬೆನಕನ ಹಬ್ಬ"ವೆಂದು ಅನ್ನುತ್ತಾರೆ. "ವಿನಾಯಕ" ಈ ಶಬ್ದದ ತದ್ಭವವೇ "ಬೆನಕ" ಎಂಬುದಾಗಿದೆ. ಆಂಧ್ರನಾಡಿನಲ್ಲಿ ಗಣೇಶ ಚತುರ್ಥಿಗೆ "ಪಿಲ್ಲೆಯರ ಚವಲೆ" ಎಂದು ಅನ್ನುತ್ತಾರೆ. "ಪಿಲ್ಲೆಯರ" ಎಂಬುದು ಆ ಜನರು ಗಣಪತಿಗೆ ಕೊಟ್ಟ ಹೆಸರಾಗಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ವರ್ಣಗಳ ಆರಾಧ್ಯ ದೈವತಗಳು ಕ್ರಮವಾಗಿ ಶಂಕರ, ವಿಷ್ಣು, ಬ್ರಹ್ಮ, ಗಣಪತಿ ಎಂದು ಅಲ್ಲಿಯ ಜನರ ಕಲ್ಪನೆಯಿದೆ. "ಗಣಪತಿಯು ಬ್ರಾಹ್ಮಣರ ದೈವತವಲ್ಲ, ಶೂದ್ರರ ಆರಾಧ್ಯ ದೈವತವು." ಎಂಬ ಈ ವಿಶಿಷ್ಟ ಕಲ್ಪನೆಯಿಂದಲೇ ಆ ಬ್ರಾಹ್ಮಣರಲ್ಲಿ ಗಣಪತಿಯ ನೈವೇದ್ಯವು ಭಕ್ಷಣಕ್ಕೆ ನಿಷಿದ್ಧವೆಂಬ ವಿಚಾರವು ಬಳಕೆಯಲ್ಲಿ ಬಂದಂತೆ ಕಾಣುತ್ತದೆ. ಗಣಪತಿಯ ನೈವೇದ್ಯಭಕ್ಷಣದಿಂದ ಬುದ್ಧಿವಾಂದ್ಯವಾಗುವ ಮೂಲಕ ಪುರುಷರು ಆದನ್ನು ಭಕ್ಷಿಸಕೂಡದೆಂದೂ ಸ್ತ್ರೀಯರಿಗೆ ಅಷ್ಟೊಂದು ಬುದ್ಧಿಚಾಪಲ್ಯದ ಅವಶ್ಯ ಕತೆ ಇಲ್ಲವಾದುದರಿಂದ ಅವರು ಮಾತ್ರ ಆ ಎಡೆಯನ್ನು ಭಕ್ಷಿಸಬಹುದೆಂದೂ ಸಕಲ ಬ್ರಾಹ್ಮಣ ಜನಾಂಗದಲ್ಲಿ ಕಲ್ಪನೆಯಿದೆ. ತಮಿಳು ನಾಡಿನಲ್ಲಿ ಗಣಪತಿಗೆ "ತುಂಬಿಕಾ ಈ ಅಲವರ" ಅಂದರೆ "ಬುದ್ಧಿವಾನ ಗಜಾನನ" ಎಂದು

ಅನ್ನುತ್ತಾರೆ. ಗುಜರಾಥದಲ್ಲಿ ಗಣೇಶೋತ್ಸವದ ಆಚರಣೆಯಿಲ್ಲ. ಆದರೆ ಗಣೇಶ ಚತುರ್ಥಿಯ ದಿವಸ ಬೆಲ್ಲ, ತುಪ್ಪ, ಸೆಜ್ಜೆಯ ಹಿಟ್ಟು ಇವುಗಳಿಂದ ಸಿದ್ಧಪಡಿಸಿದ ಗುಳಿಗೆಗಳನ್ನು ಮೂಷಕಗಳ ಖಾದ್ಯಕ್ಕಾಗಿ ಮನೆಯ ಎಲ್ಲ ಭಾಗಗಳಲ್ಲಿ ಇಡುವ ಪದ್ಧತಿಯಿದೆ. ಇಲಿಗಳು ಅಂದು ಆ ಖಾದ್ಯವನ್ನು ಅತ್ಯಾನಂದದಿಂದ ಭಕ್ಷಿಸಿ, ನಲಿದಾಡುವವು. ಗಣೇಶೋತ್ಸವದ ದಿವಸ ಅವನ ವಾಹನವನ್ನು ಈ ಪ್ರಕಾರ ಮನ್ನಿಸುವ ಪದ್ಧತಿಯು ಆ ನಾಡಿನಲ್ಲಿ ಯಾಕೆ ಬಳಕೆಯಲ್ಲಿ ಬಂದಿರುವದೆಂಬುದು ಒಳ್ಳೇ ವಿಚಾರಾರ್ಹವಾದ ವಿಷಯವಾಗಿದೆ. ಕಾಶೇವಾಡದಲ್ಲಿ ವೈದಿಕಪಂಥದ ಪ್ರತಿಯೊಂದು ಮನೆಯಲ್ಲಿಯೂ ಗಣಪತಿಯ ಮೂರ್ತಿಯಿರುತ್ತದೆ. ಆದರೆ ದಕ್ಷಿಣ ದೇಶದಂತೆ ಗಣೇಶೋತ್ಸವ ಮಾಡುವ ಪದ್ಧತಿಯು ಅಲ್ಲಿ ಪ್ರಚಾರದಲ್ಲಿಲ್ಲ.

ಪ್ರತಿಯೊಬ್ಬ ಹಿಂದುವಿನ ಅಂತಃಕರಣದಲ್ಲಿ ಗಣಪತಿಯ ಬಗ್ಗೆ ಪೂಜ್ಯತ್ವದ ಭಾವನೆಯಿದೆ. ಈ ದೈವತವು ವಿಘ್ನಗಳ ಹರನ ಮಾಡಲು ಸರ್ವಥೈವ ಸಮರ್ಥ ವಿರುವ ಮೂಲಕ ಸಕಲ ಶುಭಾಶುಭ ಸಂಸ್ಕಾರಗಳಲ್ಲಿ ಪ್ರಾರಂಭಕ್ಕೆ ಗಣೇಶ ಪೂಜೆಯೇ ಮುಖ್ಯವಾಗಿದೆ. ಈ ದೇವತೆಯ ವ್ಯಾಪ್ತಿಯು ನೇಪಾಳದಲ್ಲಿಯ ಲೌಡಿ ಗಣೇಶನಿಂದ ರಾಮೇಶ್ವರದಲ್ಲಿರುವ ಗಣೇಶ ಮೂರ್ತಿಯ ವರೆಗಿದೆ. ಶೈವ, ವೈಷ್ಣವ ಹೀಗೆ ಎರಡೂ ಪಂಥದ ಜನರು ಈ ದೇವತೆಯನ್ನು ಭಜಿಸುತ್ತಿದ್ದು, ತಮ್ಮ ತಮ್ಮ ಮತ ಸಾಂಪ್ರದಾಯದಂತೆ ಯಾರು ಶಿವಸ್ವರೂಪವೆಂದೂ ಯಾರು ವಿಷ್ಣುಸ್ವರೂಪವೆಂದೂ ತಿಳಿಯುತ್ತಾರೆ. ಹಿಂದುಸ್ಥಾನದ ಪ್ರತಿಯೊಂದು ಗ್ರಾಮದಲ್ಲಿ ಬಹುಶಃ ವಿಘ್ನಹರ್ತ ಗಣಪತಿಯ ದೇವಾಲಯವು ಇದ್ದೇ ಇರುತ್ತದೆ. ಎಷ್ಟೋ ಜನರು ಅದನ್ನೇ ತಮ್ಮ ಕುಲದೈವತವೆಂದು ತಿಳಿಯುತ್ತಾರೆ. ತಂಜಾವರ ದಲ್ಲಿ ಗಣಪತಿಯ ದೇವಾಲಯವು ಒಳ್ಳೇ ಪ್ರಸಿದ್ಧವಿದೆ. ತ್ರಿಚನಾಪಲ್ಲಿಯಲ್ಲಿ "ಉಚ್ಚಿಪಿಲ್ಲೇಯರ" ಎಂಬ ಗಣಪತಿಯ ದೇವಾಲಯವು ಅತ್ಯಂತ ಭವ್ಯವೂ ಸುಂದರವೂ ಇದೆ. ಪಂಪಾಕ್ಷೇತ್ರದಲ್ಲಿ "ಸಾಸಿವೆಯ ಗಣೇಶ" "ಕಡಲೆಯ ಗಣೇಶ" ಎಂಬೆರಡು ಗಣಪತಿಯ ಮೂರ್ತಿಗಳು ಒಳ್ಳೇ ಭವ್ಯವಿದ್ದು, ಚಿಕ್ಕ ಗುಡ್ಡದಷ್ಟು ಎತ್ತರವಿವೆ. ಗೋಕರ್ಣ ಕ್ಷೇತ್ರದಲ್ಲಿ ಊರ್ಧ್ವ ಗಣಪತಿಯ ಮೂರ್ತಿಯಿದೆ. ಗಣಪತಿಗೆ ಇಷ್ಟೊಂದು ಮಹತ್ವವಿದ್ದುದರಿಂದಲೇ ಎಷ್ಟೋ ಸಂಸ್ಕೃತ, ಪ್ರಾಕೃತ ಭಾಷೆಗಳ ಗ್ರಂಥಾರಂಭದಲ್ಲಿ ಮಂಗಲಪೂರ್ವಕವಾಗಿ ಗಣೇಶ-ಸ್ತವನ ಮಾಡಿದ್ದು ಕಂಡುಬರುತ್ತದೆ.

ಗಣೇಶೋತ್ಸವವು ಪ್ರಾಚೀನಕಾಲದಿಂದ ನಮ್ಮ ದೇಶದಲ್ಲಿ ಹಿಂದು ಧರ್ಮ ದಲ್ಲಿಯ ಸಕಲ ಜಾತಿಗಳಲ್ಲಿ ರೂಢವಾಗಿದ್ದರೂ ಅದು ಕೇವಲ ತಮ್ಮ ತಮ್ಮ ಮನೆ ಮನೆಗಳ ಮಟ್ಟಿಗಿದ್ದು ಅದಕ್ಕೆ ಈಗಿನ ಸಾರ್ವಜನಿಕ ಹಾಗು ರಾಷ್ಟ್ರೀಯ

ಸ್ವರೂಪವನ್ನು ಕೊಟ್ಟವರೆಂದರೆ ಸ್ವರ್ಗೀಯ ಲೋಕಮಾನ್ಯ ಟಿಳಕರವರೇ ! ಹಿಂದುಗಳಲ್ಲಿ ಜಾತಿ–ಪಂಥ ಭೇದಗಳ ಅತಿರೇಕವಿದ್ದು, ಜನಸಾಮಾನ್ಯರಲ್ಲಿ ಏಕ ದೈವತದ, ಏಕತತ್ವದ, ಏಕ ಆಚಾರದ ಭಾವನೆಯಿಲ್ಲದ್ದರಿಂದ ಜನಾಂಗದಲ್ಲಿ ಅನೈಕ್ಯತೆಯುಂಟಾಗಿ, ಅದರಿಂದ ನಮ್ಮ ರಾಷ್ಟ್ರಕ್ಕೆ ಅಪಾರವಾದ ಹಾನಿಯಾಗಿದೆ. ಹಿಂದುಗಳ ಈ ಅವನತಿಯ ಮೂಲ ಕಾರಣವನ್ನು ಕಂಡುಹಿಡಿದು, ಲೋಕಮಾನ್ಯರವರು ಹಿಂದು ಧರ್ಮದಲ್ಲಿಯ ಶೈವ–ವೈಷ್ಣವ ಮೊದಲಾದ ಸಕಲ ಪಂಥದವರೂ ಬ್ರಾಹ್ಮಣ–ಶೂದ್ರಾದಿ ಸಕಲ ಜಾತಿಯವರೂ ಒಂದು ಧಾರ್ಮಿಕ ಮಧ್ಯಬಿಂದುವಿನಲ್ಲಿ ಒಟ್ಟುಗೂಡಿ, ವಿಚಾರವಿನಿಮಯ ಮಾಡುವಂತೆ ಸಕಲ ಜಾತಿ–ಪಂಥಗಳ ಮನ್ನಣೆಗೆ ಪಾತ್ರವಾದ ಶ್ರೀ ಗಣೇಶ ದೈವತದ ಸಾರ್ವಜನಿಕ ರಾಷ್ಟ್ರೀಯ ಉತ್ಸವವನ್ನು ಪ್ರಾರಂಭಿಸಿರುವರು. ಈ ಉತ್ಸವದಲ್ಲಿ ಎಲ್ಲ ಕಡೆಗೂ ಪುರಾಣ, ಪ್ರವಚನ, ಕೀರ್ತನ, ವಾಖ್ಯಾನ ಇವುಗಳ ಅಖಂಡ ಜ್ಞಾನಸತ್ರ ನಡೆಯುವಂತೆಯೂ ನಾಟ್ಯ–ಗಾಯನ–ವಾದನ ನೃತ್ಯ–ಚಿತ್ರಕಲೆಗಳಿಗೆ ಉತ್ತೇಜನ ದೊರೆಯುವಂತೆಯೂ ಆ ಮಹಾ ಪುರುಷರೇ ತಳಹದಿಯನ್ನು ಹಾಕಿರುವರು. ಲೋಕಮಾನ್ಯರು ಮಹಾರಾಷ್ಟ್ರ ಪ್ರಾಂತದವರಾದುದರಿಂದ ಆ ಪ್ರಾಂತದಲ್ಲೆಲ್ಲ ಅವರ ಜೀವಮಾನದಲ್ಲಿಯೇ ಈ ನಾಡಹಬ್ಬದ ಪ್ರಚಾರವಾಗಿದ್ದು ನೆರೆಯ ಪ್ರಾಂತವಾದ ನಮ್ಮ ಕನ್ನಡ ನಾಡಿನಲ್ಲಿಯೂ ಕೂಡ ಅದರ ಹಬ್ಬುಗೆಯಾಗಿದೆ. ಇದಲ್ಲದೆ ಮಹಾರಾಷ್ಟ್ರೀಯರು ಹಿಂದುಸ್ತಾನದ ಯಾವ ಭಾಗಗಳಲ್ಲಿ ನೆಲೆಯಾಗಿರುವರೋ ಅಲ್ಲಲ್ಲಿ ಅವರು ಅತ್ಯಂತ ಅಭಿಮಾನದಿಂದ ಈ ನಾಡಹಬ್ಬದ ಮಹೋತ್ಸವವನ್ನು ಜರುಗಿಸುತ್ತಿರುವರು. ಅಥರ್ವ ಶೀರ್ಷದಲ್ಲಿ "ತಂ ತ್ವಾ ತಂ ತ್ವಾಂ ತಂ ತ್ವಾಂ ತಂ ತ್ವಾಂ ।" ಎಂದು ಗಣಪತಿಯು ಸ್ತುತಿಯಿರುವದರಿಂದ ಗಣೇಶನು ನಿಜವಾಗಿಯೇ ಹಿಂದುಗಳ ರಾಷ್ಟ್ರೀಯ ದೈವತವಾಗಿರುವನು.

ಗಣೇಶನು ವಿಘ್ನವಿನಾಶಕ ಮಂಗಲ ಮೂರ್ತಿಯಾಗಿದ್ದು ೧೬ ವಿದ್ಯೆ ೬೪ ಕಲೆಗಳಿಂದ ಮಂಡಿತನಾಗಿರುವ ಮೂಲಕ ಅವನ ಕೃಪಾಪ್ರಸಾದದಿಂದ ಸುಬುದ್ಧಿ-ಸುವಿದ್ಯೆಗಳ ಲಾಭವು ಸುಲಭವಾಗಿ ಪ್ರಾಪ್ತವಾಗುವದೆಂದು ಹಿಂದುಗಳಿಂದ ನಮ್ಮ ಗ್ರಹಿಕೆಯಿದೆ. ಯಾವದೊಂದು ಕಾರ್ಯವು ಚಿಕ್ಕದೇ ಇರಲಿ ದೊಡ್ಡದೇ ಇರಲಿ ಅದು ನಿಶ್ಚಿತವಾಗಿ ಕೈಗೂಡಿ, ಅದರಿಂದ ಇಚ್ಛಿತ ಹೇತುವು ಸಾಧ್ಯವಾಗಿಯೇ ತೀರುವದೆಂದು ಎದೆ ತಟ್ಟಿ ಹೇಳುವದು ಅಶಕ್ಯವೇ ಆಗಿದೆ. ನಮ್ಮ ಕಲ್ಪನೆಗೆ ಎಟಾರದ ಎಷ್ಟೋ ಅದೃಷ್ಟ ಸಂಗತಿಗಳು ಅಕಸ್ಮಿಕವಾಗಿ ಬಂದು ಯಾವ ಸಮಯದಲ್ಲಿ ಅಡ್ಡಿ ಮಾಡುವವೆಂಬದನ್ನು ಹೇಳುವದು ಅಶಕ್ಯವಿದ್ದ ಮೂಲಕ ಪ್ರತಿಯೊಂದು ಕಾರ್ಯಾರಂಭದಲ್ಲಿ ವಿಘ್ನಹರ್ತನಾದ ಪರಮೇಶ್ವರನ ಪ್ರಾರ್ಥನೆ ಮಾಡಿ, ಅವನ

ಕೃಪಾಭರಿತರಾದ್ದಲ್ಲಿ ಕಾರ್ಯ ಮಾಡುತ್ತಿರುವದು ಮನುಷ್ಯಮಾತ್ರರ ಯೋಗ್ಯ ಧರ್ಮವಾಗಿದೆ. ಪುನಃ ಪುನಃ ವಿಘ್ನಗಳು ಉಪಸ್ಥಿತವಾಗಿ, ತಮ್ಮ ಪ್ರಗತಿಯ ಮಾರ್ಗವನ್ನು ಪ್ರತಿಬಂಧಿಸಹತ್ತಿದರೂ ಅದರಿಂದ ಭಯಗೊಂಡು ಹತಾಶರಾಗದೆ ಈಶ್ವರಭಕ್ತಿಯ ಅಭೇದ್ಯ ಢಾಲು ಮುಂದೆ ಚಾಚಿ, ಕಾರ್ಯೋನ್ಮುಖರಾಗುವದೇ ಪುರುಷಾರ್ಥದ ಮುಖ್ಯ ಬೀಜಮಂತ್ರವಾಗಿದೆ. ಸದ್ಯಸ್ಕಾಲದಲ್ಲಿ ಗಣಪತಿಯಂಥ ಗಜತುಂಡಧಾರಿ ಸ್ವರೂಪವನ್ನು ಪರಮಾತ್ಮನ ಸಚ್ಚಿದಾನಂದ ಸ್ವರೂಪಕ್ಕೆ ಹೊಂದಿಕೆ ಮಾಡಿ ಹೇಳುವದು ಕಠಿಣವಾಗಿರುವ ಮೂಲಕ ಪ್ರಗಲ್ಭ ವಿಚಾರದ ಸುಧಾರಕ ಜನರು ಗಣೇಶಚತುರ್ಥಿಯಂಥ ಧಾರ್ಮಿಕ ಉತ್ಸವಗಳು ನಮ್ಮ ದೇಶದಲ್ಲಿ ಜರುಗುತ್ತಿರುವದನ್ನು ನೋಡಿ ಮೂಗು ಮುರಿಯುತ್ತಿರುತ್ತಾರೆ. ಅದಕ್ಕಾಗಿ ಜ್ಞಾನಿಗಳೂ, ವಿಚಾರವಂತರೂ ಆದ ಜನರು ಇಂಥ ಹಬ್ಬಗಳಿಗೆ ಶುದ್ಧವೂ, ಉದಾತ್ತವೂ ಆದ ಸ್ವರೂಪ ಕೊಡಲು ಪ್ರಯತ್ನಿಸುವದು ಅವಶ್ಯವಾಗಿದೆ.

ಪ್ರಾಚೀನ ಕಾಲದಲ್ಲಿ ನಮ್ಮ ದೇಶದಲ್ಲಿ ಈಗಿನಂತೆ "ಕ್ಲಬ್" ಇಲ್ಲವೆ "ಸಮಾಜ"ಗಳಿರಲಿಲ್ಲ. ಅದರಿಂದ ಅಗ ಪರಸ್ಪರರಲ್ಲಿ ಪರಿಚಯವಾಗಿ ಬಳಿಕೆ ಬೆಳೆದು, ಸ್ನೇಹ ಸೌಹಾರ್ದ್ರ ಭಾವನೆಗಳು ವೃದ್ಧಿಂಗತವಾಗಲು "ಬೆನಕನ ಹಬ್ಬ" ದಂತಹ ಉತ್ಸವಗಳೇ ಕಾರಣೀಭೂತವಾಗಿದ್ದವು. ಈಗಲಾದರೂ ನಾವು ಇಂತಹ ಉತ್ಸವಗಳಿಂದ ಮೇಲಿನಂತೆ ಉಪಯೋಗ ಮಾಡಿಕೊಳ್ಳಲು ಶಕ್ಯವಿದೆ. ವಿದ್ಯೆಯಲ್ಲಿ ತೀರ ಹಿಂದುಳಿದ ಜಾತಿಗಳಲ್ಲಿ ಸುರಾಪಾನದಂತಹ ಧರ್ಮಬಾಹ್ಯ ಆಚರಣೆಗೆ ಎಡೆಯಾದ ನಮ್ಮ ಬಡ ದೇಶಬಾಂಧವರಿಗೆ ನಿಜವಾದ ನೀತಿ-ಧರ್ಮಗಳ ಮಾರ್ಗವನ್ನು ತೋರಿಸಿ, ಅವರನ್ನು ಸನ್ಮಾರ್ಗಪ್ರವೃತ್ತರನ್ನಾಗಿ ಮಾಡುವದು ಸುಶಿಕ್ಷಿತ ಪರಮೋಚ್ಚ ಕರ್ತವ್ಯವಾಗಿದೆ. ಅನೇಕ ದೇವತ್ವದ ಕಲ್ಪನೆಯನ್ನು ಅಲ್ಲಗಳೆದು ಏಕದೇವತ್ವದ ಭಾವನೆಯನ್ನು ಜನಸಾಮಾನ್ಯರಲ್ಲಿ ಪ್ರಚುರಗೊಳಿಸುವದು ಪುರಾಣ-ಪ್ರವಚನ-ಕೀರ್ತನಕಾರರ ಆದ್ಯಕರ್ತವ್ಯವಾಗಿದೆ.

ಗಣೇಶಚತುರ್ಥಿಯಂಥ ಹಬ್ಬಗಳ ಯೋಗದಿಂದ ನಮ್ಮ ದೇಶದ ಚಿತ್ರಕಲೆಗೆ ಉತ್ತೇಜನ ಕೊಡುವ ಸುಸಂಧಿಯು ಅನಾಯಾಸವಾಗಿ ಪ್ರಾಪ್ತವಾಗುವದು. ಇಂಥ ಸಮಯದಲ್ಲಿ ಪ್ರಸಿದ್ಧ ಚಿತ್ರಕಾರರಿಂದ ಚಿತ್ರಗಳನ್ನು ಸಿದ್ಧಗೊಳಿಸಿ, ಊರೂರಿಗೆ ಪ್ರದರ್ಶನಗಳನ್ನು ತೆರೆದಲ್ಲಿ ಅದರಿಂದ ವಿಶೇಷ ಉಪಯೋಗವಾಗುವಂತಿದೆ. ಚಿತ್ರಕಲೆಯಲ್ಲಿ ಸಾಮಾಜಿಕ, ನೈತಿಕ ಹಾಗು ಇತರ ಅನೇಕ ಪ್ರಕಾರದ ಉನ್ನತಿ ಮಾಡುವ ಸಾಮರ್ಥ್ಯವಿದೆ" ಯೆಂದು ವಿಖ್ಯಾತ ಲೇಖಕರಾದ ಮಿ. ರಸ್ಕಿನ್ ಇವರ ಅಭಿಪ್ರಾಯವಿದೆ. ಅದಕ್ಕಾಗಿ ಸಮಾಜ ಹಿತೇಚ್ಛುಗಳು ಸಾರ್ವಜನಿಕ ರೀತಿಯಿಂದ ಚಿತ್ರಕಾರರಿಗೆ ಉತ್ತೇಜನಾರ್ಥವಾಗಿ ಪಾರಿತೋಷಿಕ ಕೊಟ್ಟು, ಈ ಮಹತ್ವದ

ಮಾತಿನ ವಿಷಯದಲ್ಲಿ ಜನತೆಯ ಚಿತ್ತವನ್ನು ವೇಧಿಸುವಂತೆ ಮಾಡುವದು ಕ್ರಮ ಪ್ರಾಪ್ತವಾಗಿದೆ. ''ಭರತಭೂಮಿಗೆ ನವಜೀವನವನ್ನುಂಟುಮಾಡುವ ಪ್ರಯತ್ನ ಗಳು ಸದ್ಯದಲ್ಲಿ ಅವಶ್ಯವಾಗಿವೆ. ಎಂದು ಬ್ರಹ್ಮೀಭೂತ ಶ್ರೀ ಸ್ವಾಮಿ ವಿವೇಕಾ ನಂದರವರು ಹೇಳಿರುವ ವಿಚಾರವು ಸತ್ಯವಾಗಿದೆ. ವಿಘ್ನಹರ್ತ ಪರಮೇಶ್ವರನ ಸಹಾಯ ದೊರಕಿಸಿ, ಸ್ವಾಮಿಯವರು ಹೇಳಿದಂತೆ ನವಜೀವನದ ಕಾರ್ಯಗಳನ್ನು ಅವ್ಯಾಹತವಾಗಿ ಸಾಗಿಸುವ ಹೊಣೆಗಾರಿಕೆಯು ತರುಣರೂ ಸುಶಿಕ್ಷಿತರೂ ಆದ ಮುಂದಾಳುಗಳ ತಲೆಯ ಮೇಲೆಯೇ ಇದೆ.

ಸಾಮಾಜಿಕ ನೀತಿಮತ್ತೆಯು ಪ್ರತಿಯೊಂದು ಬಾಬಿನಲ್ಲಿ ಉಚ್ಚತಮ ಸ್ಥಿತಿಗೆ ಮುಟ್ಟುವಂತೆ ಮಾಡಲು ಸುಸಂಸ್ಕೃತ ಮನಸ್ಸಿನ ನಿಸ್ಪೃಹ ಮುಂದಾಳುಗಳು ಟೊಂಕ ಕಟ್ಟಿದಾಗಲೇ ನಮ್ಮ ಸದ್ಧೀತುಗಳು ಹಾ ಹಾ ಅನ್ನುವಷ್ಟರಲ್ಲಿಯೇ ಕೊನೆಗಾಣುವವು. ಈ ಕಾರ್ಯದಲ್ಲಿ ಯಶ ಪ್ರಾಪ್ತಿಯು ಕಟ್ಟಿಟ್ಟಂತೆಯೇ ಇದೆ. ಜಗತ್ತಿನ ಇತಿಹಾಸವೇ ಇದಕ್ಕೆ ಸಾಕ್ಷಿಯಾಗಿದೆ. ಯಾವದೊಂದು ಜನಾಂಗದಲ್ಲಿ ಉಚ್ಚತರವಾದ ಧರ್ಮ-ನೀತಿ ತತ್ವಗಳು ಒಂದು ಇಲ್ಲವೆ ಅನೇಕ ವ್ಯಕ್ತಿಗಳ ದ್ವಾರದಿಂದ ಪ್ರವಿಷ್ಟವಾದವೆಂದರೆ ಈ ಹೊಸ ಪ್ರಕಾಶದ ಯೋಗದಿಂದ ಆ ಜನಾಂಗದ ಆಧ್ಯಾತ್ಮಿಕ ಪರಿಸ್ಥಿತಿಯೇ ಬದಲಾಗಿ ಹೋಗುತ್ತದೆ. ಪರಿಸ್ಥಿತಿಯು ಈ ಪಲ್ಲಟವನ್ನನುಲಕ್ಷಿಸಿ, ತನ್ನ ಮತಾಚರಣೆಯನ್ನು ಹೊಸ ಮನ್ವಂತರಕ್ಕನುಗುಣವಾಗಿ ಮಾರ್ಪಡಿಸದಿದ್ದರೆ ಆ ಜನಾಂಗವು ಕಾಲಚಕ್ರದಲ್ಲಿ ಸಿಕ್ಕು, ನುಗ್ಗೆದ್ದು ನಾಮ ಶೇಷವಾಗಿ ಹೋಗುವದು. ಗ್ರೀಸ, ರೋಮ, ಮೀಸರ, ಪರ್ಶಿಯಾ ಇತ್ಯಾದಿ ದೇಶಗಳ ಪ್ರಾಚೀನ ಇತಿಹಾಸವೇ ಇದಕ್ಕೆ ಬಲವಾದ ಸಾಕ್ಷಿಯಾಗಿದೆ. ಅಲ್ಲಿಯ ತತ್ವಜ್ಞಾನಿಗಳು ಕಾಲಕಾಲಕ್ಕೆ ಮಾಡಿದ ಉಪದೇಶದ ಮಹತ್ವವನ್ನು ತಿಳಿದು ಕೊಳ್ಳದೆ ಮಹಾ ಪರಾಕ್ರಮಿಗಳಾದ ಆ ರಾಷ್ಟ್ರಗಳು ಹೀನತರಗತಿಯ ಧಾರ್ಮಿಕ ವಿಧಿಯ ಸ್ವೀಕಾರ ಮಾಡಿ, ಕೊನೆಗೆ ಹೇಳಹೆಸರಿಲ್ಲದಂತೆ ನಾಶವಾಗಿ ಹೋದವು. ಜಗತ್ತಿನಲ್ಲಿಯ ಹಿಂದು ಹಾಗು ಯಹುದಿ ಇವೆರಡೇ ಪ್ರಾಚೀನ ಜನಾಂಗಗಳು ಸದ್ಯಕ್ಕೆ ಅಸ್ತಿತ್ವದಲ್ಲುಳಿದಿವೆ.

ಹಿಂದು ರಾಷ್ಟ್ರವು ಯಾವಾಗಲೂ ಬದಲಾದಂಥ ಆಧ್ಯಾತ್ಮಿಕ ಪರಿಸ್ಥಿತಿಗೆ ಅನುಸರಿಸಿ ತನ್ನ ವಿಚಾರ-ಆಚಾರಗಳನ್ನು ಮಾರ್ಪಡಿಸಿಕೊಂಡಿದೆ. ಈಗಲಾವರೂ ಅದು ಅದೇ ಕ್ರಮ ನಡಿಸಿದೆ. ನಾವು ಹೀಗೆ ಮಾಡಿದ್ದರಿಂದಲೇ ನಮ್ಮ ಧರ್ಮ-ಸಂಸ್ಕೃತಿಗಳು ಇಂದಿಗೆ ಸಜೀವವಾಗಿ ಉಳಿದಿವೆ. ವೇದ ಕಾಲದಲ್ಲಿ ನಮ್ಮ ದೇಶದೊಳಗೆ ಅನೇಕ ದೈವತಗಳ ಉಪಾಸನೆ ರೂಢವಾಗಿತ್ತು. ಆದರೆ ಮುಂದೆ ಉಪನಿಷತ್ ಕಾಲದಲ್ಲಿ ಏಕ ದೈವತದ ಸಿದ್ಧಾಂತ ಸ್ಥಾಪನೆಯಾಗಿ, ಪರಮೇಶ್ವರನ

ದಿವ ಸ್ವರೂಪವು ಜ್ಞಾನಿಗಳಾದ ಋಷಿಗಳಿಗೆ ಗೋಚರವಾಯಿತು. ಸತ್ಯ ಜ್ಞಾನದ ಮಹತ್ವವು ತಿಳಿದೊಡನೆಯೇ ಸಕಲ ಸಮಾಜವು ಜಾಗ್ರತವಾಯಿತು. ಮುಂದೆ ಜ್ಞಾನವು ಶುಷ್ಕವೆನಿಸಿದ್ದರಿಂದ ಶ್ರೀಕೃಷ್ಣನು ಅದಕ್ಕೆ ಭಕ್ತಿಯ ಜೋಡಣೆ ಮಾಡಿದೊಡನೆಯೇ ಅದರ ಅವಲಂಬನ ಮಾಡಲು ಹಿಂದು ರಾಷ್ಟ್ರವು ಸನ್ನದ್ಧವಾಯಿತು, ಪುನಃ ಚಕ್ರನೇಮಿಕ್ರಮ ನಿಯಮಾನುಸಾರವಾಗಿ ನಮ್ಮ ರಾಷ್ಟ್ರವು ಅನೇಕ ವಿಪತ್ತುಗಳಿಂದ ಗ್ರಸ್ತವಾದುದರಿಂದ ಜ್ಞಾನಾಭಿವೃದ್ಧಿಯ ಅಭಾವವಾಗಿ, ಅದು ವೇದಾಂತದ ಅತಿರೇಕ, ಅವತಾರದ ಅತಿವ್ಯಾಪ್ತಿ, ದೈವವಾದ, ಜಾತಿಭೂತದ ಉಚ್ಚ ನೀಚ ಭಾವನೆ, ಕಲಿಮಾಹಾತ್ಮ್ಯದ ಕಲ್ಪನೆ ಕೂಪಮಂಡೂಕವೃತ್ತಿ, ತಾರತಮ್ಯವಿಲ್ಲದ ಅಹಿಂಸಾವಾದ ಮೊದಲಾದ ದೋಷಯುಕ್ತವಾದ ಧಾರ್ಮಿಕ ವಿಧಿಗಳ ಚಕ್ರದಲ್ಲಿ ಸಿಕ್ಕು ನುಗ್ಗುನುಗ್ಗಾಗಿದೆ. ಇತ್ತಿತ್ತಲಾಗಿ ನಮ್ಮ ದೇಶದಲ್ಲಿ ಪುನಃ ವಿಚಾರಕ್ರಾಂತಿಯಾಗುತ್ತ ನಡೆದಿದ್ದು, ಉಚ್ಚತರವಾದ ಧರ್ಮ-ನೀತಿ ತತ್ವಗಳು ಉದಿತವಾಗಹತ್ತಿವೆ. ಪೂರ್ವ ಕಾಲದ ಋಷಿಗಳೂ ಅರ್ವಾಚೀನ ಕಾಲದ ಸಾಧುಗಳೂ ಪ್ರವರ್ತಿಸಿದ ಉದಾತ್ತವಾದ ಜ್ಞಾನಮಾರ್ಗವನ್ನು ಸಕಲರೂ ಅವಲಂಬಿಸಹತ್ತಿರುವರು. ಇದು ಒಳ್ಳೇ ಶುಭ ಚಿಹ್ನವೇ ಸರಿ!

ಒಟ್ಟಿನ ಮೇಲೆ ಹೇಳತಕ್ಕದ್ದೇನಂದರೆ, ನಮ್ಮ ದೇಶದ ವಾತಾವರಣವು ಜಗತ್ತಿನ ಪರಿಸ್ಥಿತಿಗನುಸರಿಸಿ ಸದ್ಯಕ್ಕೆ ಬದಲಾಗಿದ್ದು, ಇಂಥ ಸುಸಮಯದಲ್ಲಿ ನಾವು ನಮ್ಮಲ್ಲಿ ನೆಲೆಗೊಂಡ ರಾಷ್ಟ್ರೀಯ ದೋಷಗಳನ್ನು ವಿಸರ್ಜಿಸಿ, ನಮ್ಮ ಧರ್ಮ-ದೇಶ-ಭಾಷೆ ಸಂಸ್ಕೃತಿಗಳನ್ನು ಪುನರುಜ್ಜೀವನಗೊಳಿಸಿ, ಸ್ವರಾಜ್ಯವನ್ನು ಸಂಪಾದಿಸಿ, ಶುದ್ಧವೂ, ಸಾತ್ವಿಕವೂ, ಶಾಶ್ವತವೂ ಆದ ಸುಖದ ಲಾಭವನ್ನು ದೊರಕಿಸಿ, ಧನ್ಯರಾಗುವಂತೆ ಜ್ಞಾನದ ದಿವ್ಯ ತೇಜವನ್ನು ನಮ್ಮ ರಾಷ್ಟ್ರಕ್ಕೆ ದಯಪಾಲಿಸಬೇಕೆಂದು ವಿಘ್ನಹರ್ತನಾದ ಶ್ರೀಗಣೇಶನನ್ನು ಪ್ರಾರ್ಥಿಸಿ, ದೇಶೋನ್ನತಿಯ ಕಾರ್ಯದಲ್ಲಿ ಸಕಲ ಹಿಂದುಗಳು ಮುಂದಡಿಯನ್ನಿಟ್ಟು ದುಡಿಯಲು ಪ್ರಾರಂಭಿಸಿದರೆ ಮಾತ್ರ ಗಣೇಶೋತ್ಸವದ ನಿಜವಾದ ಶ್ರೇಯಸ್ಸು ಸಂಪಾದಿಸಿದಂತಾಗುವದು.

ॐ सह नाववतु । सह नौ भुनक्तु । सह वीर्यं करवावहै ॥
तेजस्विनावधीतमस्तु मा विद्विषावहै ॥
ॐ शांतिः शांतिः शांतिः ॥ — कठोपनिषत् ।

ಅರ್ಥ:-ನಾವು ಸಕಲರೂ ಏಕತ್ರ ಇರಬೇಕು, ಏಕತ್ರ ಸೇವನ ಮಾಡಬೇಕು, ಏಕತ್ರ ಸಾಮರ್ಥ್ಯ ಸಂಪಾದಿಸಬೇಕು, ನಮ್ಮ ಅಧ್ಯಯನವು ನಮ್ಮನ್ನು ತೇಜಸ್ವಿಗಳನ್ನಾಗಿ ಮಾಡುವದಿರಬೇಕು, ನಮ್ಮಿಂದ ಪರಸ್ಪರರಲ್ಲಿ ದ್ವೇಷವೊದಗಬಾರದು.

ಶ್ರೀ ಮಂಗಲ ಮೂರ್ತಿ ಮೋರಯಾ! ಮೋರಯಾ!!

ಪ್ರಕಟಣೆ

ಉರ್ದು ಸ್ಕೂಲ ಬುಕ್ ಕಮೀಟಿ ಮುಂಬಯಿ ಇವರು ತಾರೀಖು ೨೪-೬-೧೯೩೯ನೆಯ ದಿವಸ ಕೂಡಿದ ಮೀಟಿಂಗದಲ್ಲಿ ಮುಂಬಯಿ ಇಲಾಖೆಯೊಳಗಿನ ಉರ್ದು ಶಾಲೆಗಳಲ್ಲಿ ಉಪಯೋಗಿಸುವ ಸಲುವಾಗಿ ಮಂಜೂರ ಮಾಡಿದ ಪುಸ್ತಕಗಳು

ಅ. ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ	ಯಾತರ ಸಲುವಾಗಿ ಮಂಜೂರಾಗಿರುವದು.
೧	ಜೋಆರ್ಯಬಿಯೆ ಉಸ್ಮಾನಿಯಾ	ಮುಹಮ್ಮದಜಾಫರ ಹುಸೇನ ಅನಸಾರಿ ಹೈದ್ರಾಬಾದ ಡೆಕ್ಕನ್	,,	೨- ೦-೦	ಪ್ರಾಥಮಿಕ ಶಾಲೆಗಳ ಶಿಕ್ಷಕರ ಲಾಯಬ್ರರಿಗಾಗಿ
೨	ದೇಹಾತಿಯೌಂಕಿ ಅವಕಾತೆ ಪುರಪತ್	ಸೈಯ್ಯದ ಶೌಕತ ಹುಸೇನ	,,	೦- ೨-೦	,,
೩	ಜದೀದ ಇಲ್ಮುಸ್ಸೆಹತ್	ಮುನಸೀ ಅಬ್ದುಲ್‌ರಹಮನ ಅಹಮ್ಮದಸಾಹೇಬ	ದಿವಾನ ಪ್ರಿಂಟಿಂಗ ಪ್ರೇಸ ಲಾಹೋರ	೦-೧೦-೦	,,
೪-೫-೬-೭	ಉರ್ದು ಫೂಲಮಾಲಾ		ಇಂಡಿಯನ್ ಪ್ರೇಸ		ಪ್ರಾಥಮಿಕ ಶಾಲೆಗಳ ಪಠ್ಯ
	,, ಭಾಗ ೧ (೧೯೩೮)	,,	ಲಿಮಿಟೆಡ್ ಅಲಹಾಬಾದ	೦- ೪-೬	ಪುಸ್ತಕವೆಂದು
	,, ಭಾಗ ೨ (೧೯೩೮)	,,	,,	೦- ೫-೬	,,
	,, ಭಾಗ ೩ (೧೯೩೮)	,,	,,	೦- ೬-೬	,,
	,, ಭಾಗ ೪ (೧೯೩೮)	,,	,,	೦- ೬-೯	,,

೭೫ ೧೮೮೮ ೭೬

೬೫

ಆ. ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ	ಯಾತರ ಸಲುವಾಗಿ ಮಂಜೂರಾಗಿರುವದು
೯–೯–೧೦–೧೧	ಗುಲಿಸ್ತಾನೆ ಅದಬ್ ಭಾಗ ೧	,,	,,	೦– ೮–೦	ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳ ಪಠ್ಯಪುಸ್ತಕ
	,, ಭಾಗ ೨	,,	,,	೦– ೮–೦	,,
	,, ಭಾಗ ೩	,,	,,	೦–೧೦–೦	,,
	,, ಭಾಗ ೪	,,	,,	೦–೧೦–೦	,,
೧೩–೧೩–೧೪–೧೫	ಶಿಗೂಫಯೆ ಅದಬ್ ಭಾಗ ೧ (೧೯೩೩)	,,	,,	೦– ೬–೦	ಪ್ರಾ. ಶಾಲೆಗಳ ವಿದ್ಯಾರ್ಥಿಗಳ ಲಾಯಬ್ರರಿಗಾಗಿ
	,, ಭಾಗ ೨ (೧೯೩೨)	,,	,,	೦– ೫–೦	,,
	,, ಭಾಗ ೩ (೧೯೩೩)	,,	,,	೦– ೫–೦	,,
	,, ಭಾಗ ೪ (೧೯೩೪)	,,	,,	೦– ೯–೦	,,
೧೬–೧೭–೧೮–೧೯	ಆಸಾನ ಉರ್ದು ಪಾರ್ಟ ಭಾಗ ೧ (೧೯೩೮)	,,	,,	೦– ೩–೬	,,
	,, ೨ (೧೯೩೮)	,,	,,	೦– ೪–೬	,,

	,, ೩ (೧೯೩೮)	,,	,,	೦— ೬—೦	,,	
	,, ೪ (೧೯೩೮)	,,	,,	೦— ೬—೦	,,	
೨೦	ಗುಂಚಯೇ ಅದಬ	ಮೌಲ್ವೀ ನ್ಯೆಮೂರ್ ರಹಿಮಾನ	,,	೦— ೬—೦	ವಿದ್ಯಾರ್ಥಿಗಳ ಲಾಯಬ್ರರಿ.	
೨೧	ಗುಲಜಾರೆ ಉರ್ದು	ಸೈಯ್ಯದ ಮಹಮ್ಮದ ಅಹಮ್ಮದ ಮತ್ತು ಮೌಲ್ವೀ ಶಮಸುದ್ದೀನ	,,	೦— ೬—೦	,,	
೨೨	ತೋಫಯೆ ಚೀನ	ಮೌಲಾನಾ ಅಸಗರ ಹುಸೇನ	,,	೦— ೬—೦	,,	
೨೩	ತೋಫಯೆ ರೂಸ	,,	,,	೦— ೬—೦	,,	
೨೪	ತೋಫಯೆ ಅಮೇರಿಕಾ	,,	,,	೦— ೬—೦	,,	
೨೫	ತೋಫಯೆ ಲಂಡನ್	,,	,,	೦— ೬—೦	,,	
೨೬	ಅಳೂತಿ ಕಹಾನಿಯಾ	,,	,,	೦— ೬—೦	,,	
೨೭	ಅನವಾರಯೆ ಹಯಾತ	,,	,,	೦— ೬—೦	,,	
೨೮—೩೧	ಸಚ್ಚೀ ಕಹಾನಿಯಾ ಒಂದರಿಂದ ನಾಲ್ಕು ಭಾಗ	,,	,,	ಪ್ರ. ಭಾ. ೦— ೮—೦	,,	
೩೨	ಚಂದೂಕಿ ಬಿಲ್ಲೀ	ಸನತ್‌ರಾಮು ಬಿ. ಏ.	ಅಕಬರ ಈ ತಾಲೀಮು ಲಾಹೋರ	೦— ೧—೦	,,	

ಅ. ನಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತರ ಸಲುವಾಗಿ ಮಂಜೂರಾಗಿರುವದು
೩೩	ಮನಸೂಬೀ ತರೀಖಯೆ ತಾಲೀಮು (ಯೋಜನಾ ಪದ್ಧತಿ)	ಅಮರುದ್ದೀನ ಅಹಮ್ಮದ	,,	೦– ೨–೦	ಶಿಕ್ಷಕರಲಾಯಬ್ರರಿಗಾಗಿ
೩೪	ಶೀರೋನಕೀ ಕಹಾನೀಯಾ	ಪೀರಗುಲಾಮು ದಸ್ತಗೀರ ನಾಮಿ	,,	೦– ೨–೦	ವಿದ್ಯಾರ್ಥಿಗಳ ಲಾಯಬ್ರರಿಗೆ
೩೫	ಶಿಯಾಹತೆ ಕಾಶ್ಮೀರ	,,	,,	೦– ೬–೦	ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಲಾಯಬ್ರರಿಗಾಗಿ
೩೬–೩೯	ನೀಯರೇ ಆದಬ್ ಭಾಗ ೧ ರಿಂದ ೪, ೧ನೆ ಆವೃತ್ತಿ	ಕಾಝೀ ಖುರ್ಸಿದಅಹಮ್ಮದ ಸಾ| ಮತ್ತು ಮೌಲ್ವಿಸೈಯ್ಯದ ಹಮೀದಲಿ	ಇಂಡಿಯನ ಪ್ರೆಸ್ ಲಿಮಿಟೆಡ್ ಅಲಾಹಾಬಾದ	೧ನೆ. ಭಾ. ೦– ೪–೦ ೨ನೆ. ಭಾ. ೦– ೪–೦ ೩ನೆ. ಭಾ. ೦–೧೦–೦ ೪ನೆ. ಭಾ. ೦–೧೦–೦	ವಿದ್ಯಾರ್ಥಿಗಳ ಲಾಯಬ್ರರಿಗಾಗಿ
೪೦	ಜದೀದ ಜೊಗರಾಫಿಯಾ ಬಾಂಬೈ ತಿದ್ದಿದ ಆವೃತ್ತಿ ೧೯೩೯	ಸೈಯ್ಯದ ಶಹಾಬುದ್ದೀನ ದಸ್ನಾಮಿ	ಇಲ್ಮಿಯಾ ಬುಕ್‌ಡಿಪೋ ಬಾಂಬೇ ನಂ. ೩	೦– ೬–೦	ಪ್ರಾಥಮಿಕ ಶಾಲೆಗಳಿಗೆ ಪಠ್ಯ ಪುಸ್ತಕ

ಉರ್ದು ಸ್ಕೂಲ ಬುಕ್ ಕಮಿಟಿ ಮುಂಬಯಿ ಇವರು ತಾರೀಖು ೧೪-೧೦-೧೯೩೯ ನೆಯ ದಿವಸ ಕೂಡಿದ ಮೀಟಿಂಗಿನಲ್ಲಿ ಮುಂಬಯಿ ಇಲಾಖೆಯೊಳಗಿನ ಉರ್ದು ಶಾಲೆಗಳಲ್ಲಿ ಉಪಯೋಗಿಸುವ ಸಲುವಾಗಿ ಮಂಜೂರ ಮಾಡಿದ ಪುಸ್ತಕಗಳು

ಅ. ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ	ಯಾತರ ಸಲುವಾಗಿ ಮಂಜೂರಾಗಿರುವದು.
೧ ಮತ್ತು ೨	ತಾರೀಖಯೆ ಸಾದಾತ್ ಭಾಗ ೧-೨ ಆವೃತ್ತಿ ೧೯೩೭ ಗೋಲ್ಡಯುತ್ಸ ನೋಬಲ ಪಾಥ್ ಭಾಗ ೧-೨	ಮೌಲಾವಿ ಸಯ್ಯದ ಜಾಮೀನ ಕಿಂತೋರಿ	ಲಾಂಗ್ಮನ್ ಗ್ರೀನ ಮತ್ತು ಕಂಪನಿ ನಿಕೆಲ್‌ರೋಡ ಮುಂಬಯಿ	ಪ್ರತಿಯೊಂದು ಭಾಗಕ್ಕೆ ೦- ೮-೦	ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳ ಲಾಯಬ್ರರಿಗಾಗಿ
೩	ಇಲ್ಮೆ ಅಫಾಲುಲ್, ಅ ಅಜಾ ಶರೀರ ರಚನಾಶಾಸ್ತ್ರ ೧ನೆಯ ಆವೃತ್ತಿ ೧೯೩೭	ಭಾಟಯಾ ಮತ್ತು ನೂರಿ	,,	೧-೧೨-೦	ಪ್ರಾ. ಶಾ. ಟ್ರೇನಿಂಗ ಸಂಸ್ಥೆಯ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಲಾಯಬ್ರರಿಗಾಗಿ
೪	ಇಲಾಯೆ ಹಿಫ್ಜಾನ್ನೆಹತ್ ಆರೋಗ್ಯಶಾಸ್ತ್ರದ ಆರಂಭದ ಪಾಠಗಳು ೧ನೇ ಆ. ೧೯೩೭	,,	,,	೧- ೮-೦	,,
೫	ತರೀಖಯೆ ಇಂಗ್ಲೀಷಸ್ತಾನ್ ಆ. ೧೯೩೫	ಲೇಖಕ:-ಟೀ. ಎಫ್. ಟೌಟ, ಭಾಷಾಂತರಕಾರ ಮಹಮ್ಮದ ಶಫೀ ಇತಿಹಾಸದ ಸೀನೀಯರ ಪ್ರೋ. ಇಸ್ಲಾಮಿಯಾ ಕಾಲೇಜ ಪೇಶಾವರ	,,	೧- ೮-೦	ಮಾಧ್ಯಮಿಕ ಶಾಲೆಗಳಿಗೆ ಪಠ್ಯಪುಸ್ತಕ ಹಾಗೂ ಟ್ರೇನಿಂಗ ಸಂಸ್ಥೆಗಳ ಶಿಕ್ಷಕರ ವಾಚನಾಲಯಗಳಿಗೆ

ಅ. ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ	ಯಾತರ ಸಲುವಾಗಿ ಮಂಜೂರಾಗಿರುವದು.
೬	ಶಹರಾಬ್ (೧೯೬. ಅ. ೧೯೩೯)	ಅಬ್ದುಲ್‌ಹಮೀದ ಬುಬೇರಾ ಹೆ| ಮಾ| ಬಿಲ್ಸಸ್ ರೋಡ ಉರ್ದುಬಾಯ್ಜ್ ಸ್ಕೂಲ ನ. ೪ ಮುಂಬಯಿ	ತಾಜಮಹಾಲ ಫಾಯಿನ್ ಆರ್ಟ್ಸ ವರ್ಕ್ಸ ಮುಂಬಯಿ ನಂಬರ ೭	೦– ೩–೦	ಪ್ರಾ.ಶಾಲೆಗಳ ವಿದ್ಯಾರ್ಥಿಗಳ ಲಾಯಬ್ರರಿಗಾಗಿ
೭	ಇಸ್ಲಾಹೆ ಮಕಾಲೇಮಾ (೧೯೩ ಅ. ೧೯೩೯)	ಮಲಿಕ ಗುಲಾಮಗೌಸ ಆವಾನ್	ತಾಲೀಮ ಎಜನ್ಸಿ ಲಾಹೋರ	೦– ೩–೦	ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಲಾಯಬ್ರರಿಗಾಗಿ
೮	ತರೀಖಯೆ ಹಿಂದ (೧೯೩೭ರ ಅವೃತ್ತಿ)	ಲೇ. ಡಾ. ಶಫತ ಅಹಮ್ಮದ ಖಾನ ಮತ್ತು ಭಾಷಾಂತರ ಕಾರ ಸೈಯ್ಯದ ಅಬೀದ ಹುಸೇನ ಪೀ. ಎಚ್. ಡಿ.	ಲಾಂಗ್ಮನ್ ಗ್ರೀನ ಮತ್ತು ಕಂಪನಿ ಮುಂಬಯಿ	೨– ೦–೦	ಪಠ್ಯಪುಸ್ತಕ ಮಾಧ್ಯಮಿಕ ಶಾಲೆ ಹಾಗೂ ಟ್ರೇನಿಂಗ ಸಂಸ್ಥೆಗಳಿಗಾಗಿ
೯	ಶಕುಂತಲಾ	ಶೇಖ ಅಬ್ದುಲ್ ಹಮೀದ ಎಮ್. ಏ. ಮತ್ತು ಮೌಲವಿ ಮಹಮ್ಮದ ಉದ್ದೀನ ಬಿ.ಏ.	ಪ್ಯಾಕ್ಮೆಲನ ಮತ್ತು ಕಂಪನಿ ಮುಂಬಯಿ	೦– ೨–೦	ಪ್ರಾ ಶಾ. ಗಳ ವಿದ್ಯಾರ್ಥಿಗಳ ಲಾಯಬ್ರರಿ
೧೦	ಸಚ್ಚಾಯೆ ಸ್ಥಾನ್	,,	,,	೦– ೩–೬	,,
೧೧	ಏಕ ಹಜಾರ ಚವನ್ನಿಯಾ	,,	,,	೦– ೧–೬	,,
೧೨	ಆಖರೀ ನೇಕೀ	,,	,,	೦–೨–೩	,,

೧೩	ಮೀಯಾನೆ ಮುಶಕ್ಕತ್	,,	,,	೦– ೨–೦	,,
೧೪	ಜಹರಕಾ ಪ್ಯಾಲಾ	,,	,,	೦ – ೬–೬	,,
೧೫	ಕಾಅಬೇಕಾ ಜೀನಾ	,,	,,	೦– ೨–೬	,,
೧೬	ಸಚ್ಚಾ ಜಾತ್ರಿ	,,	,,	೦– ೩–೦	,,
೧೭	ಹಕ್ಕ ಬಾ ಹಕ್ಕದಾರ	,,	,,	೦– ೩–೦	,,
೧೮	ಷೇರಕಾ ಶಿಕಾರ	,,	,,	೦– ೨–೦	,,
೧೯	ಢಲ್ತೀ ಫಿರತೀ ಛಾನ್	,,	,,	೦– ೨–೦	,,
೨೦	ತೀನ ಸವಾಲ್	,,	,,	೦– ೨–೦	,,
೨೧	ಹಿಂದುಸ್ಥಾನ ರೀಡರ ೧ನೇ ಆ. ೧೯೨೯ ೬ನೇ ಭಾಗ	,,	,,	೦– ೩–೬	,,
೨೨	ಹಿಂದುಸ್ಥಾನ ರೀಡರ ೩ನೇ ಭಾಗ (೧ನೇ ಆ. ೧೯೨೯)	,,	,,	೦– ೬–೬	,,
೨೩	ಹಿಂದುಸ್ಥಾನ ರೀಡರ ೪ನೆಯ ಭಾಗ (೧ನೆ ಆ. ೧೯೨೯)	,,	,,	೦– ೩–೬	,,
೨೪	ಕಹಾನಿಯೋಕೀ ದುಸರೀ ಕೆತಾಬ	,,	,,	೦– ೫–೦	ಪ್ರಾ. ಶಾ. ವಿದ್ಯಾರ್ಥಿಗಳ ಹಾಗೂ ಶಿ. ಲಾಯಬ್ರರಿಗಾಗಿ
೨೫	ಕಹಾನಿಯೋಕೀ ತಿಸರೀ ಕೆತಾಬ	,,	,,	೦– ೫–೬	

ಅ. ನಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತರ ಸಲುವಾಗಿ ಮಂಜೂರಾಗಿರುವದು
೨೬	ಕಹಾನಿಯೋಕೀ ಚವಥೀ ಕೆತಾಬ	,,	,,	೦- ೯-೦	ಪ್ರಾ ಶಾ. ವಿದ್ಯಾರ್ಥಿಗಳ ಹಾಗೂ ಶಿ. ಲಾಯಬ್ರರಿಗಾಗಿ
೨೭	ಕಹಾನಿಯೋಕೀ ಪಾಂಚವೀ ಕೆತಾಬ	,,	,,	೦— ೬—೦	,,
೨೮	ಜದೀದ ಜೊಗರಾಫಿಯಾ ಭಾಗ ೨ (೨ನೆ. ಆ. ೧೯೩೭)	ಗುಲಾಬಚಂದ ಶಕ್ಕದ ಬೀ. ಏ. ಅಲಹಾಬಾದ	ನ್ಯಾಶನಲ್ ಪ್ರೆಸ್ ಅಲಾಹಾಬಾದ	೦—೧೦—೦	ಪ್ರಾ. ಶಾಲೆಗಳ ಮೇಲಿನ ಇಯತ್ತೆಗಳಿಗಾಗಿ ಪಠ್ಯ ಪುಸ್ತಕ ಹಾಗೂ ಮಾ. ಶಾಲೆಗಳಿಗೆ ಪಠ್ಯಪುಸ್ತಕ
೨೯	ಜದೀದ ಜೊಗರಾಫಿಯಾ ಭಾಗ ೩ (೧ನೆ. ಆ. ೧೯೩೭)	,,	,,	೦- ೯—೦	
೩೦	ಜದೀದ ಜೊಗರಾಫಿಯಾ ಭಾಗ ೪ (೧ನೆ. ಆ. ೧೯೩೭)	,,	,,	೧— ೦—೦	

ರಾಮಾಶ್ರಯ ಬುಕ್‌ಡಿಪೊ ಧಾರವಾಡ ಇವರಿಂದ ಪ್ರಕಟಿಸಲ್ಪಟ್ಟ ಹೊಸ ಪುಸ್ತಕಗಳು

೧. **೨ನೇ ಇಯತ್ತೆಯ ಅಂಕಗಣಿತ:—** ಎಂ. ನಿಂಬಾಳಕರ ಇವರು ಹೊಸ ಇಯತ್ತಾ ಪತ್ರಿಕೆಯಂತೆ ಈ ಪುಸ್ತಕವನ್ನು ಬರೆದಿದ್ದು ಇದರಲ್ಲಿ ಪ್ರತಿಯೊಂದು ಮೆಟ್ಟು ಬಹಳ ಸುಲಭವಾಗಿಯೂ ಆಕೃತಿಗಳಿಂದಲೂ ವಿವರಿಸಲ್ಪಟ್ಟಿದೆ. ೨ನೇ ಇಯತ್ತೆಯ ಡ್ರಾಯಿಂಗ ಹಾಗೂ ಭೂಮಿತಿಯ ಆಕೃತಿಗಳೂ ಇದರಲ್ಲಿ ಕೊಡಲ್ಪಟ್ಟಿರುತ್ತವೆ. ಪುಸ್ತಕದ ಯೋಗ್ಯತೆಯ ಬಗ್ಗೆ ಅನೇಕ ಅನುಭವಿಕ ಶಿಕ್ಷಕರು ತಮ್ಮ ಉತ್ತಮ ಅಭಿಪ್ರಾಯಪಟ್ಟಿರುತ್ತಾರೆ.

ಬೆಲೆ ಬಹಳ ಸ್ವಲ್ಪು **೪ ಆಣೆಗಳು ಮಾತ್ರ,**

ಪ್ರಶ್ನೋತ್ತರ ಸುಲಭ ಭೂಗೋಲ:— ಕನ್ನಡದಲ್ಲಿದ್ದ ಭೂಗೋಲ ಪುಸ್ತಕಗಳು ಸದ್ಯದ ಪರೀಕ್ಷೆಯ ಪ್ರಶ್ನೆಗಳಿಗೆ ಉತ್ತರವನ್ನೀಯಲು ತಕ್ಕವು ಇರುವದಿಲ್ಲ. ಇದು, ಎಲ್ಲ ಶಿಕ್ಷಕರ ಅನುಭವಕ್ಕೆ ಬಂದಿರುತ್ತದೆ. ಹೀಗಾಗಿ ಮುಲ್ಕಿಪರೀಕ್ಷೆಯಲ್ಲಾಗಲಿ, ಹೈಸ್ಕೂಲ್ ಸ್ಕಾಲರ್‌ಶಿಪ್ ಪರೀಕ್ಷೆಯಲ್ಲಾಗಲಿ, ಭೂಗೋಲ ವಿಷಯದಲ್ಲಿ ನಾಪಾಸಾಗುವ ವಿದ್ಯಾರ್ಥಿಗಳೇ ಹೆಚ್ಚು. ಕಾರಣ ನಾವು ತಜ್ಞರ ಕಡೆಯಿಂದ ಆಧುನಿಕ ಪರೀಕ್ಷೆಗಳಿಗೆ ಯೋಗ್ಯ ಉತ್ತರವನ್ನೀಯಬಹುದಾದ ಈ ಪುಸ್ತಕವನ್ನು ಬರೆಯಿಸಿರುತ್ತೇವೆ. ಇದರಲ್ಲಿ ಅನೇಕ ಉಪಯುಕ್ತ ವಿಷಯುಗಳು ಕೊಡಲ್ಪಟ್ಟಿರುತ್ತವೆ. ಇದರ ಲಾಭವನ್ನು ಸರ್ವ ವಿದ್ಯಾರ್ಥಿಗಳೂ ಶಿಕ್ಷಕರೂ ಪಡೆಯಲೆಂಬದೇ ನಮ್ಮ ಅಭಿಲಾಷೆ. ಬೆಲೆ ೪ ಆಣೆಗಳು ಮಾತ್ರ.

ಇದಲ್ಲದೆ ಎಂ. ನಿಂಬಾಳಕರ ಇವರಿಂದ ತಯಾರಿಸಲ್ಪಟ್ಟ ಯಾವತ್ತೂ ಬಾಹ್ಯರೇಷೆಯ ನಕಾಶ ಪುಸ್ತಕ ಮೊದಲಾದವುಗಳು ನಮ್ಮಲ್ಲಿ ದೊರೆಯುತ್ತವೆ. ಕ್ರಯದಪಟ್ಟಿಗಾಗಿ ಇಂದೇ ಬರೆಯಿರಿ.

೨. ಸರಕಾರದವರು ಪ್ರತಿಯೊಂದು ಶಾಲೆಯಲ್ಲಿ ಪ್ರೊಗ್ರೆಸ್ ರಿಕಾರ್ಡು ಇಡಬೇಕೆಂದು ಪ್ರಸಿದ್ಧಿಸಿದಂತೆ ನಾವು ಪ್ರೊಗ್ರೆಸ್ ರಿಕಾರ್ಡು ಫಾರ್ಮುಗಳನ್ನು ಛಾಪಿಸಿ ತಯಾರಿಸಿ ಇಟ್ಟಿದ್ದೇವೆ. ಒಂದು ರೂಪಾಯಕ್ಕೆ ಒಂದುನೂರದಂತೆ ಕೊಡುವ ಏರ್ಪಾಡು ಮಾಡಿದ್ದೇವೆ.

ರಾಮಾಶ್ರಯ ಬುಕ್‌ಡಿಪೋ,
ಮಾರ್ಕೆಟ್ ಧಾರವಾಡ.

Reg. No. B. 3691

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರ್ಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು ಪ್ರಾ. ಸ್ಕೂ. ಲೀವ್ಹಿಂಗ್ ಸರ್ಟಿಫಿಕೇಟ್ ಪರೀಕ್ಷೆಯ ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ಶಿಕ್ಷಕರೂ ವಿದ್ಯಾರ್ಥಿಗಳೂ ಈ ಮೊದಲೇ ಮನಗಂಡಿದ್ದರು. ಈಗ ಸರಕಾರದವರು ಅದನ್ನು ಪಾಠ ಪುಸ್ತಕ (Text book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠ ಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕಮಿಶನ್ ದೊರೆಯುವದು.

ಹೆಣ್ಣುಮಕ್ಕಳ ಪ್ರಾಯ್ಮರಿ ಸ್ಕೂಲ್ ಲೀವ್ಹಿಂಗ್ ಸರ್ಟಿಫಿಕೇಟ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು.

ಜ ಯ ಂ ತಿ

ಚಿ ತ್ರ ಮ ಯ ಮಾ ಸ ಪ ತ್ರಿ ಕೆ

ಪಂಡಿತ-ಪಾಮರರಿಬ್ಬರ ಮನಸ್ಸನ್ನೂ ಸೆಳೆದುಕೊಂಡ ಕನ್ನಡ ಮಾಸಪತ್ರಿಕೆ ಯಾವುದಾದರೂ ಇದ್ದರೆ ಅದು ಬೇರಾವುದೂ ಅಲ್ಲ.

ಜಯಂತಿಯೊಂದೇ!

ಮುಂಬಯಿ, ಮೈಸೂರು, ಸಾಂಗಲಿ ಸರಕಾರಗಳ ಎಲ್ಲ ವಿದ್ಯಾಶಾಲೆಗಳಿಗೂ ತರಿಸಿಕೊಳ್ಳಬಹುದೆಂದು ಅಲ್ಲಿಯ ಅಧಿಕಾರಿಗಳಿಂದ ಒಪ್ಪಿಗೆ ದೊರೆತಿದೆ.

ವಾರ್ಷಿಕ ಚಂದಾ ೩-೦-೦; ಬಿಡಿಸಂಚಿಕೆ ೦-೪-೦

ಜಯಂತಿ ಕಾರ್ಯಾಲಯ, ಧಾರವಾಡ.

ಫೆಬ್ರುವರಿ ೧೯೪೦ Reg. No B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕರಿಗೂ ಸಮಾದೇಶವಾಗಿವೆ.)

ಕನ್ನಡ
ಪ್ರಾಥಮಿಕ ಶಿಕ್ಷಣ
Kannada Prathamika Shikshana

ಸಂಪಾದಕರು:
ರಾಘವೇಂದ್ರರಾವ ಶೇಷಗಿರಿರಾವ ಮಡಿಮನ್, ಬಿ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧.	ಮೆ॥ ಎಸ್. ಆರ್. ತಾವಡೆ, ಎ. ಇ. ಪ. ಭಾಗ .. ಇವರು ಸಂಗ್ರಹಿಸಿಕೊಟ್ಟ ಲೇಖನಗಳು	೧
೨.	ಸರಕಾರೀ ಶಾರೀರಿಕ ಶಿಕ್ಷಣದ ಪ್ರಥಮ ಶಿಬಿರ, ಧಾರವಾಡ ..	೪
೩.	ಸರಕಾರೀ ಶಾರೀರಿಕ ಶಿಕ್ಷಣದ ಶಿಬಿರದಲ್ಲಿ ಶಿಕ್ಷಣವನ್ನು .. ಪಡೆದವರ ಹೆಸರುಗಳು	೧೦
೪.	ನಮ್ಮ ಮೈಸೂರು ಪ್ರವಾಸ	೧೩
೫.	ಮುಂಬೈ ಸರಕಾರದ ಪ್ರಾಥಮಿಕ ಶಿಕ್ಷಣಸಮಿತಿ	೧೫
೬.	ಗಂಡುಮಕ್ಕಳ ಪ್ರಾಯ್ಮರಿ ಸ್ಕೂ. ಲಿ. ಸ. ಪರೀಕ್ಷೆ ೧೯೪೦ ..	೧೭
೭.	ಪ್ರಾಯ್ಮರಿ ಸ್ಕೂ. ಲಿ. ಸ. ಪರೀಕ್ಷೆಯ ಪರಿಣಾಮ ೧೯೩೯ ..	೨೧

Printed by K. R. Bhise at the Karnatak Printing Works, Dharwar
and Published by R. S. Madiman, B. A., Head Master
Training School, Dharwar at his Office.

ಓದಿರಿ ! ಶ್ವರೆವಾಡಿರಿ !!

ವಾಗ್ವಿಲಾಸ ಬುಕ್‌ಡೀಪೋಕ್ಕೆ ಇಂದೇ ಪತ್ರ ಬರೆಯಿರಿ

ಶಾಸ್ತ್ರೀಯ ಪಾಠಗಳ ಟಿಪ್ಪಣಿಗಳು

ಕನ್ನಡ ೭ನೇ ಇಯತ್ತೆ ಹಾಗು ಮುಲಕಿ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಬಹು ಬೆಲೆಯುಳ್ಳ ಪುಸ್ತಕವಾಗಿದೆ. ಶ್ರೀ. ಆರ್. ಕೆ. ನಾಯಿಕ, ಬಿ. ಎ. ಎಡ್‌ವಿನಿಸ್ಟ್ರೇಟಿವ್ಹ ಆಫೀಸರ ಡಿಸ್ಟ್ರಿಕ್ಟ ಸ್ಕೂಲಬೋರ್ಡ ಧಾರವಾಡ ಇವರು ಶ್ರಮವಹಿಸಿ ಬರೆದ ಪುಸ್ತಕವಿದು. ಬೆಲೆ: ೬ ಆಣೆ ಮಾತ್ರ.

ಸುಲಭ ಬಾಲಬೋಧೆ

ಇದು ಸರಕಾರದಿಂದ ಮಂಜೂರಾಗಿದ್ದು ಎಲ್ಲ ಶಾಲೆಯವರು ಉಪಯೋಗಿಸುತ್ತಿರುವರು. ಶ್ರೀ. ಬಸವಾರ್ಯ ಬೂದಿಹಾಳಮಠ ಸುಪರವಾಯಿಝರರು ಗ್ರಂಥಕರ್ತರು. ೧ ಆ. ೯ ಪೈ.

ಕನ್ನಡಿಗರ ಕಥೆ ಅಥವಾ ಕರ್ನಾಟಕ ಇತಿಹಾಸ

೪ನೆಯ ಇಯತ್ತೆಯ ಕನ್ನಡ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವೆಂದು ಹೆಸರುಪಡೆದದೆ. ಬರೆದವರು ಕ. ರಾ. ಅಡಬಡ್ಡಿ. ಬೆಲೆ: ೬ ಆಣೆ

ವರ್ಷಭವಿಷ್ಯ

(ಶ್ರೀ. ರಾಮಭಟ್ಟ ಕೃತ ಬೆಲೆ: ೬ ಆಣೆ)

ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಪುಸ್ತಕಗಳು, ಕಥೆ ಕಾದಂಬರಿಗಳು, ಪಂಚಾಂಗಗಳು ಮಾರಾಟಕ್ಕೆ ಸಿಗುತ್ತವೆ. ವ್ಯಾಪಾರಸ್ಥರಿಗೆ ಭರಪೂರ ಕವಿಾಶನ್ ಕೊಡುವೆವು. ಸ್ವಲ್ಪದರಲ್ಲಿ ಹೇಳುವದೆಂದರೆ ನಮ್ಮಲ್ಲಿ ಸಿಗದಿರುವ ಪುಸ್ತಕಗಳೇ ಇಲ್ಲ.

ಎ. ಆರ್. ಶಿವನಾಗಪ್ಪ,
ಪ್ರೊಪ್ರಾಯಿಟರ
ವಾಗ್ವಿಲಾಸ ಬುಕ್ ಡೀಪೋ, ಹುಬ್ಬಳ್ಳಿ.

ಪ್ರಾಥಮಿಕ ಶಿಕ್ಷಣ

ಸಂಪಾದಕರು :
ರಾಘವೇಂದ್ರರಾವ ಶೇಷಗಿರಿರಾವ ಮುಡಿಮುನ್, ಬಿ.ಏ ,

ಸಂಪುಟ ೭೮	ಫೆಬ್ರುವರಿ ೧೯೪೦	ವರ್ಷ ೧೧. ಸಂ. ೧೧

ಮೆ|| ಎಸ್. ಆರ್. ತಾವಡೆ,
ಎಜ್ಯುಕೇಶನಲ್ ಇನಸ್ಪೆಕ್ಟರ್ ದ. ಭಾ.
ಇವರು ಸಂಗ್ರಹಿಸಿಕೊಟ್ಟ ಲೇಖನಗಳು

೧. ಕ್ಯಾಲೆಂಡರು ಅಥವಾ ಕಾಲಗಣನೆಯ ಕ್ರಮ.

ಇಂಗ್ಲಿಷು ಪದ್ಧತಿಯ ಕ್ಯಾಲೆಂಡರುಗಳು ಈಗ ಬಹುಶಃ ಪ್ರಪಂಚದ ಬಹುಭಾಗದಲ್ಲಿ ಪ್ರಚಾರದಲ್ಲಿವೆ. ಈ ಕ್ಯಾಲೆಂಡರುಗಳಲ್ಲಿ ಒಂದು ವರ್ಷದಲ್ಲಿ ೧೨ ತಿಂಗಳುಗಳಿದ್ದು ಒಟ್ಟಿಗೆ ೩೬೫ ದಿವಸಗಳಾಗುವವು. ಈ ಸ್ಥಿತಿಯು ಅದಕ್ಕೆ ಒಮ್ಮೆಲೆ ಬರಲಿಲ್ಲ. ಈಗಿನ ಹನ್ನೆರಡನೆಯ ತಿಂಗಳಾದ ಡಿಸೆಂಬರವು ಹತ್ತನೆಯ ತಿಂಗಳಾಗಿತ್ತು; ಎಂದರೆ ಕೆಲಕಾಲ ಈ ಕ್ಯಾಲೆಂಡರುಗಳಲ್ಲಿ ಹತ್ತೇ ತಿಂಗಳು ಗಳಿರುತ್ತಿದ್ದವೆಂದು ಕಾಣುವದು. ಸಪ್ಟಂಬರ್, ಅಕ್ಟೋಬರ್ ನೊವ್ಹೆಂಬರ್ ಇವು ಏಳು, ಎಂಟು, ಒಂಭತ್ತನೆಯ ತಿಂಗಳುಗಳ ಹೆಸರುಗಳು. ಸಪ್ತಮ, ಅಷ್ಟಮ, ನವಮ, ದಶಮ ಈ ಸಂಸ್ಕೃತ ಹೆಸರುಗಳಿಗೂ ಇವಕ್ಕೂ ಅಂಶತಃ ಸಾಮ್ಯತೆ ಯಿರುವದನ್ನು ನೋಡಬಹುದು. ಇದು ರೋಮನ್ ಕಾಲಗಣನೆಯ ಅನುಕರಣ ವಾಗಿರುವದು. ಇದು ಮಾರ್ಚ (ಮಾರ್ಟಿ ಅಸ್) ದಿಂದ ಆರಂಭವಾಗಿ ಡಿಸೆಂಬರಕ್ಕೆ ಮುಗಿಯುವದು. ಮುಂದೆ ಇದಕ್ಕೆ ಜನವರಿ ಫೆಬ್ರುವರಿಗಳು ಸೇರಿಸಲ್ಪಟ್ಟವು.

ಕ್ಯಾಲೆಂಡರುಗಳ ರಚನೆಯಲ್ಲಿ ಹಲವು ತೊಂದರೆಗಳಿದ್ದರೂ ಮುಖ್ಯವಾದ ಕೆಲವನ್ನು ಮಾತ್ರ ಇಲ್ಲಿ ವಿವೇಚಿಸೋಣ. ಪೃಥ್ವಿಯು ಸೂರ್ಯನ ಸುತ್ತಲೂ

ಒಂದು ಪ್ರದಕ್ಷಿಣೆಯನ್ನು ಮುಗಿಸಲಿಕ್ಕೆ ಬೇಕಾಗುವ ಅವಧಿಯು ಒಂದು ಸೌರ ವರ್ಷವೆನಿಸುವದು. ಈ ಅವಧಿಯು ನಿಜವಾಗಿ ೩೬೫ ದಿವಸ ೫ ತಾಸು ೪೮ ನಿನಿಟು ೪೬ ಸೆಕಂಡು ಎಂದು ಗೊತ್ತಾಗಿದೆ. ೩೦ ದಿವಸಗಳ ಒಂದು ತಿಂಗಳ ವನ್ನು, ಅಥವಾ ೩೬೫ ದಿವಸಗಳದೇ ಒಂದು ವರ್ಷವನ್ನು, ಎಣಿಸುತ್ತ ಹೋದರೂ ಸಹ ಕಾಲಾಂತರದಲ್ಲಿ ಈಗ ನಡು ಬೇಸಗೆಯಲ್ಲಿ ಬರುವ ಎಪ್ರಿಲ್ ತಿಂಗಳು ಮಳೆ ಗಾಲದಲ್ಲಿಯೋ ಚಳಿಗಾಲದಲ್ಲಿಯೋ ಬರಬಹುದು. ಮಹಮ್ಮದೀಯರ ಮೊಹರಮ್ಮ ಹಬ್ಬವು ಎಲ್ಲ ಇಂಗ್ಲಿಷು ತಿಂಗಳುಗಳಲ್ಲಿ ಬಂದುಹೋಗುವದನ್ನು ನಾವು ನೋಡು ತ್ತೇವಲ್ಲವೆ?

ಈ ತೆರದ ತೊಂದರೆಯನ್ನು ತಪ್ಪಿಸುವದಕ್ಕಾಗಿ ಕೆಲವು ಕಾಲಾವಧಿಯ ತರುವಾಯ ಕೆಲವು ಹೆಚ್ಚಿನ ದಿನಗಳನ್ನು ಸೇರಿಸಿ ಕ್ಯಾಲೆಂಡರನ್ನು ಸರಿಪಡಿಸಿ ಕೊಳ್ಳುವ ಕ್ರಮವನ್ನು ಮೊದಲು ಇಜಿಪ್ತ್‌ದವರು ಪ್ರಚಾರದಲ್ಲಿ ತಂದರು. ಅವರು ಮೊದಲು ೩೦ ದಿವಸಗಳ ೧೨ ತಿಂಗಳುಗಳಿಗೆ ಒಂದು ವರ್ಷವನ್ನು ಎಣಿಸುತ್ತಿ ದ್ದರು. ಮತ್ತು ಪ್ರತಿ ವರ್ಷದ ಅಂತ್ಯಕ್ಕೆ ೫ ದಿನಗಳನ್ನು ಹೆಚ್ಚಿಗೆ ಸೇರಿಸುತ್ತಿ ದ್ದರು. ಪರ್ಸಿಯನ್ ಜನರು ಇದಕ್ಕೂ ಹೆಚ್ಚು ಸೂಕ್ಷ್ಮವಾಗಿ ಕಾಲಗಣನೆ ಮಾಡುತ್ತಿದ್ದರು. ಅವರು ೩೬೫ ದಿವಸಗಳ ೧೨೦ ವರ್ಷಗಳನ್ನು ಎಣಿಸಿದ ತರು ವಾಯ ಕ್ಯಾಲೆಂಡರನ್ನು ಸರಿಪಡಿಸುವದಕ್ಕಾಗಿ ೩೦ ದಿವಸಗಳನ್ನು ಹೆಚ್ಚಿಗೆ ಕೂಡಿ ಸುತ್ತಿದ್ದರು. ರೋಮನ್ನರು ಕಾಲಗಣನೆಯ ಕ್ರಮದಲ್ಲಿ ೩೦ ಮತ್ತು ೩೧ ದಿವಸ ಗಳ ತಿಂಗಳುಗಳನ್ನು ಒಂದರ ಮುಂದೊಂದರಂತೆ ೧೨ ಎಣಿಸಿದ ತರುವಾಯ ಪ್ರತಿ ಎರಡನೆಯ ವರ್ಷದಲ್ಲಿ ಒಂದು ತಿಂಗಳನ್ನು ಹೆಚ್ಚಿಗೆ ಎಣಿಸುತ್ತಿದ್ದರು. ಅವರು ಪ್ರತಿ ೮೦ ವರ್ಷಕ್ಕೆ ಒಮ್ಮೆ ಈ ಹೆಚ್ಚಿನ ತಿಂಗಳಿನ ಗಣನೆಯನ್ನು ಬಿಟ್ಟುಬಿಡು ತ್ತಿದ್ದರು.

ಇಂಗ್ಲಿಷು ಕ್ಯಾಲೆಂಡರಿನಲ್ಲಿ ಹಿಂದೆ ಮಾರ್ಚ್, ಮೇ, ಜುಲೈ, ಮತ್ತು ಅಕ್ಟೋಬರ ತಿಂಗಳುಗಳಿಗೆ ೩೧ ದಿವಸಗಳೂ ಫೆಬ್ರುವರಿಗೆ ೨೮ ಮತ್ತು ಉಳಿದ ತಿಂಗಳುಗಳಿಗೆ ೩೦ ದಿವಸಗಳೂ ಇರುತ್ತಿದ್ದವು. ಮತ್ತು ಇದನ್ನು ಸೌರವರ್ಷಕ್ಕೆ ಸರಿಪಡಿಸುವದಕ್ಕಾಗಿ ಪ್ರತಿ ಒಂದು ವರ್ಷಕ್ಕೊಮ್ಮೆ ಫೆಬ್ರುವರಿ ೨೩ ನೆಯ ತಾರೀಖಿನ ತರುವಾಯ ೨೪ ಅಥವಾ ೨೫ ದಿವಸಗಳ ಒಂದು ತಿಂಗಳವನ್ನು ಹೆಚ್ಚಿಗೆ ಸೇರಿಸುತ್ತಿದ್ದರು. ಕ್ರಿಸ್ತಪೂರ್ವ ೪೬ ನೆಯ ಇಸ್ವಿಯಲ್ಲಿ ಸೀಝರನ ಕಾಲದಲ್ಲಿ ಕ್ಯಾಲೆಂಡರು ೯೦ ದಿವಸಗಳಷ್ಟು ಹಿಂದೆ ಬಿದ್ದಿತ್ತು. ೪೬ ವರ್ಷ ಅವನು ೪೪೫ ದಿವಸ ಗಳ ಒಂದು ವರ್ಷವನ್ನು ಎಣಿಸಿ ಮುಂದೆ ಈತರದ ತೊಂದರೆ ಬರದಂತೆ ಕಾಲ

ಗಣನೆಯ ಕ್ರಮದಲ್ಲಿಯೇ ಬದಲಾವಣೆ ಮಾಡಿದನು. ಅವನು ಆಗಷ್ಟ, ಡಿಸೆಂಬರ್ ತಿಂಗಳುಗಳಿಗೆ ೩೦ದಿವಸಗಳನ್ನೂ ಎಪ್ರಿಲ್, ಜೂನ್, ಸಪ್ಟಂಬರ್ ಮತ್ತು ನೊವ್ಹೆಂಬರ್ ತಿಂಗಳುಗಳಿಗೆ ಒಂದೊಂದು ದಿವಸವನ್ನೂ ಸೇರಿಸಿ ಫೆಬ್ರುವರಿ ತಿಂಗಳಿಗೆ ೨೮ ದಿವಸಗಳನ್ನಷ್ಟೇ ಉಳಿಸಿದನು. ಮತ್ತು ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಫೆಬ್ರುವರಿ ತಿಂಗಳಿಗೆ ೨೯ ದಿವಸಗಳೆಂದು ಗೊತ್ತುಪಡಿಸಿದನು. ಇಸ್ವಿಯ ಸಂಖ್ಯೆಗೆ ನಾಲ್ಕುರಿಂದ ಭಾಗಹೋಗುವ ವರ್ಷದಲ್ಲಿ ಫೆಬ್ರುವರಿ ತಿಂಗಳಿಗೆ ೨೯ ದಿವಸಗಳು. ಇದಕ್ಕೆ ಲೀಪ ಇಯರ್ ಎನ್ನುವರು. ಇದೇ ಪ್ರಕೃತಕ್ಕೆ ಪ್ರಚಾರದಲ್ಲಿರುವ ಇಂಗ್ಲಿಷು ವರ್ಷಗಣನೆಯ ಕ್ರಮವು.

ಗ್ರೆಗೇರಿಯನ್ ಪದ್ಧತಿ:— ಈ ಪದ್ಧತಿಯು ತಕ್ಕಮಟ್ಟಿಗೆ ಸರಿಯಾದ ದ್ದೆಂತು ತಿಳಿಯಲ್ಪಡುವರು. ಮೇಲೆ ಹೇಳಿದ ಕ್ರಮದಲ್ಲಿ ೬೬೫ ದಿವಸಗಳಿಗೆ ವಿಕ್ಕಿದ ೫ ತಾ. ೪೮ ವಿ. ೪೬ ಸೇಕಂಡುಗಳೆಂದರೆ ತಸು ಕಡಿವೆ ೪ ದಿವಸವಾಗುವದು. ೧೫೮೨ನೆಯ ಇಸ್ವಿಯಿಂದ ೧೬೮೨ನೆಯ ಇಸ್ವಿಯ ವರೆಗಿನ ೧೦೦ ವರ್ಷಗಳಲ್ಲಿ ಈ ಲೆಕ್ಕವು ೧೦ ದಿವಸಗಳ ಅಂತರಕ್ಕೆ ಕಾರಣವಾಯಿತು. ಆಗಿನ ಪೋಪನಾದ ಗ್ರೆಗೇರಿಯು ಒಕ್ಟೋಬರ್ ೫ನೆಯ ತಾರೀಖಿನ ದಿನವನ್ನು ೧೫ನೆಯ ತಾರೀಖೆಂದು ಎಣಿಸಿ ಹತ್ತು ದಿವಸಗಳನ್ನು ಹೆಚ್ಚಿಸಿದನು. ಮತ್ತು ಹೊಸ ಶತಮಾನದ ಮೊದಲನೆಯ ವರ್ಷವು ಆ ಶತಮಾನಗಳ ಸಂಖ್ಯೆಗೆ ನಾಲ್ಕುರಿಂದ ಭಾಗಹೋಗದೆ ಇದ್ದರೆ ಲೀಪ ಇಯರ್ ಅಲ್ಲವೆಂದು ತಿಳಿಯಲ್ಪಡುವದೆಂದೂ ಗೊತ್ತುಮಾಡಿದನು. ಅದಕ್ಕನುಗುಣವಾಗಿ ೧೯೦೦ನೆಯ ಇಸ್ವಿಯು ಲೀಪ ಇಯರ ಆಗಲಿಲ್ಲ.

ಇಷ್ಟಾದರೂ ಎಲ್ಲರಿಗೂ ಇದರಿಂದ ಸಮಾಧಾನವಾದಂತೆ ಕಂಡುಬರಲಿಲ್ಲ. ೧೯೩೭ನೆಯ ಇಸ್ವಿಯಲ್ಲಿ ರಾಷ್ಟ್ರಸಂಘದವರು ಈ ಕ್ಯಾಲೆಂಡರಿನ ವಿಚಾರವನ್ನು ಮತ್ತೆ ಎತ್ತಿದರು. ಆಗ ೧೪೦ ಬೇರೆ ಬೇರೆ ಪದ್ಧತಿಗಳು ಸೂಚಿಸಲ್ಪಟ್ಟವು. ತೀರ ಸುಲಭವಾದ ಕ್ರಮದಲ್ಲಿ ೩೬೪ ದಿವಸಗಳುಳ್ಳ ೧೨ ತಿಂಗಳುಗಳ ಒಂದು ವರ್ಷವೂ ೩೬೫ ದಿವಸಗಳ ೧೩ ತಿಂಗಳಿನ ಒಂದು ವರ್ಷದ ಎಣಿಕೆಯ ಕ್ರಮವೂ ಸರಳವಾಗಿ ತೋರಿದವು. ಈ ಎರಡನೆಯ ಕ್ರಮವನ್ನು ವ್ಯಾಪಾರ ಸಂಘದವರು ಸೂಚಿಸಿದ್ದರು. ಇದರಲ್ಲಿ ಪ್ರತಿ ತಿಂಗಳದ ಎಲ್ಲ ತಾರೀಖುಗಳು ಆಯಾ ವಾರವೇ ಬರುತ್ತಿದ್ದವು. ಸುಧಾರಿಸಿದ ಎಲ್ಲ ಪಾಶ್ಚಿಮಾತ್ಯ ದೇಶಗಳು ಗ್ರೆಗೇರಿಯನ್ ಪದ್ಧತಿಯ ಕ್ಯಾಲೆಂಡರನ್ನೇ ಉಪಯೋಗಿಸುವರು. ಚೀನ ಜಪಾನ ಮುಂತಾದ ಪೌರ್ವಾತ್ಯ ದೇಶಗಳೂ ಇದನ್ನೇ ಅನುಸರಿಸುವವು. ನಮ್ಮ ಹಿಂದುಸ್ತಾನಲ್ಲಿಯೂ ಇದು ಪ್ರಚಾರದಲ್ಲಿರುವದಾದರೂ ನಮ್ಮಲ್ಲಿ ಬೇರೆ ಕೆಲವು ದೇಶೀಯ ಕಾಲಗಣನೆಯ ಕ್ರಮಗಳೂ ಪ್ರಚಾರದಲ್ಲಿವೆ.

ನಮ್ಮ ಹಿಂದೂ ಪದ್ಧತಿಯ ಸೌರಮಾನ ಚಾಂದ್ರಮಾನ ವರ್ಷಗಳೂ ಅಧಿಕ ಮಾಸ ಕ್ಷಯಮಾಸಗಳೂ ನಮಗೆ ಗೊತ್ತಿವೆ. ಇವು ಕ್ರಿ. ಶ. ೪ನೆಯ ಶತಮಾನದಲ್ಲಿ ಗ್ರೀಕರ ಸಂಸರ್ಗದಿಂದ ನಮ್ಮಲ್ಲಿ ಪ್ರಚಾರದಲ್ಲಿ ಬಂದುವೆಂದು ಹೇಳುವರು. ಬಂಗಾಲದಲ್ಲಿ ಸೌರಮಾನವು ಪ್ರಚಾರದಲ್ಲಿದೆ. ಅದರಂತೆ ಇದು ಓರಿಸಾ ಪ್ರಾಂತದಲ್ಲಿಯೂ ಮದ್ರಾಸ ಇಲಾಖೆಯ ತಮಿಳುನಾಡು ಮಲೆಯಾಳ ದೇಶ ಇವುಗಳಲ್ಲಿಯೂ ಪ್ರಚಾರದಲ್ಲಿರುವದು. ಧಾರ್ಮಿಕ ವಿಧಿಗಳಲ್ಲಿ ಚಾಂದ್ರಮಾನದ ಕಾಲಗಣನೆಯು ಉಪಯೋಗಿಸಲ್ಪಡುವದು. ನಮ್ಮ ದೇಶದೊಳಗಿನ ಮಹಮ್ಮದೀಯರ ವರ್ಷಗಣನೆಯು ಹಿಂದೆ ಹೇಳಿದಂತೆ ಚಾಂದ್ರಮಾನವನ್ನೆ ಅವಲಂಬಿಸಿರುವರು. ಇದು ಕ್ರಿ. ಶ. ೬೩೨ರಲ್ಲಿ ಪ್ರಾರಂಭವಾಯಿತು. ಹಿಜರೀಶಕವು ಮಹಮ್ಮದ ಪೈಗಂಬರರು ಮಕ್ಕೆಯಿಂದ ಮದಿನಾಕ್ಕೆ ಓಡಿಹೋದ ದಿನದಿಂದ ಪ್ರಾರಂಭವಾಗುವದು.

ಪಾರ್ಸಿ ಜನರ ವರ್ಷಾರಂಭದ ದಿನವು ಅಗಸ್ಟ (ಕದಬು) ಅಥವಾ ಸಪ್ಟಂಬರ (ಶೆನ್‌ಶಾಯಿ) ತಿಂಗಳಲ್ಲಿ ನಟ್ಟನಡು ಮಳೆಗಾಲದಲ್ಲಿ ಬರುವದು. ಫಸಲಿ (ಹೊಸ ಪದ್ಧತಿ) ಮತ್ತು ಅಸಲಿ (ಹಳೆಯ ಪದ್ಧತಿ) ಗಳ ಕಾಲಗಣನೆಯ ಕ್ರಮದಲ್ಲಿ ತುಂಬ ಭೇದವಿದೆ. ಫಸಲಿ ಪದ್ಧತಿಯವರು ಮಾರ್ಚ ತಿಂಗಳಲ್ಲಿ ವರ್ಷಾರಂಭದ ದಿನವು ಬರುವ ಕ್ರಮವನ್ನು ಅಂಗೀಕರಿಸಬೇಕೆಂದು ಹೇಳುವರು. ಚೀನೀ ಜನರು, ಅಸ್ಸೀರಿಯನ್ನರು, ಪರ್ಶಿಯನ್ನರು, ಹಿಬ್ರೂ ಜನರು, ಲ್ಯಾಟಿನ್ ಮತ್ತು ಜರ್ಮನ್ ಜನಾಂಗದವರು ಇವರೆಲ್ಲರ ವರ್ಷಾರಂಭದ ದಿನವು ಮಾರ್ಚ ತಿಂಗಳಲ್ಲಿಯೇ ಬರುವದು. ಮಾರ್ಚ ತಿಂಗಳು ನಿಜವಾಗಿ ವಸಂತಋತುವಿನ ಆರಂಭ ಕಾಲವಾಗಿದ್ದು ಆಗಲೇ ನೂತನ ವರ್ಷಾರಂಭವಾಗುವದು ಹೆಚ್ಚು ಪ್ರಕೃತಿಗನುಗುಣವಾಗಿ ಹೆಚ್ಚು ರಂಜಕವಾಗಬಹುದಲ್ಲವೆ ?

---

೨. ಪ್ರಕೃತದ ಮಹಾಯುದ್ಧದ ಸಂಕ್ಷಿಪ್ತ ಡಾಯರಿ.

(೧) **ಸಪ್ಟಂಬರ್** ತಾ॥ ೧. ಜರ್ಮನಿಯು ಪೋಲಂಡಿನ ಮೇಲೆ ದಾಳಿ ಮಾಡಿದ್ದರಿಂದ ಬ್ರಿಟಿಷರೂ ಫ್ರೆಂಚರೂ ಸೈನ್ಯವನ್ನು ಸಂಗ್ರಹಿಸತೊಡಗಿದರು. ಮತ್ತು ಅವರು 'ನೀವು ಪೋಲಂಡದ ಮೇಲಿನ ದಾಳಿಯನ್ನು ಹಿಂದೆ ತೆಗೆದುಕೊಳ್ಳದಿದ್ದರೆ ನಾವು ಪೋಲಂಡಕ್ಕೆ ಕೊಟ್ಟಿದ್ದ ವಚನದಂತೆ ಅದರ ಸಹಾಯಕ್ಕೆ ನಿಲ್ಲುವೆವು' ಎಂದು ಜರ್ಮನಿಗೆ ಎಚ್ಚರಿಕೆ ಕೊಟ್ಟರು. ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಯುದ್ಧದ ಸಲುವಾಗಿ ೫,೦೦೦,೦೦೦,೦೦೦ (ಐದು ಅಬ್ಜ) ಪೌಂಡುಗಳು ಮಂಜೂರಾದವು.

ತಾ॥ ೩. ಬ್ರಿಟಿಷರೂ ಫ್ರೆಂಚರೂ ಜರ್ಮನಿಯ ವಿರುದ್ಧ ಯುದ್ಧವನ್ನು ಸಾರಿದರು. ಬ್ರಿಟಿಷ ಯುದ್ಧಮಂಡಲವು ಸ್ಥಾಪಿತವಾಗಿ ಮಿ. ಚರ್ಚಿಲ್ಲನು ಅದರ ನಾಯಕನಾದನು.

ತಾ॥ ೪. ೧೪೦೦ ಪ್ರವಾಸಿಕರಿರುವ ಅಥೇನಿಯಾ ಹಡಗವನ್ನು ಜರ್ಮನ್ನರು ಟಾರ್ಪೆಡೊ ಹಚ್ಚಿ ಮುಳುಗಿಸಿದರು. ಬ್ರಿಟಿಷ ವೈಮಾನಿಕ ದಳದವರು ಜರ್ಮನ್ ಹಡಗುಪಡೆಯ ಮೇಲೆ ಏರಿಹೋದರು.

ತಾ॥ ೬. ಫ್ರೆಂಚ್ ಸೈನ್ಯದವರು ಜರ್ಮನಿಯ ಗಡಿಯನ್ನು ದಾಟಿಹೋದರು.

ತಾ॥ ೭. ಪೋಲಂಡ್ ಸೈನ್ಯದವರು ವೈರಿಗಳಿಗೆ ವೆಸ್ಟರ್ ಪ್ಲೇಟೆಯಲ್ಲಿ ಶರಣಾಗತರಾದರು.

ತಾ॥ ೯. ಬ್ರಿಟಿಷರು ತಮ್ಮ ಮೂರು ವರ್ಷಗಳ ಯುದ್ಧದ ಸಿದ್ಧತೆಯನ್ನು ಸಾರಿದರು.

ತಾ॥ ೧೧. ಬ್ರಿಟಿಷ್ ಸೈನ್ಯವು ಫ್ರಾನ್ಸ್‌ನಕ್ಕೆ ಮುಟ್ಟಿತು.

ತಾ॥ ೧೨. ಮಿತ್ರಮಂಡಲದ ವಾರ್‌ಕೌನ್ಸಿಲಿನ ಮೊದಲನೆಯ ಸಭೆಯು ಫ್ರಾನ್ಸ್‌ದಲ್ಲಿ ಕೂಡಿತು.

ತಾ॥ ೧೩. ಫ್ರೆಂಚ್ ವಾರಕೌನ್ಸಿಲಿನ ಸ್ಥಾಪನೆ.

ತಾ॥ ೧೭. ರಶಿಯನ್ನರು ಪೋಲಂಡದ ಮೇಲೆ ದಾಳಿಮಾಡಿದರು.

ತಾ॥ ೧೮. ರಶಿಯನ್ ಮತ್ತು ಜರ್ಮನ್ ಸೈನ್ಯಗಳು ಬ್ರೆಸ್ಟ್‌ಲಿಟ್‌ವಾಕದಲ್ಲಿ ಕೂಡಿದವು. ಪೋಲಂಡದ ಸರಕಾರವು ರುಮೇನಿಯಾಕ್ಕೆ ಹೋಯಿತು. ಕರೇಜಸ್ ಹಡಗವನ್ನು ಜರ್ಮನ್ನರು ಮುಳುಗಿಸಿದರು.

ತಾ॥ ೧೯. ಹಿಟ್ಲರನು ಡ್ಯಾಯ್ಚಿಂಗದಲ್ಲಿ ಬ್ರಿಟಿಷರೇ ಯುದ್ಧಕ್ಕೆ ಕಾರಣರೆಂದು ಸಾರಿದನು.

ತಾ॥ ೨೦. ಮಿ. ಚರ್ಚಿಲ್ಲನು ಯುರೋಪಖಂಡದಲ್ಲಿ ಆಕ್ರಮಣಶೀಲತೆಯನ್ನು ನಿಲ್ಲಿಸುವದೇ ಈ ಮಹಾಯುದ್ಧದ ಧ್ಯೇಯವೆಂದು ಸಾರಿದನು.

ತಾ॥ ೨೨. ರಶಿಯನ್ನರೂ ಜರ್ಮನ್ನರೂ ಪೋಲಂಡವನ್ನು ಹಂಚಿಕೊಂಡರು.

ತಾ॥ ೨೭. ವಾರ್ಸಾನಗರವು ವೈರಿಗಳ ವಶವಾಯಿತು.

ತಾ॥ ೨೯. ಪೋಲಂಡದ ಹಂಚುವಿಕೆಗಾಗಿ ಜರ್ಮನ್ನರೂ ರಶಿಯನ್ನರೂ ಒಪ್ಪಂದಮಾಡಿಕೊಂಡರು. ಹೆಲಿಗೊಲಂಡದಲ್ಲಿಯ ಜರ್ಮನ್ ನೌಕಾದಳದ ಮೇಲೆ ಬ್ರಿಟಿಷ ವೈಮಾನಿಕ ದಳದವರು ಹಲ್ಲೆಮಾಡಿದರು.

(೨) **ಅಕ್ಟೋಬರ** ತಾ॥ ೧. ಸಾರಾಬ್ರುಕ್ ಮತ್ತು ಮೋಸೆಲ್‌ಗಳಲ್ಲಿ ಫ್ರೆಂಚರ ವಿಜಯ.

ತಾ॥ ೬. ಹಿಟ್ಲರನು ತನ್ನ ಒಪ್ಪಂದದ ಕರಾರುಗಳನ್ನು ''ರಿಚ್‌ಸ್ಟಾಗ್''ದ ಮುಂದೆ ಇಟ್ಟನು.

ತಾ. ೯. ರ್ಹಾಯಿನ್ ನದಿಯ ಬಲದಂಡೆಯಲ್ಲಿ ೧೫ ಮೈಲುಗಳವರಿಗೆ ಇದ್ದ ಜರ್ಮನ್ ಹಳ್ಳಿಗಳನ್ನೂ ಪಟ್ಟಣಗಳನ್ನೂ ನಿರ್ಜನವಾಗಿ ಮಾಡಲಾಯಿತು.

ತಾ॥ ೧೨. ಮಿ. ಚೆಂಬರಲೇನನು ಹಿಟ್ಲರನ ಮಾತಿನಲ್ಲಿ ವಿಶ್ವಾಸವಿಲ್ಲೆಂದು ಸಾರಿದನು. 'ಕಾವ್‌ನೋರ್ಟ್' ಎಂಬ ೧೩೦೦೦ ಟನ್ ಭಾರದ ಜರ್ಮನ್ ಹಡಗವನ್ನು ಬ್ರಿಟಿಷ್ ಹಡಗುಪಡೆಯವರು ಸೆರೆಹಿಡಿದರು.

ತಾ॥ ೧೪. 'ರಾಯಲ್‌ಓಕ' ಎಂಬ ೨೯೦೦೦ ಟನ್ ಭಾರದ ಬ್ರಿಟಿಷ ಯುದ್ಧದ ಹಡಗು ಮುಣುಗಿತು.

ತಾ॥ ೧೬. ಸ್ಕಾಟಲಂಡದ ಮೇಲೆ ಬಂದ ಜರ್ಮನ್ ವಿಮಾನಗಳ ದಾಳಿಯನ್ನು ಹಿಂದಕ್ಕಟ್ಟಿದರು.

ತಾ॥ ೨೩. ''ಸಿಟೀ ಆಫ್ ಫ್ಲಿಂಟ'' ಎಂಬ ಅಮೇರಿಕನ್ ಹಡಗವನ್ನು ಜರ್ಮನ್ನರು ಹಿಡಿದರು.

(೩) **ನೊವ್ಹೆಂಬರ** ತಾ॥ ೬ ಜರ್ಮನ್ನರಿಗೂ ಫ್ರೆಂಚರಿಗೂ ಕಡುತರವಾದ ವಿಮಾನದಳದ ಕಾಳಗ ನಡೆಯಿತು. ೯ ಜರ್ಮನ್ ವಿಮಾನಗಳೂ ೧ ಫ್ರೆಂಚ್ ವಿಮಾನವೂ ನಾಶವಾದವು.

ತಾ॥ ೮. ಲಾರ್ಡ್ ಹಾಲಿಫಾಕ್ಸನು ಮಾನವಕುಲದ ಸುವ್ಯವಸ್ಥೆಗಾಗಿಯೂ ಪ್ರಾಣಿದಯಾ ದೃಷ್ಟಿಯಿಂದಲೂ ವಿಕ್ರಮುಂಡಲದವರು ಯುದ್ಧವನ್ನು ಹೂಡಿರುವರೆಂದು ಸಾರಿದನು. ಬೆಲ್ಜಿಯಮ್ ಮತ್ತು ಹಾಲಂಡಗಳ ಗಡಿಯಲ್ಲಿ ಜರ್ಮನ್ ಸೈನಿಕರು ಪಾಳೆಯ ಹೂಡಿದರು. ಬೆಲ್ಜಿಯಮ್ ಮತ್ತು ಹಾಲಂಡ್ ಸರಕಾರದವರು ಶಾಂತಿಸ್ಥಾಪನೆಯ ವಿನ್ನಹ ಪತ್ರವನ್ನು ಹೊರಡಿಸಿದರು.

ತಾ॥ ೧೩. ಹಾಲಂಡ್ ಮತ್ತು ಬೆಲ್ಜಿಯಮ್‌ಗಳ ವಿನ್ನಹ ಪತ್ರಕ್ಕೆ ಅರಸರ ಉತ್ತರ.

ತಾ॥ ೧೭. ಲಂಡನಿನಲ್ಲಿ ಸುಪ್ರೀಮವಾರ ಕೌನ್ಸಿಲಿನ ಸಭೆ ನೆರೆಯಿತು. ವಿಕ್ರಮುಂಡಲದವರು ಪರಸ್ಪರ ಆರ್ಥಿಕ ಸಹಾಯದ ಯೋಜನೆಯನ್ನು ಗೊತ್ತು

ಪಡಿಸಿಕೊಂಡರು. '' ಡಚ್‌ಲಾಯಿನರ್ ಸಿವಾನ್ ಬೊಲಿವಾರ ' ಎಂಬ ಹಡಗವು ಜರ್ಮನ್ ಗುಂಡಿಗೆ ತಾಗಿ ಮುಳುಗಿತು. ೧೪೦ ಜನರು ಮರಣಹೊಂದಿದರು.

ತಾ॥ ೨೩. ಎಂ. ಹೋರ ಬೆಲಿಶಾ ತಮ್ಮ ೧೦ ಲಕ್ಷ ಜನರು ಯುದ್ಧದ ಶಿಕ್ಷಣ ಪಡೆಯುತ್ತಿರುವರೆಂದು ಸಾರಿದನು.

ತಾ॥ ೨೪. ಹಾಲಾಂಡದ ಮೇಲೆ ದಾಳಿ ಮಾಡಬೇಕೆಂಬ ಹಿಟ್ಲರನ ವಿಚಾರವನ್ನು ಸೈನಿಕರು ವಿರೋಧಿಸಿದ್ದರಿಂದ ಅದನ್ನು ಬಿಟ್ಟುಬಿಡಬೇಕಾಯಿತು.

ತಾ॥ ೨೬. ' ಪಿಲ್ಸುಡಸ್ಕಿ ' ಎಂಬ ಪೋಲಿಶ್ ಹಡಗವು ಮುಣುಗಿತು.

ತಾ॥ ೨೭. ' ರಾವಳಪಿಂಡಿ ' ಎಂಬ ಬ್ರಿಟಿಷ್ ಹಡಗವು ಮುಳುಗಿತು.

(೪) **ಡಿಸೆಂಬರ** ತಾ॥ ೧. ರಶಿಯವು ಫಿನ್ಲಂಡದ ಮೇಲೆ ದಾಳಿ ಮಾಡಿತು. ಹೆಲಿಸಂಕಿ ಮೊದಲಾದ ಪಟ್ಟಣಗಳ ಮೇಲೆ ಬಾಂಬು ಸುರಿದರು.

ತಾ॥ ೧೮. 'ಎಡ್ಮಿರಲ್ ಗಾಫ್ ಸ್ಪೀ' ಎಂಬ ಜರ್ಮನ್ ಯುದ್ಧದ ಹಡಗವು ಮಾಂತೆವಿದಿಯೋದಿಂದ ಹೊರಟು ಆತ್ಮಹತ್ಯ ಮಾಡಿಕೊಂಡಿತು.

ತಾ॥ ೧೯. ಕೋಲಂಬಸ್, ಎಂಬ ೩೨೦೦೦ ಟನ್ ಭಾರದ ಜರ್ಮನ್ ಹಡಗವು ವರ್ಜಿನಿಯಾದಿಂದ ಹೊರಟು ಆತ್ಮಹತ್ಯಮಾಡಿಕೊಂಡಿತು.

ತಾ॥ ೨೦. ಫಿನ್ಲಂಡದ ಪೂರ್ವ ಮತ್ತು ಉತ್ತರ ರಣಭೂಮಿಗಳಲ್ಲಿ ರಶಿಯನ್ನರ ಪರಾಜಯ.

ತಾ॥ ೨೨. ಬರ್ಲಿನ್ನದ ದಕ್ಷಿಣದಿಕ್ಕಿನಲ್ಲಿ ಜರ್ಮನ್ ರೈಲುಗಾಡಿಯು ಹಳಿ ಬಿಟ್ಟು ಉರುಳಿತು. ೨೦೦ ಜನರು ಮರಣ ಹೊಂದಿದರು. ಇಲ್ಲಿ ಐದು ವಾರಗಳಲ್ಲಿ ಹೀಗೆ ೮ ಸಾರೆ ರೇಲಿನ ಅಪಘಾತ ಸಂಭವಿಸಿತು.

ತಾ॥ ೨೬. ಆಸ್ಟ್ರೇಲಿಯದಿಂದ ಮೊದಲನೆಯ ಸಾರಿ ಸೈನಿಕರು ಬ್ರಿಟನ್ನಿಕ್ಕೆ ಬಂದು ಮುಟ್ಟಿದರು.

ತಾ॥ ೨೭. ಹಿಂದೀ ಸೈನ್ಯವು ಫ್ರಾನ್ಸಿಕ್ಕೆ ಮುಟ್ಟಿತು.

ಸ ರ ಕಾ ರೀ
ಶಾರೀರಿಕ ಶಿಕ್ಷಣದ ಪ್ರಥಮ ಶಿಬಿರ, ಧಾರವಾಡ

ವ್ಯಕ್ತಿಯ ಶಾರೀರಿಕ ವಿಕಾಸ ಹಾಗೂ ಚಾಪಲ್ಯಗಳನ್ನು ಗರಡಿಯ ಮನೆಗಳಲ್ಲಿಯೂ ಸರ್ಕಸಗಳಲ್ಲಿಯೂ ನಾವು ಕಾಣಬಹುದು. ಈ ತರದ ಶಾರೀರಿಕ ಶಿಕ್ಷಣವು ಪ್ರಾಥಮಿಕ ಶಾಲೆಗಳಲ್ಲಿ ಬೇಕಾಗಿರದೆ ಬೌದ್ಧಿಕ ಶಿಕ್ಷಣಕ್ಕೆ ಸಹಕಾರಿಯಾದ ಹಾಗೂ ವ್ಯಕ್ತಿಯ ಗುಣಗಳನ್ನು ಕಂಡುಹಿಡಿದು ಅರ್ಥವತ್ತಾದ ಚಟುವಟಿಕೆಗಳಿಂದ ಕೂಡಿದ ನಿಜವಾದ ಸಾಮೂಹಿಕ ಶಾರೀರಿಕ ಶಿಕ್ಷಣವು ಬೇಕಾಗಿದೆ. ಈ ಬಗೆಯ ಶಿಕ್ಷಣ ಪ್ರಚಾರ ಹಾಗೂ ಮೇಲ್ವಿಚಾರಣೆಗಳಿಗಾಗಿ ನಮ್ಮ ದಕ್ಷಿಣಭಾಗಕ್ಕೆ ಮೆ. ಯಾರಗಲ್ ಎಂಬವರು ಫಿಜಿಕಲ್ ಇನ್‌ಸ್ಪೆಕ್ಟರರಾಗಿ ನೇಮಕವಾಗಿದ್ದಾರೆ. ಇವರ ಜಾಲಕತ್ವದಲ್ಲಿ ತಾರೀಖು ೮-೧೧-೧೯೪೦ ರಿಂದ ೧೯-೧-೧೯೪೧ ರ ವರೆಗೆ ೨೩ ದಿವಸಗಳ ಅವಧಿಯ ಒಂದು ಸರಕಾರೀ ಶಾರೀರಿಕ ಶಿಕ್ಷಣದ ಪ್ರಥಮ ಶಿಬಿರವು ಧಾರವಾಡದಲ್ಲಿ ಸಾಗಿತು.

ತಾ. ೮-೧೧-೧೯೪೦ ನೆಯ ದಿವಸ ಈ ಶಿಬಿರದ ಉದ್ಘಾಟನ ಸಮಾರಂಭವು ಮೆ. **ತಾವಡೆ ಸಾಹೇಬರು,** ಎ. ಇ. ಡ. ಭಾಗ ಇವರಿಂದ ನೆರವೇರಿಸಲ್ಪಟ್ಟಿತು. ಆಗ ಅವರು "ಬೌದ್ಧಿಕ ಶಿಕ್ಷಣದಗೂಡ ಶಾಸ್ತ್ರೀಯವಾದ ಶಾರೀರಿಕ ಶಿಕ್ಷಣವು ಪ್ರಾಥಮಿಕ ಶಾಲೆಗಳಲ್ಲಿಯೇ ಆರಂಭವಾಗಬೇಕು. ಇದು ಒತ್ತಾಯದ ವಿಷಯವೆಂದು ತಿಳಿಯದೆ ಅವಶ್ಯಕವಾದುದೆಂದು ತಿಳಿದು ಬೇಸರ ತಂದುಕೊಳ್ಳದೆ ನಿಯಮಿತ ತನದಿಂದ ಸಾಮೂಹಿಕವಾಗಿ ಸಾಗಿಸಬೇಕು. ಅಂಥ ಉತ್ಕೃಷ್ಟ ಶಿಕ್ಷಣವನ್ನು ನೀವು ಈ ಪ್ರಥಮ ಶಿಬಿರದಲ್ಲಿ ಪಡೆಯಿರಿ" ಎಂದು ಆಶೀರ್ವದಿಸಿದರು.

ಧಾರವಾಡನಗರದಲ್ಲಿಯ ಶಿಕ್ಷಕ-ಶಿಕ್ಷಕೆಯರೊಳಗಿಂದ ೩೬ ಗಂಡುಸರನ್ನೂ ೧೭ ಹೆಂಗುಸರನ್ನೂ ಈ ಶಿಕ್ಷಣಕ್ಕಾಗಿ ಆರಿಸಲಾಗಿತ್ತು. ಇವರೆಲ್ಲರೂ ತಮ್ಮ ಪಾಲಿನ ಶಾಲೆಯ ಕೆಲಸವನ್ನು ಬಹುಮಟ್ಟಿಗೆ ಮಾಡಿಕೊಂಡು, ದಿನಾಲು ಮುಂಜಾನೆ ೭ ರಿಂದ ೮-೩೦ ರ ವರೆಗೆ, ಸಂಜೆಗೆ ೪-೩೦ ರಿಂದ ೬ ರ ವರೆಗೆ ಹೀಗೆ ಮೂರು ತಾಸು ಸ್ಕೌಟ ಕಟ್ಟಡದ ಬಯಲಿಗೆ ಬಂದು, ಶಿಕ್ಷಣ ಪಡೆಯುತ್ತಲಿದ್ದರು. ಆರಿಸಿದ ಈ ವಿದ್ಯಾರ್ಥಿ ಶಿಕ್ಷಕರಲ್ಲಿ ೧೮ ವರ್ಷ ವಯಸ್ಸಿನಿಂದ ೪೦ ವಯಸ್ಸಿನ ವರೆಗಿನ ಎಲ್ಲ ತರದ ವಯಸ್ಸಿನ ಹಾಗೂ ಪ್ರಕೃತಿಯವರಿದ್ದರು.

ಮೆ. ಯಾರಗಲ್ ಸಾಹೇಬರೇ ಮುಖ್ಯ ಶಿಕ್ಷಕರಾಗಿದ್ದರು. ಇವರಿಗೆ ಸಹಾಯಕರಾಗಿ, ಮೆ. ಎಸ್. ವಾಚ್ಟಾ, ಅ. ಡೆ. ಎ. ಇ., ಧಾರವಾಡರವರು, ಕರ್ನಾಟಕ ಹೈಸ್ಕೂಲದ ಶ್ರೀಮಾನ್ ಜೋಶಿಯವರು, ವಿಕ್ಟೋರಿಯಾ ಹೈಸ್ಕೂಲದ ಶ್ರೀಮಾನ್ ನಾಡಗೀರರು, ಮಿಶನ್ ಹೈಸ್ಕೂಲದ ಶ್ರೀಮಾನ್ ನೆಗಳೂರರು, ಆಂಜನೇಯ ಸ್ಕೂಲದ ಶ್ರೀಮಾನ್ ಶಿರೂರರು, ಸ್ಕೌಟ ಆರ್ಗನಾಯಝರರಾದ ಶ್ರೀಮಾನ್ ಹಲಸಗಿಯವರು, ತಮಗೆ ಕೂಡಿದಾಗ ಹಾಗೂ ಕರೆದಾಗ ಬಂದು ಕಲಿಸಿದರು. ಇವರೆಲ್ಲರನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ ಸರಿ.

ಗಂಡುಸರಿಗೂ ಹೆಂಗುಸರಿಗೂ ಉಪಯುಕ್ತವಾದ ಬಂದೇ ಬಗೆಯ ಶಿಕ್ಷಣವನ್ನು ಕೊಡುವದು ಈ ಶಿಬಿರದಲ್ಲಿಯ ವೈಶಿಷ್ಟ್ಯವು. ಬಾಲಬಾಲಿಕೆಯರ ಸಾಮೂಹಿಕ ಶಿಕ್ಷಣಕ್ಕೆ ಬೇಕಾಗುವ ವಿಷಯಗಳನ್ನೆಲ್ಲ ಕಲಿಸಿದರು. ಆವು ಯಾವವೆಂದರೆ:—

೧. ಸಾದಾ ಡ್ರಿಲ್	೨. ಕೆಲವು ಎಕ್ಸರಸಾಯಿಜುಗಳು
೩. ಸರ್ವಾಂಗಸುಂದರ ವ್ಯಾಯಾಮ	೪. ಮಾರ್ಚಿಂಗ
೫. ಓಟಗಳು	೬. ಕುಣಿತಗಳು
೭. ಅಣಕವಾಡುವದು	೮. ಸೂರ್ಯನಮಸ್ಕಾರ
೯. ಸಾಮು	೧೦. ಬೈತಕ
೧೧. ಡಂಬೆಲ್ಸ	೧೨. ಲಾಠೀ
೧೩. ಲೇಝಿಮ	೧೪. ಜೋಡಿ
೧೫. ವ್ಯಾಂಡ್ಸ (ಕೋಲುಕವಾಯಿತು)	೧೬. ಪೋಲ್ (ಬಿದಿರುಗಳಗಳ) ಡ್ರಿಲ್
೧೭. ಚಿಣಿಕೋಲು	೧೮. ಸಣ್ಣ ಆಟಗಳು
೧೯. ದೊಡ್ಡ ಆಟಗಳು	೨೦. ಸಂಗೀತ ಡ್ರಿಲ್

ಈ ವಿಷಯಗಳಲ್ಲದೆ ಶಾರೀರಿಕ ಶಿಕ್ಷಣೋಪಯುಕ್ತವಾದ ಹಲವು ವ್ಯಾಖ್ಯಾನಗಳಾದವು. 'ಸುಗ್ಗೀಕೇರಿ' ಯ ಪ್ರವಾಸವೂ ಆಯಿತು.

ಈ ಶಿಬಿರಕ್ಕೆ ಬಂದ ಶಿಕ್ಷಕರಲ್ಲಿ ಅನೇಕ ಜನರು ಈ ಮೊದಲೇ ಸ್ಕೌಟ ಶಿಕ್ಷಣವನ್ನು ಹೊಂದಿದ್ದರು. ಅವರ ಶಿಕ್ಷಣದ ಪುನರಾವರ್ತನೆಗಾಗಿ ನಾಲ್ಕು ದಿವಸದ ಬಂದು ಪುಟ್ಟ ಕ್ಲಾಸನ್ನು ಶ್ರೀ. ಹಲಸಗಿಯವರು ತೆರೆದಿದ್ದರು. ಕೊನೆಯ ದಿವಸ ಸ್ಕೌಟ ಸಪ್ತಾಹದ ಮುಕ್ತಾಯವು ಮೆ॥ ಡಿಸ್ಟ್ರಿಕ್ಟ ಜಜ್ಜರಾದ ಗುಗ್ಗಳಿಯವರಿಂದ ಆಯಿತು. ಆಗ ಆದ ಡ್ರಿಲ್ ಆಟ ಮೊದಲಾದವುಗಳನ್ನು ಕಂಡು,

ದೇ. ಭ. ಮುದವೀಡು ಕೃಷ್ಣರಾಯರು. "ತರುಣ ಶಿಕ್ಷಕ-ಶಿಕ್ಷಕಿಯರು ಇಂಥ ಸಂಘ ಶಿಬಿರಗಳಲ್ಲಿ ಸೇರಿ ಭಾರತೀಯ ನವರಾಷ್ಟ್ರನಿರ್ಮಾಣ ಕಾರ್ಯಕ್ಕೆ ಮುಂದೆ ಬರಕೇಕು." ಎಂದು ಸಂತೋಷದಿಂದ ಬೆನ್ನುಚಪ್ಪರಿಸಿದರು.

ತಾರೀಖು ೧-೨-೧೯೪೦ ನೆಯ ದಿನದ ಶಿಬಿರದ ಮುಕ್ತಾಯ ಸಮಾರಂಭವು ಮೆ। ತಾವಡೇ ಸಾಹೇಬರು ಎ. ಇ. ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಆಯಿತು. ಫೋಟೋ, ಆಟ, ಡ್ರಿಲ್, ಇತ್ಯಾದಿಗಳಾದನಂತರ ಅವರು ಸಮಾರೋಪ ಭಾಷಣವನ್ನು ಮಾಡಿದರು. ಆಗ ಅವರು "ಈ ಶಿಬಿರದಲ್ಲಿ ಶಾರೀರಿಕ ಶಿಕ್ಷಣವನ್ನು ಗಂಡುಸರಷ್ಟೇ ಏಕೆ, ಅದಕ್ಕೂ ಹೆಚ್ಚು ಆಸ್ಥೆಯಿಂದ ಹೆಂಗುಸರೂ ಕಲಿತಿರುವದನ್ನು ಕಂಡು ನಮಗೆ ತುಂಬಾ ಆನಂದವಾಯಿತು. ಇನ್ನು ನೀವು ಇಲ್ಲಿ ಕಲಿತುದನ್ನು ನಿಮ್ಮ ಶಾಲೆಯಲ್ಲಿ ಕಲಿಸಿತೋರಿಸಿರಿ, ನೀವು ಇಷ್ಟು ಅತ್ಯಲ್ಪಕಾಲದಲ್ಲಿ ಇಷ್ಟೊಂದು ಹೆಚ್ಚು ಶಿಕ್ಷಣಪಡೆದುದಕ್ಕಾಗಿ ನಿಮಗೂ, ನಿಮಗೆ ಕಲಿಸಿದ ಶಿಕ್ಷಕರಿಗೂ, ಧನ್ಯವಾದಗಳು. ಈ ಕಾರ್ಯಕ್ಕೆ ಸಹಾಯಮಾಡಿದ ಶಿಕ್ಷಣಸಂಸ್ಥೆಗಳಿಗೂ ಧನ್ಯವಾದಗಳು. ಇನ್ನು ಇಲ್ಲಿ ಕಲಿತ ಶಿಕ್ಷಕರು ತಮ್ಮ ಶಾಲೆಯ ಉಳಿದ ಶಿಕ್ಷಕರ ಕ್ಲಾಸಿನ ವಿದ್ಯಾರ್ಥಿಗಳಿಗೂ ಕಲಿಸಬೇಕು. ಆ ಶಿಕ್ಷಕರು ಇವರ ಕ್ಲಾಸಿನ ವಿಷಯುಗಳನ್ನು ಆದಷ್ಟು ಕಲಿಸಲಿ, ಎಂದು ಆಶೀರ್ವದಿಸಿದರು.

ಈ ಸಭೆಯ ಕಾಲಕ್ಕೆ, ಇಲ್ಲಿಯ ಮ್ಯು. ಸ್ಕೂ. ಚೇರಮನ್ನರಾದ ಶ್ರೀ. ಮುಂಕಣಿಯವರು, ತಮ್ಮ ಶಾಲೆಗಳಲ್ಲಿ ಶಾರೀರಿಕ ಶಿಕ್ಷಣಕ್ಕಾಗಿರುವ ಹಣ ಹಾಗೂ ಆಟದ ಬೈಲುಗಳ ಕೊರತೆಯನ್ನು ಕುರಿತು ಹೇಳಿಕೊಂಡರು. ಅದಕ್ಕೆ ಮೆ। ತಾವಡೇ ಸಾಹೇಬರು- "ನನಗೆ, ಎ. ಇ. ದಕ್ಷಿಣಭಾಗ, ಎಂದು ಎಷ್ಟೊಂದು ನೆರವಾಗಲಿಕ್ಕೆ ಬರುವದೋ ಅಷ್ಟರ ಮಟ್ಟಿಗೆ ತಪ್ಪದೆ ಸಹಾಯ ಮಾಡುವೆನು" ಎಂದು ತಿಳಿಸಿದರು.

ಡ್ರಿಲ್ ಮಾಸ್ತರನಂತೆ ಎಲ್ಲ ಅಪ್ಪಣೆಗಳನ್ನು ಪ್ರಾಥಮಿಕ ಶಿಕ್ಷಕನು ತಾನೇ ಕೊಡುತ್ತ ನಿಲ್ಲದೆ, ಕಲಿತ ವಿದ್ಯಾರ್ಥಿಗಳಲ್ಲಿಯೇ ಅಭಿರುಚಿಯುಳ್ಳ ಕೆಲವರು, ಮುಂದೆಬಂದು ಮಾಡಿಸಿ ತೋರಿಸಬೇಕು. ಶಿಕ್ಷಕನು ಸೂತ್ರಚಾಲಕನಾಗಿರಬೇಕು. ಹತ್ತೆಂಟುಸಾವಿರ ವಿದ್ಯಾರ್ಥಿಗಳು ಕೂಡಿದಲ್ಲಿ ಸಹ ಒಂದೇ ಬಗೆಯ ಡ್ರಿಲ್, ವ್ಯಾಯಾಮಗಳು ನಡೆಯಬೇಕೆಂದು ಮೆ। ಯಾರಗಲ್‌ರವರ ಆಶೆಯಿದೆ, ಸೂಚನೆಯಿದೆ, ಇದನ್ನು ಕೈಗೂಡಿಸುವುದು, ಶಿಕ್ಷಕರನ್ನೇ ಕೂಡಿದೆ.*

* ಸಾಮೂಹಿಕವಾಗಿ ಮಾಡಿಸತಕ್ಕ ಡ್ರಿಲ್, ವ್ಯಾಯಾಮಗಳ ವಿಷಯಗಳಲ್ಲಿ ತಜ್ಞರು ಬರೆದ ಲೇಖನಗಳಿಗೆ ಹೆಚ್ಚು ಗಮನ ಕೊಡಲಾಗುವದು.

—ಸಂಪಾದಕ

ಸರಕಾರೀ ಶಾರೀರಿಕ ಶಿಕ್ಷಣದ ಪ್ರಥಮ ಶಿಬಿರದಲ್ಲಿ ಶಿಕ್ಷಣವನ್ನು ಪಡೆದವರ ಹೆಸರುಗಳು.



ಪ್ರಾ. ಸ್ಕೂ; ಟ್ರೇ. ಸ್ಕೂ. ಧಾರವಾಡ

೧ ಎಚ್. ಜೀ. ಕಟ್ಟೀ

೨ ಆರ್. ಬಿ. ಸೊಸಗಾರ

ಪ್ರಾ. ಸ್ಕೂ. ಹೆಣ್ಣುಮಕ್ಕಳ ಟ್ರೇ. ಕಾಲೇಜ.

೩ ಶ್ರೀಮತಿ ಕೃಷ್ಣಾಬಾಯಿ ನೇಗಿನಹಾಳ

೪ ಶ್ರೀಮತಿ ಗಂಗಾಬಾಯಿ ಶಿರಸೀಕರ

೫ ಶ್ರೀ. ಸಬನೀಸ

ವ್ಹಿಕ್ಟೋರಿಯಾ ಹೈಸ್ಕೂಲು, ಧಾರವಾಡ.

೬ ವ್ಹಿ. ಎನ್. ಘಾಟಕ

೭ ಕೇ. ಜೀ. ನಾಯಿಕ

ಪ್ರಾಯಮರಿ ಶಾಲಾ ವ್ಹಿ. ಹೈಸ್ಕೂಲ, ಧಾರವಾಡ.

೮ ಶ್ರೀ. ಶಾಂತಾಬಾಯಿ ದೇಶಪಾಂಡೆ

೯ ಬಾ. ನಾ. ಲೋಣಖಡೆ

ಮಿಶನ್ ಹೈಸ್ಕೂಲ ಧಾರವಾಡ

೧೦ ಸೀ. ಜೇ. ಸಕ್ಕರಿ

೧೧ ಏ. ಜಿ. ಜಾತಾರ

ಪ್ರಾಯಮರಿ ಶಾಲಾ ಮಿಶನ್ ಹೈಸ್ಕೂಲ ಧಾರವಾಡ

೧೨ ಪತ್ತಾರ

೧೩ ಶ್ರೀ. ಮರಿಯಾ ಆಡಿನ್

ವನಿತಾ ಸೇವಾ ಸಮಾಜ ಧಾರವಾಡ

೧೪ ಶ್ರೀ. ಬಾಯವ್ವ ಸಂಪಿ

೧೫ ಶ್ರೀ. ಸರಸವ್ವ ಪಂಚಾಳ

ಮಾಡರ್ನ ಸ್ಕೂಲ್ ಧಾರವಾಡ

೧೬ ರಾ. ವೆ. ಕುಲಕರ್ಣಿ

೧೭ ಸಾ. ಸಾ. ಗುಂಡಿ

ಕ. ಲಿ. ಎ. ಸೋ. ಪ್ರಾಯಮರಿ ಶಾಲಾ, ಧಾರವಾಡ.

೧೮ ಎಸ್. ಎಮ್. ಸುಭೇದಾರ

೧೯ ಜೀ ಪೀ. ಯರನಾಳ

ಬಾಸೆಲ್ ಮಿಶನ್ ಟೌನ ಸ್ಕೂಲ್, ಧಾರವಾಡ.

೨೦ ಎಫ್. ಜೇ. ಸಕ್ಕರಿ

೨೧ ಸೀ. ಜೇ. ದಂಡಿನ

ಆಂಜನೇಯ ಸ್ಕೂಲ್, ಧಾರವಾಡ.

೨೨ ಎನ್. ಬೀ. ಮುದಕವಿ

೨೩ ಕೇ. ಆರ್. ಕಟ್ಟೀ

೨೪ ಎಚ್. ವ್ಹಿ. ಧಾಣಕಶಿರೂರ

೨೫ ಬಿ. ಟಿ. ಶಿರೂರ

ಧಾರವಾಡ ಮ್ಯುನಸಿಪಲ್ ಪ್ರಾಯಮರಿ ಶಾಲೆಗಳಿಂದ

೨೬ ಪಿ. ಎಚ್. ಸಿಂಧೆ

೨೭ ಎಮ್. ಎಫ್. ಕಲ್ಲಣ್ಣವರ

೨೮ ಎಸ್. ಜೀ. ಭೂಪಾಳಿ

೨೯ ಬೀ. ವ್ಹಿ. ಕಳಸಾಪೂರ
೩೦ ಎಮ್. ಕೇ. ಮಾನೆ
೩೧ ಎಸ್. ಎಮ್. ಸವಣೂರ
೩೨ ಡೀ. ಎಸ್. ಫಕೀರಣ್ಣವರ
೩೩ ಎಫ್. ಕೇ. ಬೀಡಿ
೩೪ ಎಸ್. ಏ. ಕಿಲ್ಲೇದಾರ
೩೫ ಏ. ಎಮ್. ಜಮಾದಾರ
೩೬ ಎಚ್. ಬೀ. ಕಡ್ಡೀ
೩೭ ಎಸ್. ಎಸ್. ಖಾದ್ರಿ
೩೮ ಎಮ್. ಎಮ್. ಲಂಗೋಟಿ
೩೯ ಎಮ್. ಎಸ್. ಅಕ್ಕಿ
೪೦ ಡೀ. ಸೀ. ಕುಲಕರ್ಣಿ
೪೧ ಡೀ. ಏ. ಮೋಟಿ

೪೨ ಎಸ್. ಜೀ. ಮಠದ
೪೩ ಪೀ. ಆರ್. ಸೊಡ್ಡಮನಿ
೪೪ ಶ್ರೀ. ಕಮಲಾಬಾಯಿ ಧಾರೇಶ್ವರ
೪೫ ಶ್ರೀ. ಪಾರ್ವತೆವ್ವ ಯಂಕಂಚಿ
೪೬ ಶ್ರೀ. ಚಿನ್ನವ್ವ ಮಾಯಕರ
೪೭ ಶ್ರೀ. ತಾಯವ್ವ ಸಂದನವಾಡ
೪೮ ಶ್ರೀ. ದೋಂಡುಬಾಯಿ ಚವಾಣ
೪೯ ಶ್ರೀ. ಪಾರ್ವತೆವ್ವ ಕುರುಡೀಕೇರಿ
೫೦ ಶ್ರೀ. ರಮಾಬಾಯಿ ರಿಸಬೂಡ
೫೧ ಶ್ರೀ. ರೇಣೂಬಾಯಿ ಒಂದಕುದರಿ
೫೨ ಶ್ರೀ. ತಾರಾಬಾಯಿ ನವಲೂರ
೫೩ ಶ್ರೀ. ಮುಲ್ಲವ್ವ ಮೂಲಿಮನಿ

ನಮ್ಮ ಮೈಸೂರು ಪ್ರವಾಸ

ಶ್ರೀ. ಗುರುನಾಥ ಜೋಶಿ, ಬಿ. ಎ., ಹಿಂದುಸ್ತಾನೀ ಅಧ್ಯಾಪಕ, ಟ್ರೇ. ಸ್ಕೂ. ಧಾರವಾಡ.

ಟ್ರೇನಿಂಗ್ ಕಾಲೇಜಿನ ನೂರೈದು ಶಿಕ್ಷಕ-ವಿದ್ಯಾರ್ಥಿಗಳ ದಳವು ಕಳೆದ ಅಕ್ಟೋಬರ ತಿಂಗಳಲ್ಲಿ ವಾಡಿಕೆಯಂತೆ ಹಿಂದುಸ್ತಾನದ ಎಲ್ಲ ಸಂಸ್ಥಾನಗಳಿಗಿಂತಲೂ ಹೆಚ್ಚು ಸರ್ವಾಂಗಸುಂದರವಾಗಿ ಪ್ರಗತಿಹೊಂದುತ್ತಿರುವ ಮೈಸೂರು ಸಂಸ್ಥಾನದ ಶೈಕ್ಷಣಿಕ ಪ್ರವಾಸವನ್ನು ಕೈಕೊಂಡಿತು. ಮೈಸೂರು ಸಂಸ್ಥಾನವು ಔದ್ಯೋಗಿಕ ದೃಷ್ಟಿಯಿಂದಲೂ ಶಿಕ್ಷಣದ ದೃಷ್ಟಿಯಿಂದಲೂ ಅತ್ಯಂತ ಮುಂದುವರಿದ ಸಂಸ್ಥಾನವು. ಅದನ್ನು ಕಣ್ಣಾರೆ ನೋಡಿ ಹೆಚ್ಚು ಸ್ಥಾಯಿಯಾದ ಶಿಕ್ಷಣವನ್ನು ಪಡೆಯುವ ಉದ್ದೇಶದಿಂದ ತಾ. ೧೩-೧೦-೧೯೩೯ ನೆಯ ದಿನ ಈ ದಳವು ಬೆಳಿಗ್ಗೆ ಹತ್ತುಗಂಟೆಗೆ ಕಾಲೇಜಿನ ಪ್ರಾಂಗಣವನ್ನು ಬಿಟ್ಟಿತು. ದಳದ ಕೂಡ ಕಾಲೇಜಿನ ಅಧ್ಯಾಪಕರಾದ ಶ್ರೀ. ವಿ. ಎಸ್. ನಾಡಕರ್ಣಿ, ಶ್ರೀ. ಆರ್. ಕೆ. ಮೆಣಶಿ, ಶ್ರೀ. ಜಿ. ಎಂ. ಜೋಶಿ ಅವರೂ ಪ್ರಾಕ್ಟಿಸಿಂಗ್ ಸ್ಕೂಲಿನ ಅಧ್ಯಾಪಕರಾದ ಶ್ರೀ. ಕೆ. ಎಸ್. ಪಾಟೀಲ, ಶ್ರೀ. ಎಚ್. ಜಿ. ಕಟ್ಟಿ ಅವರೂ ದಳದ ಆರೋಗ್ಯ ಕಾಪಾಡುವುದಕ್ಕಾಗಿ ಡಾ. ಆರ್. ಬಿ. ದೇಸಾಯಿಯವರೂ ಹೊರಟರು. ಈ

ದಳದ ನಾಯಕರು ಶ್ರೀ. ವಿ. ಎಸ್. ನಾಡಕರ್ಣಿಯವರು. ಈ ದಳವೂ ಈ ಮೊದಲು ಮೈಸೂರು ಯಾತ್ರೆಗೆ ಹೋದ ಎಲ್ಲ ದಳಗಳಂತೆಯೆ ಸಂದರ್ಶನೀಯವಾದ ಸ್ಥಳಗಳನ್ನು ನೋಡಿತು. ಆದರೆ ಈ ದಳಕ್ಕೆ ಎಲ್ಲ ದಳಗಳಿಗಿಂತ ಹೆಚ್ಚು ಅನುಭವವೂ ಜ್ಞಾನವೂ ಉಂಟಾದುವೆಂದು ಹೇಳಬಹುದು. ಸ್ವತಃ ಶ್ರೀ. ನಾಡಕರ್ಣಿಯವರು ವಿದ್ಯಾರ್ಥಿಗಳಿಗೆ ಅಲ್ಲಲ್ಲಿ ಕಾರಖಾನೆಗಳಲ್ಲಿ ಯಂತ್ರ ಸಾಮಗ್ರಿಗಳನ್ನು ತೋರಿಸಿ ಜ್ಞಾನವುಂಟಾಡಿಕೊಡುತ್ತಿದ್ದರು. ಅಲ್ಲದೆ ಅಲ್ಲಿಯ ತಜ್ಞರಿಂದಲೂ ಜ್ಞಾನವು ದೊರೆಯುತ್ತಿದ್ದಿತು. ಶಿಕ್ಷಣದ ದೃಷ್ಟಿಯಿಂದ ದಳವು ಸಂದರ್ಶಿಸಿದ ಸಂಸ್ಥೆಗಳಲ್ಲಿ ಹೆಸರುವಾಸಿಯಾದ ಟಾಟಾ ವಿಜ್ಞಾನ ಮಂದಿರವೂ, ಬೆಂಗಳೂರಿನ ವಾಟರ್‌ವರ್ಕ್ಸ್, ಸಾಬಾಣದ ಕಾರಖಾನೆ, ಗಂಧದ ಕಟ್ಟಿಗೆಯ ಕಾರಖಾನೆ, ಮೈಸೂರಿನ ಗಂಧದೆಣ್ಣೆಯ ಕಾರಖಾನೆ, ರೇಷ್ಮೆಯ ಕಾರಖಾನೆ, ಶಿವಸಮುದ್ರದ ವಿದ್ಯುತ್ ಕಾರಖಾನೆ, ಭದ್ರಾವತಿಯ ಕಬ್ಬಿಣದ ಕಾರಖಾನೆ, ಸಿಮೆಂಟು ಕಾರಖಾನೆ, ಕಾಗದ ಕಾರಖಾನೆ, ಮೊದಲಾದುವು ಮುಖ್ಯವಾದುವೆಂದು ಹೇಳಬಹುದು.

ಇವುಗಳಲ್ಲದೆ ಹರಿಹರೇಶ್ವರನ ದರ್ಶನ ತೆಗೆದುಕೊಂಡು ತುಮಕೂರಿನ ಮಾರ್ಗವಾಗಿ ಬೆಂಗಳೂರಿಗೆ ಹೋದ ದಳವು ಅಲ್ಲಿನ ಶೈಕ್ಷಣಿಕ ಸಂಸ್ಥೆಗಳನ್ನು ನೋಡಿದ್ದಲ್ಲದೆ ಮುಗಿಲಿಗೆ ಮುದ್ದಿಡುವ ಭವ್ಯವಾದ ಟಿಕ್ನಾಲಾಜಿಕಲ್ ಕಟ್ಟಡವನ್ನೂ ರಮ್ಯವಾದ ತೋಟಗಳನ್ನೂ ವಸ್ತುಸಂಗ್ರಹಾಲಯವನ್ನೂ ವಿಸ್ತೀರ್ಣವಾದ ಬಸವನ ಗುಡಿಯನ್ನೂ ಕನ್ನಡ ಸಾಹಿತ್ಯ ಪರಿಷತ್ತು, ಕೆ. ವಿ. ಅಯ್ಯರ್ ಅವರ ವ್ಯಾಯಾಮ ಮಂದಿರ, ಅಶೋಕಾ ಕಜೇರಿ ಮುಂತಾದುವುಗಳನ್ನೂ ನೋಡಿಕೊಂಡು ಮೈಸೂರಿಗೆ ಹೋಯಿತು. ದಾರಿಯಲ್ಲಿ ಶ್ರೀರಂಗಪಟ್ಟಣದ ಐತಿಹಾಸಿಕ ಕುರುಹುಗಳನ್ನೂ ನೋಡಿತು. ಮೈಸೂರಿನಲ್ಲಿ ಶ್ರೀಚಾಮುಂಡಿಯ ದರ್ಶನವನ್ನು ಪಡೆದು ಪ್ರಾಚೀನ ವೈಭವದ ಮಾದರಿಯಾಗಿ ಉಳಿದ ದಸರೆಯ ಮೆರವಣಿಗೆಯನ್ನೂ ಕಂಡಿತು. ಕೃಷ್ಣರಾಜಸಾಗರದ ಬಣ್ಣಬಣ್ಣದ ಕಾರಂಜಿಗಳಿಂದೆಸೆಯುವ ಮನೋಹರವಾದ ಬೃಂದಾವನವನ್ನೂ ಕನ್ನಂಬಾಡಿ ಅಣೆಕಟ್ಟನ್ನೂ ನೋಡಿಕೊಂಡು ಭದ್ರಾವತಿಗೆ ಹೊರಟಿತು. ದಾರಿಯಲ್ಲಿ ಕಲಾಕೌಶಲ್ಯದ ಆಗರಗಳಾದ ಹಳೇಬೀಡು, ಬೇಲೂರು, ಶ್ರವಣಬೆಳಗೊಳಗಳನ್ನು ಸಂದರ್ಶಿಸಿ ಭದ್ರಾವತಿಯನ್ನು ಮುಟ್ಟಿತು. ಭದ್ರಾವತಿಯ ಎಲ್ಲ ಕಾರಖಾನೆಗಳನ್ನು ನೋಡಿಕೊಂಡು ಜಗತ್ತಿನಲ್ಲಿ ಅದ್ವಿತೀಯವಾದ ದೃಶ್ಯವೆಂದು ಕೀರ್ತಿವೆತ್ತ ಗೆರುಸಪ್ಪೆಯ ಜಲಪ್ರಪಾತವನ್ನೂ ಬನವಾಸಿಯನ್ನೂ ನೋಡಿ ಆನಂದದಿಂದ ಸುರಕ್ಷಿತವಾಗಿ ತಾ. ೨೮-೧೦-೧೯೬೯ನೆಯ ದಿನ ರಾತ್ರಿ ಹನ್ನೆರಡು ಗಂಟೆಗೆ ಜಯಜಯಕಾರಗಳೊಡನೆ ಕಾಲೇಜಿನ ಪ್ರಾಂಗಣವನ್ನು ಪ್ರವೇಶಿಸಿತು.

ಈ ಮೊದಲು ಮೈಸೂರು ಪ್ರವಾಸಕ್ಕೆ ಹೋದ ದಳಗಳಿಗೆ ಸಿಕ್ಕದೆ ಇದ್ದ ಮತ್ತೆ ಕೆಲವು ಅಲಭ್ಯ ಲಾಭಗಳು ಈ ದಳಕ್ಕೆ ದೊರೆಯಿತು. ಉತ್ತರ ಕರ್ನಾಟಕದ ಪರವಾಗಿ ಮೈಸೂರು ಸ್ಕೌಟ್ ರ್ಯಾಲಿಯಲ್ಲಿ ಭಾಗವಹಿಸಿದ ದಳವು ಇದೇ ಮೊದಲನೆಯದು. ಅಂದಿನದಿನ ಶಿಕ್ಷಕ ವಿದ್ಯಾರ್ಥಿಗಳನ್ನು ಸ್ಕೌಟ್ ಸಮವಸ್ತ್ರದಲ್ಲಿ ಕಂಡು ಮೈಸೂರು ದಿವಾನರು ಆಡಿದ ಕನ್ನಡ ಮಾತುಗಳು ಸ್ಮರಣೀಯವಾದುವುಗಳು ‘‘ನಾವು ಮೈಸೂರಿನವರು, ನಾವು ಧಾರವಾಡದವರು ಎನ್ನುವ ಭಾವನೆಯು ತೊಲಗಿ ನಾವು ಒಂದೆಂಬ ಭಾವನೆಯು ನಮ್ಮಲ್ಲಿ ನೆಲೆಯೂರಿದರೆ ಕನ್ನಡನಾಡು ಒಂದಾಗಿ ಮುಂದುವರಿದ ಪ್ರಾಂತವೆಂದು ಮೇಲ್ಮೆಯನ್ನು ಪಡೆಯಬಹುದು. ಇದೇ ರೀತಿಯಾಗಿ ತಾವುಗಳು ಆಗಾಗ ಮೈಸೂರಿಗೆ ಬಂದು ಸ್ನೇಹಸಂಬಂಧವನ್ನು ಬೆಳೆಯಿಸಬೇಕು.’’ ಅಲ್ಲದೆ ಆದೇ ದಿನ ಜಾತಿಭೇದ, ಪಂಕ್ತಿಭೇದ, ದೇಶಭೇದಗಳನ್ನು ತೊರೆದು ಬಿಡುವುದರ ಬಗ್ಗೆ ಆಕ್ಕರೆಯಿಂದ ಅಂತಃಕರಣಪೂರ್ವಕವಾಗಿ ಶ್ರೀ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಆಡಿದ ಮಾತುಗಳನ್ನು ದಳವು ಎಂದಿಗೂ ಮರೆಯುವಂತಿಲ್ಲ. ಮೈಸೂರಿನಲ್ಲಿ ಮೈಸೂರು ನಗರ ಸಭೆಯ ವಿದ್ಯಾಧಿಕಾರಿಗಳ ಆಡಳಿತಕ್ಕೊಳಪಟ್ಟ ಶಾಲಾಧ್ಯಾಪಕರೂ ಅಧಿಕಾರಿಗಳೂ ನಮ್ಮ ದಳಕ್ಕೊಂದು ಸಂತೋಷಕೂಟವನ್ನೇರ್ಪಡಿಸಿ ಮಕ್ಕಳಿಂದ ಹಾವಭಾವಪೂರಿತ ಪದ್ಯಪಠನ, ನೃತ್ಯ ಮೊದಲಾದುವುಗಳನ್ನು ಮಾಡಿ ತೋರಿಸಿದರು. ಚಿಕ್ಕಮಕ್ಕಳು ಅಂದು ಆಂದ ಪದ್ಯಗಳು ಇನ್ನೂ ದಳದ ಕವಿಯಲ್ಲಿ ಮೆಲ್ಲುಲಿಯುತ್ತಿವೆ; ಚಿಕ್ಕ ಮಕ್ಕಳ ನಲ್ಬಂಗಿಗಳು ಕಣ್ಮುಂದೆ ಕಟ್ಟಿದಂತಿವೆ.

ಮೈಸೂರು ಸರಕಾರದವರು ದಳಕ್ಕೆ ಅಲ್ಲಲ್ಲಿ ಇಳಿದುಕೊಳ್ಳಲು ಅನುಕೂಲತೆಗಳನ್ನು ಮಾಡಿಕೊಟ್ಟರು. ಆದರೂ ಕೆಲೆವೆಡೆಗಳಲ್ಲಿ ಸ್ಥಳದ ಅನನುಕೂಲತೆಯೂ ಇತರ ಅನನುಕೂಲತೆಗಳೂ ಕೆಲಮಟ್ಟಿಗೆ ಉಂಟಾದರೂ ಪರಸ್ಥಳಗಳಲ್ಲಿ ಭಿನ್ನ ಭಿನ್ನ ಪ್ರಕೃತಿ-ಸ್ವಭಾವಗಳುಳ್ಳ, ಆಚಾರ-ವಿಚಾರಗಳುಳ್ಳ ಜನರ ಜೊತೆಗೆ ಹೇಗೆ ಕೂಡಿಕೊಂಡು, ಹೊಂದಿಕೊಂಡು ಹೋಗಬೇಕೆಂಬುದರ ಅನುಭವವೂ ಈ ದಳಕ್ಕೆ ಸಾಕಷ್ಟು ಉಂಟಾಯಿತೆಂದು ಹೇಳಬಹುದು. ಪ್ರವಾಸದಲ್ಲಿ ಹಗಲು ಹನ್ನೆರಡು ತಾಸು ಕೂಡಿ ಇರುವುದರಿಂದ ಅನೇಕರ ಲೋಪದೋಷಗಳೂ ಸದ್ಗುಣಗಳೂ ಕಂಡುಬರುವವು. ಆಗ ನಾವು ಅವನ್ನೆಲ್ಲ ನೋಡುತ್ತ ಕುಳಿತುಕೊಳ್ಳದೆ ಹೇಗೆ ಒಂದಾಗಿರಬೇಕೆಂಬುದರ ಅರಿವೂ ಉಂಟಾಗುವುದು. ಈ ದೃಷ್ಟಿಯಿಂದ ನೋಡಿದರೆ ಈ ದಳಕ್ಕೆ ಹೆಚ್ಚು ಅನುಭವವು ದೊರೆಯಿತೆಂದು ನಿರಾತಂಕವಾಗಿ ಹೇಳಬಹುದು.

ಪ್ರವಾಸದಿಂದ ಜ್ಞಾನ-ಅನುಭವಗಳನ್ನು ಪಡೆಯಲು ಸರ್ವ ಅನುಕೂಲತೆಗಳನ್ನು ನಮ್ಮ ಕಾಲೇಜಿನ ಮುಖ್ಯಾಧ್ಯಾಪಕರಾದ ಶ್ರೀ. ಆರ್. ಎಸ್. ವಡಿಮನ್ ಅವರು ಮಾಡಿಕೊಟ್ಟರು. ಮುಂಬೈ ಇಲಾಖೆಯ ದಕ್ಷಿಣಭಾಗದ ಶಿಕ್ಷಣಾಧಿಕಾರಿಗಳೂ ಅನೇಕ ಸಹಾಯ-ಸವಲತ್ತುಗಳನ್ನು ಒದಗಿಸಿಕೊಟ್ಟರು. ಮೈಸೂರು ಸರಕಾರದವರೂ ಹೋದ ಹೋದಲ್ಲಿ ಸಾಧ್ಯವಿದ್ದಷ್ಟು ಸಹಾಯವನ್ನು ಮಾಡಿದರು, ಆದರಾತಿಥ್ಯಗಳನ್ನು ತೋರಿಸಿದರು. ಇವರೆಲ್ಲರ ನೆರಹು-ನೇಹಗಳು ದೊರೆಯದೆ ಇದ್ದರೆ ಇಷ್ಟು ಜ್ಞಾನಾನುಭವವು ಈ ದಳಕ್ಕೆ ಒದಗುತ್ತಿರಲಿಲ್ಲ. ಆದ್ದರಿಂದ ಇವರೆಲ್ಲರಿಗೂ ಈ ದಳವು ಆದರಪೂರ್ವಕವಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸಿದೆ. ಇವರುಗಳಲ್ಲದೆ ತುಮಕೂರಿನ ಮುರಘಾರಾಜೇಂದ್ರ ಸ್ವಾಮಿಗಳು, ಸಿದ್ಧಗಂಗೆಯ ಸ್ವಾಮಿಗಳು, ಚಿತ್ರದುರ್ಗದ ಶ್ರೀಮನ್ನಿರಂಜನ ಮುರಘಾರಾಜೇಂದ್ರ ಸ್ವಾಮಿಗಳು, ದಳದ ಆರೋಗ್ಯವನ್ನು ಕಾಪಾಡಿದ ಡಾ॥ ಆರ್. ಬಿ. ದೇಸಾಯಿ ಅವರಿಗೂ ದಳಕ್ಕೆ ಅನೇಕ ಬಗೆಯಿಂದ ನೆರವಾದ ಇನ್ನಿತರ ಸಜ್ಜನರಿಗೂ ಈ ದಳವು ಅಂತಃಕರಣಪೂರ್ವಕವಾಗಿ ಅಭಿನಂದನೆಗಳನ್ನರ್ಪಿಸುತ್ತದೆ.

ಮುಂಬಯಿ ಸರಕಾರದ ಪ್ರಾಥಮಿಕ ಶಿಕ್ಷಣ ಸಮಿತಿ

ಸಮಿತಿಯು ಅಧಿಕಾರ ಮತ್ತು ಕಾರ್ಯಗಳು

ಮುಂಬಯಿ ತಾ. ೨೫

ಮುಂಬಯಿ ಇಲಾಖೆಯ ಪ್ರಾಥಮಿಕ ಶಿಕ್ಷಣದ ಕಾಯದೆಯಲ್ಲಿ ಇತ್ತೀಚೆಗೆ ತಿದ್ದುಪಡಿಯಾದ ಮೇರೆಗೆ ಸರಕಾರದವರು ಪ್ರಾಥಮಿಕ ಶಿಕ್ಷಣದ ಬಗ್ಗೆ ಒಂದು ಪ್ರಾಂತಿಕ ಸಮಿತಿಯನ್ನು ಏರ್ಪಡಿಸಿದ್ದಾರೆ.

ಈ ಸಮಿತಿಗೆ ಕೆಳಗಿನವರು ಸದಸ್ಯರಾಗಿ ಆರಿಸಿಬಂದಿದ್ದು ಅವರ ಅವಧಿಯು ೩ ವರ್ಷಗಳವರೆಗೆ ಇರುವದು.

ಪ್ರಾಂತದಲ್ಲಿಯ ಸ್ಕೂಲ್‌ಬೋರ್ಡುಗಳಿಂದ ಆರಿಸಲ್ಪಟ್ಟವರು:— ೧ ಮಹಾದೇವ ಕೃಷ್ಣ ದೇಶಪಾಂಡೆ, ೨ ಬಾಬುರಾವ ಗಣಪತರಾವ ಜಗತಾಪ, ೩ ದಿನಕರರಾವ ಸರ್ದೇಸಾಯಿ ದೇಸಾಯಿ, ೪ ಲಿಂಗರಡ್ಡಿ ರಾಮರಡ್ಡಿ ಮುಂಕಣಿ, ೫ ಅಬ್ದುಲ್ ಅಜೀಝು ಇಬ್ರಾಹಿಮ ಕಾಝಿ, ೬ ರಾಜಾರಾಮ ರಾಮಜಿ ಭೋಳೆ.

ಸರಕಾರದಿಂದ ನಿಯಮಿಸಲ್ಪಟ್ಟವರು:— ೧ ಸೌ. ಹಂಸಾ ಮೆಹತಾ, ೨ ಜೆ. ಪಿ. ನಾಯಿಕ ೩ ಆರ್. ವಿ. ಪರೊಳೆಕರ (ಸೆಕ್ರೆಟರಿ ಸ್ಕೂಲ್ಸ ಕಮೀಟಿ ಮುಂಬಯಿ ಮ್ಯುನಸಿಪಲ್ ಕಾರ್ಪೊರೇಶನ್) ೪ ಸಯ್ಯದ ನುರುಲ್ಲಾ, ಅಸಿಸ್ಟಂಟ ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್, ೫ ಎಲ್. ಆರ್. ದೇಸಾಯಿ ಎಜ್ಯುಕೇಶನಲ್ ಇನಸ್ಪೆಕ್ಟರ್ ಉತ್ತರ ಭಾಗ, ೬ ಎಸ್. ಆರ್. ತಾವಡೆ ಎಜ್ಯುಕೇಶನಲ್ ಇನಸ್ಪೆಕ್ಟರ್, ದಕ್ಷಿಣ ಭಾಗ.

ಈ ಸಮಿತಿಯು ಅಧಿಕಾರ ಮತ್ತು ಕಾರ್ಯಗಳು ಕೆಳಗಿನಂತಿರುವವು.

೧. ಪ್ರಾಥಮಿಕ ಶಿಕ್ಷಣದ ಸಂಘಟನೆ, ಪ್ರಸಾರ ಇವುಗಳ ಸಂಬಂಧದಲ್ಲಿ ವಿಚಾರ ಮಾಡಿ ಯೋಜನೆಗಳನ್ನು ಸೂಚಿಸುವದು ಮತ್ತು ಇಡಿ ಇಲಾಖೆಯಲ್ಲಿ ಬಳಕೆಯಲ್ಲಿದ್ದ ಶಿಕ್ಷಣ ಪದ್ಧತಿಯಲ್ಲಿ ಏಕಸೂತ್ರತೆಯುನ್ನುಂಟುಮಾಡುವದು.

೨. ಪ್ರಾಥಮಿಕಶಿಕ್ಷಣದ ಅಭ್ಯಾಸಪತ್ರಿಕೆಯಲ್ಲಿ ಸ್ಥಳಿಕ ಅವಶ್ಯಕತೆಗಳಿಗನುಗುಣವಾಗಿ ವ್ಯವಹಾರಿಕ ಶಿಕ್ಷಣವನ್ನು ಸೇರಿಸುವದು, ಎಕ್ಸಪೆರಿಮೆಂಟಲ್ ಸಾಯನ್ಸ, ವೂಡೆಲಿಂಗ್, ಪ್ರಕೃತಿ ವಿಮರ್ಶೆ, ಶಾರೀರಿಕ ಶಿಕ್ಷಣ, ಗೃಹಶಾಸ್ತ್ರ ಇವುಗಳ ವ್ಯವಸ್ಥೆ ಮಾಡುವದು, ಶಾರೀರಿಕ ಹಾಗೂ ನೈತಿಕ ಶಿಕ್ಷಣದ ಏರ್ಪಾಡು ಮಾಡುವದು, ಶಿಕ್ಷಕರ ಸಂಬಳ ಮತ್ತು ನೌಕರಿಯ ಕರಾರುಗಳನ್ನು ನಿಶ್ಚಯಿಸುವದು, ಪ್ರಾಥಮಿಕ ಶಾಲೆಗಳ ಆಡಳಿತ ಹಾಗೂ ವ್ಯವಸ್ಥೆಗಳನ್ನು ನಿಯಮಿತ ಪಡಿಸುವದು, ಬಡ ಹುಡುಗರಿಗೆ ಪುಸ್ತಕ, ಪಾಟಿ ಮತ್ತು ಶೈಕ್ಷಣಿಕ ಉಪಕರಣಗಳನ್ನು ಪೂರೈಸುವದು, ಮೇಲಿನ ವರ್ಗಗಳ ಹುಡುಗರಿಗೆ ಪ್ರಾಥಮಿಕ ಔದ್ಯೋಗಿಕ ಶಿಕ್ಷಣಕೊಡುವದು ಇವೇ ಮೊದಲಾದವುಗಳ ಬಗ್ಗೆ ಸರಕಾರಕ್ಕೆ ಸೂಚನೆ ಹಾಗೂ ಸಲಹೆ ಕೊಡುವದು.

೩. ಸಾಧಾರಣವಾಗಿ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಯಾವತ್ತು ವಿಷಯಗಳ ಬಗ್ಗೆ ಸರಕಾರಕ್ಕೆ ಸಲಹೆಕೊಡುವದು.

ಸಮಿತಿಯ ಕಚೇರಿಯು ಸದ್ಯಕ್ಕೆ ಪುಣೆಯಲ್ಲಿ ಉಳಿಯುವುದು. ಸಮಿತಿಯವರು ತಮ್ಮ ಅಧ್ಯಕ್ಷರನ್ನು ಆ ಮೆಂಬರರಲ್ಲಿ ಆರಿಸಿಕೊಳ್ಳಬೇಕು. ಶ್ರೀ ಸಯ್ಯದ ನುರುಲ್ಲಾ ಅವರು ಕಮೀಟಿಯ ಸೆಕ್ರೆಟರಿಗಳಾಗುವರು.

ಗಂಡುಮಕ್ಕಳ ಪ್ರೈಮರಿಸ್ಕೂಲು ಲೀವ್ಸಿಂಗ್ ಸರ್ಟಿಫಿಕೇಟ ಪರೀಕ್ಷೆ ೧೯೪೦

೧, ಈ ಪರೀಕ್ಷೆಯು ಈ ವರ್ಷ ಕೆಳಗೆ ಕಾಣಿಸಿದ ಕೇಂದ್ರಗಳಲ್ಲಿ ೧೯೪೦ ನೆಯ ಏಪ್ರೀಲ ೧೯೪೦ ನೆಯ ದಿವಸ ಸೋಮವಾರ ಹಾಗೂ ಅದರ ಮುಂದಿನ ದಿವಸ ಗಳಲ್ಲಿ ನಡೆಯುವದು.

೧. **ಧಾರವಾಡ**— ೧. ಧಾರವಾಡ. ೨. ಗದಗ. ೩. ಹುಬ್ಬಳ್ಳಿ. ೪. ಹಾವೇರಿ.

೨. **ಬೆಳಗಾಂವ**— ೧. ಬೆಳಗಾಂವ. ೨. ಚಿಕ್ಕೋಡಿ. ೩. ಗೋಕಾಕ.

೩. **ವಿಜಾಪೂರ**—೧. ವಿಜಾಪುರ. ೨. ಬಾಗಲಕೋಟಿ,

೪. **ಕಾರವಾರ**— ೧. ಕಾರವಾರ.

೫. **ಕೊಲ್ಹಾಪುರ** (ಸಂಸ್ಥಾನ)— ೧೧. ಕೊಲ್ಹಾಪುರ

ಟಪ್ಪಣಿ :—

೧. ಧಾರವಾಡ ಜಿಲ್ಹೆಯ ಗದಗ, ನವಲಗುಂದ, ರೋಣ ತಾಲೂಕುಗಳ ಮತ್ತು ಸಂಸ್ಥಾನಗಳಲ್ಲಿ ಶಿರಹಟ್ಟಿ ಲಕ್ಷ್ಮೇಶ್ವರ ತಾಲೂಕಗಳ ಉಮೇದವಾರರು ಗದಗ ಸೆಂಟರಿನಲ್ಲಿ ಪರೀಕ್ಷೆಗೆ ಕೂಡತಕ್ಕದ್ದು.

೨. ಧಾರವಾಡ ಜಿಲ್ಹೆಯ ಕರಜಗಿ, ಕೋಡ, ರಾಣೇಬೆನ್ನೂರ ಮತ್ತು ಹಾನಗಲ್ ತಾಲೂಕಗಳ ಉಮೇದವಾರರು ಹಾವೇರಿ ಸೆಂಟರಿನಲ್ಲಿ ಪರೀಕ್ಷೆಗೆ ಕೂಡತಕ್ಕದ್ದು.

೩. ಧಾರವಾಡ ಜಿಲ್ಹೆಯ ಎಲ್ಲ ಉರ್ದು ಉಮೇದವಾರರು ಹುಬ್ಬಳ್ಳಿ ಸೆಂಟರಿನಲ್ಲಿ ಪರೀಕ್ಷೆಗೆ ಕೂಡತಕ್ಕದ್ದು.

೪. ಧಾರವಾಡ ಜಿಲ್ಹೆಯ ಉಳಿದ ಎಲ್ಲ ಉಮೇದವಾರರು (ಅಗ್ರಿಕಲ್ಚರಲ್ ಬಾಯಸದ ಉಮೇದವಾರರು ಸಹ) ಧಾರವಾಡ ಸೆಂಟರಿನಲ್ಲಿ ಪರೀಕ್ಷೆಗೆ ಕೂಡತಕ್ಕದ್ದು.

೫. ಬೆಳಗಾವಿ ಜಿಲ್ಹೆಯ ಅಥಣಿ ಗೋಕಾಕ ತಾಲೂಕಗಳ ಉಮೇದವಾರರು ಗೋಕಾಕ ಸೆಂಟರಿನಲ್ಲಿಯೂ ಚಿಕ್ಕೋಡಿ ತಾಲೂಕಿನ ಉಮೇದವಾರರಷ್ಟೇ ಚಿಕ್ಕೋಡಿ ಸೆಂಟರಿನಲ್ಲಿಯೂ ಜಿಲ್ಹೆಯ ಉಳಿದ ಉಮೇದವಾರರು (ಅಗ್ರಿಕಲ್ಚರಲ್ ಬಾಯಸ್ ಉಮೇದವಾರರು ಸಹ) ಬೆಳಗಾವಿ ಸೆಂಟರಿನಲ್ಲಿಯೂ ಪರೀಕ್ಷೆಗೆ ಕೂಡಬೇಕು.

೬. ವಿಜಾಪುರ ಜಿಲ್ಹೆಯ ಬಾಗಲಕೋಟಿ, ಹುನಗುಂದ, ಬಾದಾಮಿ, ಮುದ್ದೇಬಿಹಾಳ ತಾಲೂಕುಗಳ ಹಾಗೂ ಜಮಖಿಂಡಿ, ಮುಧೋಳ

ರಾಮದುರ್ಗ ಸಂಸ್ಥಾನಗಳ ಎಲ್ಲ ಕನ್ನಡ ಉಮೇದವಾರರು ಬಾಗಲ ಕೋಟಿ ಸೆಂಟರಿನ ಪರೀಕ್ಷೆಗೆ ಕೂಡ್ರಬೇಕು. ವಿಜಾಪುರ ಜಿಲ್ಲೆಯ ಮಿಕ್ಕ ಕನ್ನಡ, ಮರಾಠಿ, ಉರ್ದು, ಆಗ್ರಿಕಲ್ಚರಲ್ ಬಾಯಸದ ಎಲ್ಲ ಉಮೇದವಾರರು ವಿಜಾಪುರ ಸೆಂಟರಿನಲ್ಲಿ ಪರೀಕ್ಷೆಗೆ ಕೂಡಬೇಕು.

೭. ಕಾರವಾರ ಜಿಲ್ಲೆಯ ಹಳಿಯಾಳ ತಾಲೂಕಿನ ಹಾಗೂ ಶಿರಸಿ ತಾಲೂಕಿನ ಬನವಾಸಿ ಊರಿನ ಉಮೇದವಾರರು, ಧಾರವಾಡ ಸೆಂಟರಿನಲ್ಲಿಯೂ ಸಾಂಗಲಿ ಸಂಸ್ಥಾನದ ಕೂಚಿ ತಾಲೂಕಿನ ಉಮೇದವಾರರು ಸಾತಾರಾ ಸೆಂಟರಿನಲ್ಲಿಯೂ ಪರೀಕ್ಷೆಗೆ ಕೂಡ್ರಬೇಕು. ಔಂಧ ಸಂಸ್ಥಾನದ ಗುಂಡಳ ತಾಲೂಕಿನ ಉಮೇದವಾರರು ವಿಜಾಪುರ ಸೆಂಟರಿನಲ್ಲಿ ಪರೀಕ್ಷೆಗೆ ಕೂಡಬೇಕು.

೨. ಈ ಪರೀಕ್ಷೆಯು ಮುಂಬಯಿ ಗವ್ಹರ್ನಮೆಂಟ ಗ್ಯಾಝೀಟಿನ ವಿದ್ಯಾಖಾತೆಯ ನೋಟಿಫಿಕೇಶನ್ನಿನ ೨೨೮೮ ನೆಯ ನಂಬರಿನ ೧೯-೯-೧೯೨೮ ತಾರಿಖಿನ ಹಾಗೂ ೨೯-೭-೧೯೨೯ ಮತ್ತು ೧೪-೩-೧೯೩೦; ೩-೮-೧೯೩೧; ೨೧-೬-೧೯೩೮ ತಾರೀಖುಗಳ ಮುಂಬಯಿ ಗ್ಯಾಝೀಟಿನ ಭಾಗ ೧ ರ $\frac{೧೯೬೮}{೨೦-೯-೧೯೨೮}$, $\frac{೧೯೬೩}{೧-೮-೧೯೨೯}$, $\frac{೬೨೭}{೩-೪ ೧೯೩೦}$, $\frac{೧೭೮೪}{೬-೮-೧೯೩೧}$, $\frac{೧೨೩೨-೩೩}{೨೩-೬-೧೯೩೮}$ ನೆಯ ಪುಟಗಳಲ್ಲಿ ಪ್ರಸಿದ್ಧಿಸಿದ ನಿಯಮಗಳ ಮೇರೆಗೆ ನಡೆಯಿಸಲ್ಪಡುವದು.

೩. ಮೇಲೆ ಹೇಳಿದ ಪ್ರತಿಯೊಂದು ಸೆಂಟರಿನಲ್ಲಿ ಒಂದೊಂದು ಪರೀಕ್ಷಾ ಕವಿಟಿಯು ಇರುವದು. ಹಾಗೂ ಆ ಕವಿಟಿಯ ಪ್ರೆಸಿಡೆಂಟರು ಕೆಳಗೆ ಬರೆದ ಪ್ರಕಾರ ಇರುವರು.

೧. **ಧಾರವಾಡ** ಕೇಂದ್ರ— ಧಾರವಾಡ ಗವ್ಹರ್ನಮೆಂಟ್ ಹೈಸ್ಕೂಲಿನ ಹೆಡ್‌ಮಾಸ್ತರರು, ಧಾರವಾಡ.

೨. **ಗದಗ** ಕೇಂದ್ರ— ಧಾರವಾಡ ಜಿಲ್ಲೆಯ ಸೀನಿಯರ ಅಸಿ. ಡೆ. ಎ. ಇನಸ್ಪೆಕ್ಟರರು, ಧಾರವಾಡ.

೩. **ಹುಬ್ಬಳ್ಳಿ** ಕೇಂದ್ರ— ಆಂಗ್ಲೋ ಉರ್ದು ಹೈಸ್ಕೂಲಿನ ಹೆಡ್-ಮಾಸ್ತರರು, ಹುಬ್ಬಳ್ಳಿ.

೪. **ಹಾವೇರಿ** ಕೇಂದ್ರ— ಧಾರವಾಡದ ಟ್ರೇನಿಂಗ ಸ್ಕೂಲಿನ ಹೆಡ್-ಮಾಸ್ತರರು, ಧಾರವಾಡ.

೫. **ಬೆಳಗಾಂವ** ಕೇಂದ್ರ— ಬೆಳಗಾವಿಯ ಸರಕಾರೀ ಹೈಸ್ಕೂಲಿನ ಹೆಡ್‌ಮಾಸ್ತರರು, ಬೆಳಗಾವಿ.

೬. **ಚಿಕ್ಕೋಡಿ** ಕೇಂದ್ರ— ಬೆಳಗಾವಿ ಜಿಲ್ಲೆಯ ಸೀನಿಯರ ಅಸಿ. ಡೆ. ಎ. ಇನಸ್ಪೆಕ್ಟರರು, ಬೆಳಗಾವಿ.

೭. **ಗೋಕಾಕ** ಕೇಂದ್ರ— ದಕ್ಷಿಣಭಾಗದ ಉರ್ದು ಸ್ಕೂಲು ಗಳ ಡೆಪ್ಯೂಟಿ ಎಜ್ಯೂಕೇಶನಲ್ ಇನ್‌ಸ್ಪೆಕ್ಟರರು, ಧಾರವಾಡ.

೮. **ವಿಜಾಪುರ** ಕೇಂದ್ರ— ಹೆಡ್‌ಮಾಸ್ತರ ಗವ್ಹರ್ನಮೆಂಟ ಹೈಸ್ಕೂಲು ವಿಜಾಪುರ.

೯. **ಬಾಗಲಕೋಟೆ** ಕೇಂದ್ರ— ವಿಜಾಪುರ ಜಿಲ್ಲೆಯಸೀನಿಯರ ಅಸಿ. ಡೆ. ಎ. ಇನಸ್ಪೆಕ್ಟರರು, ವಿಜಾಪುರ.

೧೦. **ಕಾರವಾರ** ಕೇಂದ್ರ— ಕಾರವಾರದ ಸರಕಾರೀ ಹೈಸ್ಕೂಲಿನ ಹೆಡ್‌ಮಾಸ್ತರರು, ಕಾರವಾರ.

೧೧ **ಕೊಲ್ಹಾಪುರ** ಕೇಂದ್ರ— ಇನ್‌ಸ್ಪೆಕ್ಟರ ಆಫ್ ಪ್ರೈಮ್ಮರಿ ಎಜ್ಯೂಕೇಶನ್ ಕೊಲ್ಹಾಪುರ ಸಂಸ್ಥಾನ, ಕೊಲ್ಹಾಪುರ.

೪. ಪರೀಕ್ಷೆಗೆ ಕೂಡ್ರಲಿಚ್ಛಿಸುವ ಉಮೇದವಾರರು ತಾವು ಪರೀಕ್ಷೆಗೆ ಕೂಡ್ರುವ ಸೆಂಟರಿನ ಪರೀಕ್ಷಾ ಕಮೀಟಿಯ ಪ್ರೆಸಿಡೆಂಟರ ಕಡೆಗೆ ತಾರೀಖು ೧-೩-೧೯೪೦ ನೆಯ ದಿವಸ ಅಥವಾ ಅದಕ್ಕೂ ಮೊದಲು ಅವರಿಗೆ ಮುಟ್ಟುವಂತೆ ಪರೀಕ್ಷೆಯ ಪರವಾನಗಿಯ ಬಗ್ಗೆ ಗೊತ್ತಾದ ಥಾಪೀ ನಮೂನೆಯ ಮೇಲೆ ಅರ್ಜಿಯನ್ನು ಕಳಿಸತಕ್ಕದ್ದು. ೧-೩-೧೯೪೦ ರ ತರುವಾಯ ಬಂದ ಅರ್ಜಿಯನ್ನು ಹಿಡಿಯಲಿಕ್ಕಿಲ್ಲ. ಯಾವದೊಂದು ಬ್ರಿಟಿಶ ಜಿಲ್ಲೆಯಲ್ಲಿ ಪರೀಕ್ಷೆಗೆ ಕೂಡ್ರಲಿಚ್ಛಿಸುವ ದೇಶಿಯ ಸಂಸ್ಥಾನಗಳ ಉಮೇದವಾರರು ಆಯಾ ಸಂಸ್ಥಾನಗಳ ಯೋಗ್ಯ ಅಧಿಕಾರ ಸ್ಥರ ಮುಖಾಂತರ ತಮ್ಮ ಅರ್ಜಿಯನ್ನು ಕಳಿಸತಕ್ಕದ್ದು. ಪ್ರತಿಯೊಂದು ಅರ್ಜಿಯಲ್ಲಿ ಉಮೇದವಾರನ ಪೂರ್ಣ ಹೆಸರು, ಹಾಗೂ ಆತನು ಯಾವದೊಂದು ಸಾಲೆಯಿಂದ ಪರೀಕ್ಷೆಗೆ ಬಂದಿದ್ದರೆ ಆ ಸಾಲೆಯ ಹೆಸರು ಇರಲಿಕ್ಕೆ ಬೇಕು. ಅರ್ಜಿಯು ಸಂಗಡಲೆ ೩ ರೂ. ಪರೀಕ್ಷೆಯ ಫೀಯನ್ನು ಸಹ ಕಳಿಸಲೇಬೇಕು. ಎಬೋರಿಜನಲ್ ಪುತ್ತ್ರಾ ಗುಡ್ಡಗಾಡು ಪಂಗಡಗಳ ಜನರನ್ನೊಳಗೊಂಡ ಹಿಂದುಳಿದ ವರ್ಗದ ಎಲ್ಲ ಉಮೇದವಾರರು, ೧ ರೂ. ಫೀ ಕಳುಹಿಸಿದರೆ ಸಾಕು. ಸಂಪೂರ್ಣ ಮಾಹಿತಿ ತುಂಬದೇ ಇದ್ದ ಅರ್ಜಿಯೂ, ಫೀಯನ್ನು ಕಳಿಸದೆ ಇದ್ದ ಅರ್ಜಿಯೂ, ಅರ್ಜಿಯಿಲ್ಲದೆ ಕಳಿಸಿದ ಫೀ ಹಣವೂ, ಯಾವ ನೆವವನ್ನೂ ಕೇಳದೆ ತಿರಸ್ಕರಿಸಲ್ಪಡುವವು. ಅರ್ಜಿಯ ನಮೂನೆಗಳು, ಪರೀಕ್ಷಾ ಕಮೀಟಿಯ ಪ್ರೆಸಿಡೆಂಟರ ಕಡೆಗೆ ದೊರೆಯುವವು. ಬೇಕಾದವರು ತರಿಸಿಕೊಳ್ಳಬಹುದು. ಇವಕ್ಕೆ ರೊಕ್ಕ ಕೊಡಬೇಕಾಗುವದಿಲ್ಲ.

೫. ಪರೀಕ್ಷೆಗೆ ಕೂಡ್ರಲಿಚ್ಚಿಸುವ ಉಮೇದವಾರರ ವಯಸ್ಸು ೧-೪-೧೯೪೦ಕ್ಕೆ ೨೫ ವರ್ಷ ಮಿಕ್ಕಿರಬಾರದು. ತಾವು ಯಾವ ಜಿಲ್ಲೆಯಲ್ಲಿ ಪರೀಕ್ಷೆಗೆ ಕೂಡ್ರಲಿಚ್ಚಿಸುವರೋ ಆ ಜಿಲ್ಲೆಯಲ್ಲಿ ಅವರು ಅದಕ್ಕೂ ಹಿಂದೆ ೬ ತಿಂಗಳು ವಾಸ ವಾಗಿರಬೇಕು. ಅಪ್ರಕಾರ ವಾಸವಾಗಿದ್ದ ಬಗ್ಗೆ ಯಾವದಾದರೊಂದು ರಿಜಿಸ್ಟ್ರೇಶನ್ ಆಯಿರುವ ಸಾಲೆಯ ಹೆಡ್‌ಮಾಸ್ತರರ ಸರ್ಟಿಫಿಕೇಟನ್ನು ಹಾಜರ ಪಡಿಸಬೇಕು. ಎಂದೂ ಸಾಲೆಗೆ ಹೋಗದೆ ಇದ್ದ ಉಮೇದವಾರರು ಈ ಬಗ್ಗೆ ಸರಕಾರದಿಂದ ಮಾನ್ಯವಾದ ಸಾಲೆಯ ಮಾಸ್ತರನ ಇಲ್ಲವೆ ಪಾಟೀಲರಿಗಿಂತ ಕಡಿಮೆ ದರ್ಜೆಯಿಲ್ಲದ **ಸರಕಾರೀ ನೌಕರನ** ಸರ್ಟಿಫಿಕೇಟನ್ನು ಹಾಜರ ಮಾಡಬೇಕು.

೬. ಧಾರವಾಡ ಕಾರವಾರ ಜಿಲ್ಲೆಗಳ ದೇಶಭಾಷೆಯು ಕನ್ನಡವೆಂದೂ ವಿಜಾಪುರ ಬೆಳಗಾವಿ ಜಿಲ್ಲೆಗಳ ದೇಶಭಾಷೆಗಳು ಕನ್ನಡ ಹಾಗೂ ಮರಾಠಿ ಎಂದೂ, ಕೊಲ್ಲಾಪೂರ ಸಂಸ್ಥಾನದ ದೇಶಭಾಷೆಯು ಮರಾಠಿ ಎಂದೂ ಎಣಿಸಲ್ಪಟ್ಟಿವೆ. ಧಾರವಾಡ ಹಾಗೂ ಕಾರವಾರ ಜಿಲ್ಲೆಗಳಿಂದ ಮರಾಠಿ ಭಾಷೆಯಲ್ಲಿ ಪರೀಕ್ಷೆಗೆ ಕೂಡ್ರುವ ಉಮೇದವಾರರು ಬೆಳಗಾವಿ ಸೆಂಟರಿನಲ್ಲಿ ಪರೀಕ್ಷೆಗೆ ಕೂಡ್ರಬೇಕು.

೭. ಈ ಪರೀಕ್ಷೆಯ ವಿಷಯಗಳೇ ಮೊದಲಾದ ಮಿಕ್ಕ ಎಲ್ಲ ವಿವರಗಳು ಮೇಲೆ ಎರಡನೆಯ ಪ್ಯಾರಾದಲ್ಲಿ ಬರೆದ ಗ್ಯಾಝೆಟಿನ ಪುಟಗಳಲ್ಲಿ ಪ್ರಕಟವಾಗಿವೆ.

೮. ಶೇತಕೀ ವಿಷಯವನ್ನು ಆರಿಸಿಕೊಂಡ ಉಮೇದವಾರರ (ಅಗ್ರಿಕಲ್ಚರಲ್ ಬಾಯಸ್) ಪ್ರಾ. ಸ್ಕೂ. ಲಿ. ಸ. ಪರೀಕ್ಷೆಯೂ ಸಹ ಇವೇ ತಾರೀಖುಗಳ ದಿವಸ ಧಾರವಾಡ, ವಿಜಾಪುರ, ಬೆಳಗಾವಿ, ಕಾರವಾರ ಈ ಕೇಂದ್ರಗಳಲ್ಲಿ ಪಾತ್ರ ನಡೆಯುವದು. ಈ ಪರೀಕ್ಷೆಯು $\frac{೧೧೯೯}{೬-೭-೧೯೩೫}$ ನೆಯ ನಂಬರಿನ ಸರಕಾರೀ ಠರಾವಿನ ಮತ್ತು $\frac{೧೧೯೯}{೯-೬-೧೯೩೮}$ ನೆಯ ನಂಬರಿನ ಮತ್ತು $\frac{೩೫೫೮}{೨೧-೬-೧೯೩೯}$ ನೆಯ ನಂಬರಿನ ಸರಕಾರೀ ಠರಾವುಗಳಲ್ಲಿ ತಿದ್ದುಪಡಿ ಹೊಂದಿದ ನಿಯಮಗಳ ಮೇರೆಗೆ ನಡೆಯುವದು. ಈ ಪರೀಕ್ಷೆಗೆ ಕೂಡ್ರಲಿಚ್ಚಿಸುವ ಉಮೇದವಾರರು ಪರೀಕ್ಷೆಯ ಪರವಾನಗಿ ಅರ್ಜಿಯ ಸಂಗಡ ತಾವು ಅಗ್ರಿಕಲ್ಚರಲ್ ಬಾಯಸ್ ಅಭ್ಯಾಸದ ಮೂರು ವರ್ಷದ ಅಭ್ಯಾಸ ಕ್ರಮವನ್ನು ಪೂರೈಸಿರುವ ಬಗ್ಗೆ ಸರ್ಟಿಫಿಕೇಟನ್ನು **ಕಳಿಸಬೇಕು.**

ಎಜ್ಯುಕೇಶನಲ್ ಇನ್‌ಸ್ಪೆಕ್ಟರ್
ದ. ಭಾಗ ಇವರ ಆಫೀಸು
ಧಾರವಾಡ ತಾ. ೧೫-೧೦-೧೯೪೦

S. R. Tawde,
ಎ. ಇ. ದ. ಭಾಗ.

ಪ್ರಾಯಮರಿ ಸ್ಕೂಲ್ ಲೀವ್ವಿಂಗ್ ಸರ್ಟಿಫಿಕೇಟ ಪರೀಕ್ಷೆಯ ಪರಿಣಾಮ, ೧೯೩೯.

ಸನ್ ೧೯೩೯ ನೆಯ ಎಪ್ರೀಲ್ ತಿಂಗಳಲ್ಲಿ ದಕ್ಷಿಣ ಭಾಗದೊಳಗಿನ ಬೇರೆ ಬೇರೆ ಕೇಂದ್ರಗಳಲ್ಲಿ ನಡೆದ ಪ್ರಾಯಮರಿ ಸ್ಕೂಲ್ ಲಿವ್ವಿಂಗ ಸರ್ಟಿಫಿಕೇಟ ಪರೀಕ್ಷೆಯಲ್ಲಿ ಪಾಸಾದ ಉಮೇದವಾರರ ಯಾದಿಯು.

ಧಾರವಾಡ ಕೇಂದ್ರ

ಅ. ನಂ.	ಹೆಸರು	ಗುಣಗಳು
೫	ಅಚ್ಯುತ ಗುರುನಾಥ ನಾಡಿಗೇರ	೨೮೪
೭	ಆನಂದ ಬಸಪ್ಪ ಬೆಂಡಿಗೇರಿ	೨೧೨
೧೦	ಅನಂತ ಕೃಷ್ಣಾಜಿ ಕುಲಕರ್ಣಿ	೨೮೯
೧೧	ಅನಂತ ನರಸಿಂಹಾಚಾರ್ಯ ರಾಯಚೂರ	೨೬೪
೧೩	ಅಣ್ಣು ಜೀವಣವರಾವ ಕುಲಕರ್ಣಿ	೨೬೪
೨೧	ಬಾಳಾಜಿ ಕೃಷ್ಣರಾವ ಮೊರೆಪ್ಪನವರ	೨೫೯
೨೩	ಬಾಳಕೃಷ್ಣ ತಿರುಮಲ ಕುಲಕರ್ಣಿ	೨೭೬
೨೪	ಬಾಳಕೃಷ್ಣ ವೆಂಕಟೇಶ ಕುಲಕರ್ಣಿ	೨೮೩
೨೯	ಬಸನಗೌಡ ಚೆನ್ನಪ್ಪಗೌಡ ಮರಿಗೌಡರ	೨೪೪
೩೦	ಬಸನಗೌಡ ಗದ್ದಿಗೌಡ ಸಿದ್ದನಗೌಡ	೨೭೪
೩೩	ಬಸನಗವಡಾ ವೀರನಗವಡಾ ಕುದರಿ	೨೨೫
೩೭	ಬಸಪ್ಪ ಗದಿಗೆಪ್ಪ ಹಸನಬಾದಿ	೨೬೪
೩೯	ಬಸಪ್ಪ ಹನುಮಪ್ಪ ಮೇಲಿನಮನಿ	೨೩೭
೪೧	ಬಸಪ್ಪ ಹುಚ್ಚಪ್ಪ ಅಗ್ಗದ	೨೨೨
೪೬	ಬಸಪ್ಪ ಪರಪ್ಪ ಬ್ಯಾಲಮ್ಮನವರ	೨೬೬
೪೯	ಬಸಪ್ಪ ಸಿದ್ದಪ್ಪ ಮೇಲ್ಮಾಳಗಿ	೨೮೧
೫೦	ಬಸಪ್ಪ ಸಿದ್ದಲಿಂಗಪ್ಪ ಹುಬ್ಬಳ್ಳಿ	೨೨೬
೫೩	ಬಸಪ್ಪ ವೀರಬಸಪ್ಪ ಜಾಡರ	೨೫೫

೫೫	ಬಸಪ್ಪ ವೀರಭದ್ರಪ್ಪ ಆಯೆಟ್ಟಿ	೨೬೫
೫೮	ಬಸವಣ್ಣೆಪ್ಪ ಎಲ್ಲಪ್ಪ ಕರಡೀಗುಡ್ಡ	೨೫೨
೫೯	ಬಸವಣ್ಣೆಪ್ಪ ಬಸಪ್ಪ ಕಡಕೋಳ	೨೪೫
೬೧	ಬಸಪ್ಪ ಮರಿತಮ್ಮಪ್ಪ ಅಂಗಡಿ	೨೫೦
೬೨	ಬಸವಣ್ಣೆಪ್ಪ ನಿಂಗಪ್ಪ ಹೂಗಾರ	೨೮೭
೬೪	ಬಸವಣ್ಣೆಪ್ಪ ಶಿವಪ್ಪ ಹುಬ್ಬಳ್ಳಿ	೨೪೩
೬೮	ಬಸವಂತಪ್ಪ ದರಿಯಪ್ಪ ಸಿರಿಯಣ್ಣವರ	೨೩೧
೬೯	ಬಸವಂತಪ್ಪ ದೇವಣಪ್ಪ ಬಿಲ್ಲದ	೨೨೧
೭೮	ಭೀಮನಗೌಡ ಪರ್ವತಗೌಡ ಶಿವನಗೌಡರ	೨೬೪
೮೩	ಭೀಮಪ್ಪ ಫಕೀರಪ್ಪ ಬಾಲೇಹೊಸೂರ	೩೨೧
೮೫	ಭೀಮು ಹನಮಪ್ಪ ಪವಾರ	೨೫೯
೮೭	ಬೋಧರಾವ ನಾರಾಯಣರಾವ ಮುತಾಲಿಕದೇಸಾಯಿ	೩೬೩
೧೦೧	ಚೆನಬಸನಗೌಡ ಲಿಂಗನಗೌಡ ಜಕ್ಕನಗೌಡ	೨೭೦
೧೧೦	ಚೆನ್ನಬಸಪ್ಪ ವಿರುಪಾಕ್ಷಪ್ಪ ವಾಂಗಿ	೨೩೮
೧೧೧	ಚೆನ್ನಯ್ಯ ಬಸವಣ್ಣೆಯ್ಯ ಕುಂದಗೋಳ	೨೫೯
೧೧೫	ಚಿಕ್ಕನಗೌಡ ಗಿಡ್ಡನಗೌಡ ಪಾಟೀಲ	೨೮೧
೧೧೭	ಚೆನ್ನಪ್ಪಗೌಡ ಗೌಡಪ್ಪಗೌಡ ಪಾಟೀಲ	೨೬೦
೧೨೬	ದತ್ತಾರಾಮ ಏಕನಾಥ ಶೆಟ್ಟಿ	೨೩೮
೧೩೫	ದಿಂಗಾಲೆಪ್ಪ ಬಸಪ್ಪ ಉಪ್ಪಿನ	೨೫೧
೧೩೯	ದೇವಸಿಂಗ ಗೋವಿಂದಸಿಂಗ ರಜಪೂತ	೨೬೫
೧೪೦	ದಾವಿದ ಬುದ್ಧಪ್ಪ ಮುರಡಿ	೨೮೫
೧೪೩	ಡೋಂಗ್ರೀಸಾಬ ಪುಂಡಲೀಕ	೨೯೯
೧೫೬	ಎಲ್ಲಪ್ಪ ಗಂಗಪ್ಪ ತೋಟಗಿ	೨೫೧
೧೫೮	ಎಲ್ಲಪ್ಪ ಫಕೀರಪ್ಪ ಚಲವಾದೇರ	೨೬೨
೧೬೦	ಎಲ್ಲಪ್ಪಗೌಡ ಫಕೀರಗೌಡ ಭೀಮನಗೌಡರ	೨೬೩
೧೬೫	ಫಕರುದ್ದೀನಸಾಬ ಮಹಮ್ಮದಸಾಬ ಕಾಕರ	೨೮೩
೧೬೬	ಫಕೀರ ಎಲ್ಲಪ್ಪ ಕರಡೀಗುಡ್ಡ	೨೪೧
೧೬೭	ಫಕೀರಗೌಡ ಹನುಮಂತಗೌಡ ಪಾಟೀಲ	೨೭೬
೧೬೯	ಫಕೀರಪ್ಪ ಬಸಪ್ಪ ಹಡಪದ	೨೭೫
೧೭೧	ಫಕೀರಪ್ಪ ಮಲ್ಲಪ್ಪ ಅಸುಂಡಿ	೨೫೬

೧೭೮	ಗದಿಗೆಪ್ಪ ಬಸಪ್ಪ ಮಡ್ಡಿ	೩೧೫
೧೭೧	ಗದಿಗೆಪ್ಪ ವೀರಭದ್ರಪ್ಪ ಕಂಟೆಪ್ಪನವರ	೩೧೦
೧೭೩	ಗದಿಗೆಯ್ಯ ವೀರಯ್ಯ ಆರದ್ರಿಮಠ	೩೧೭
೧೭೪	ಗಣಪತಿ ಚಿಕ್ಕಪ್ಪ ಪಾಟೀಲ	೨೭೪
೧೭೫	ಗಣೇಶ ಅನಂತರಾವ ಕುಲಕರ್ಣಿ	೩೨೦
೧೭೬	ಗಣೇಶ ಭಗವಂತರಾವ ದೇಶಪಾಂಡೆ	೩೫೭
೧೭೭	ಗಣೇಶ ಸೋಮೇಶ್ವರ ವಾಜಪೇಯ	೩೩೪
೧೭೭	ಗಂಗಾಧರ ಶಂಕರಗೌಡ ಪಾಟೀಲ	೨೨೫
೨೦೦	ಗೋವಿಂದ ಖೇಮುಸಾ ಹಬೀಬ	೩೦೫
೨೦೪	ಗೋವಿಂದಪ್ಪಗೌಡ ಬಸನಗೌಡ ಕರಿಗೌಡರ	೨೩೫
೨೦೫	ಗೌಡಪ್ಪಗೌಡ ವೀರನಗೌಡ ಪಾಟೀಲ	೨೬೭
೨೦೬	ಗೌಡಪ್ಪಗೌಡ ಶಿವನಗೌಡ ಗುರನಗೌಡರ	೩೪೧
೨೦೭	ಗೌಡಸಾಬ ಫಕೀರಸಾಬ ಪಿಂಜಾರ	೨೬೦
೨೧೯	ಗುಡ್ಡಪ್ಪ ಭೀಮಪ್ಪ ತಳವಾರ	೨೪೦
೨೧೨	ಗುರುನಾಥ ದಾಸೋ ಪಾಟೀಲ	೨೫೦
೨೧೪	ಗುರುನಾಥ ರಾಯಾಜಿ ಕುಲಕರ್ಣಿ	೩೧೫
೨೧೮	ಗುರುನಾಥ ತಿಮ್ಮನಗೌಡ ಪಾಟೀಲ	೨೫೭
೨೧೯	ಗುರುಪಾದಪ್ಪ ಪುಟ್ಟಪ್ಪ ಶಿವಜಟ್ಟಪ್ಪನವರ	೩೧೯
೨೨೪	ಗುರುಸಿದ್ದಪ್ಪ ಸಂಗಪ್ಪ ಮಳಗಿ	೩೨೩
೨೨೭	ಗುರುನಾಥ ಕೃಷ್ಣಾಜಿ ಕುಲಕರ್ಣಿ	೨೫೦
೨೨೮	ಗುರುನಾಥ ನಾರಾಯಣಭಟ್ಟ ಲೋಣಖಡಿ	೨೧೪
೨೨೯	ಗುರುನಾಥ ವಿಶೋಬಾ ಮ್ಹೂರೇವಾಡ	೨೫೨
೨೩೦	ಗುರುನಾಥಾಚಾರ್ಯ ಶಂಕರಾಚಾರ್ಯ ಪಂಡಿತ	೨೩೨
೨೩೨	ಗುರುಪಾದಗೌಡ ಗುರುನಿಂಗಗೌಡ ಪಾಟೀಲ	೨೪೦
೨೪೫	ಹನುಮಂತ ಕೃಷ್ಣ ಮೊರೆಪ್ಪನವರ	೨೬೧
೨೪೯	ಹನುಮಂತ ನಾರಾಯಣ ಕುಲಕರ್ಣಿ	೨೫೧
೨೫೦	ಹನುಮಂತ ನಾರಾಯಣರಾವ ಕೊಪ್ಪದ	೨೯೨
೨೫೧	ಹನುಮಂತ ಶಂಕರ ಮುತಾಲಿಕದೇಸಾಯಿ	೨೬೦
೨೫೪	ಹನುಮಂತಪ್ಪ ಬಾಳವ್ವ ತಳವಾರ	೨೪೧
೨೫೯	ಹನುಮಂತಪ್ಪ ಉಡಚಪ್ಪ ಕನಕಮ್ಮನವರ	೨೫೬

೨೬೦	ಹನುಮಪ್ಪ ವೀರಭದ್ರಪ್ಪ ಕುಸುಗಲ್	೩೨೧
